بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّي عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

ಸಂಚಿಕೆ: 06

# ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

11 ಫೆಬ್ರವರಿ 2021, 11 ತಬ್‌ಲೀಗ್ 1400 ತಬ್‌ಲೀಗ್ ಹಿಜರಿ ಶಮ್‌ಸಿ,
28 ಜಮಾದಿಉಸ್ಸಾನಿ 1442 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ وَبَارِكْ لَنَا فِيْ عُمْرِهٖ وَاَمْرِهٖ.

## ಅಲ್ಲಾಹನ ಉಪದೇಶ

مَا يَفْعَلُ اللّٰهُ بِعَذَابِكُمْ اِنْ شَكَرْتُمْ وَاٰمَنْتُمْ ؕ وَكَانَ اللّٰهُ شَاكِرًا عَلِيْمًا

*(ಅನ್ನಿಸಾಅ್:148)*

**ಅಂದರೆ: ನೀವು ಕೃತಜ್ಞರೂ ವಿಶ್ವಾಸಿಗಳೂ ಆಗಿದ್ದರೆ ಅಲ್ಲಾಹನು ನಿಮ್ಮನ್ನೇಕೆ ಶಿಕ್ಷಿಸುತ್ತಾನೆ? ಅಲ್ಲಾಹನು ಯೋಗ್ಯತೆ ಗೊತ್ತುಮಾಡುವವನೂ ಸರ್ವಜ್ಞನೂ ಆಗಿದ್ದಾನೆ.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

**ಹಝ್ರತ್ ರಸೂಲುಲ್ಲಾಹ್(ಸ) ರವರು ಸಜ್‌ದ ಬಂದ ವಚನದಲ್ಲಿ ಸಜ್‌ದ ಮಾಡುತ್ತಿದ್ದರು. ಸಹಾಬರು ಸಹ ಅವರ ಜೊತೆಯಲ್ಲಿ ಸಜ್‌ದ ಮಾಡುತ್ತಿದ್ದರು.**

(1075) ಹಝ್ರತ್ ಇಬ್ನು ಉಮರ್(ರ) ವರದಿ ಮಾಡುತ್ತಾರೆ. ನಬಿ(ಸ) ನಮಗೆ ಸಜ್‌ದ ಇರುವ ಅಧ್ಯಾಯ (ಸೂರ:) ಪಠಿಸಿ ಆಲಿಸಿದಾಗ ಸಜ್‌ದ ಮಾಡುತ್ತಿದ್ದರು. ಮತ್ತು ನಾವು ಸಹ ಸಜ್‌ದ ಮಾಡುತ್ತಿದ್ದೆವು. ಎಲ್ಲಿಯವರೆಗೆ ಎಂದರೆ ನಮ್ಮಲ್ಲಿ ಯಾರಿಗೂ ತನ್ನ ಹಣೆ ಇಡಲು ಜಾಗ ಸಿಗುತ್ತಿರಲಿಲ್ಲ.

(1073) ಹಝ್ರತ್ ಝೈದ್ ಬಿನ್ ಸಾಬಿತ್(ರ) ವರದಿ ಮಾಡುತ್ತಾರೆ. ಅವರು ಹೇಳಿದರು. ನಾನು ನಬಿ(ಸ) ರವರ ಮುಂದೆ ಸೂರ: ಅನ್ನಜಮ್ ಪಠಿಸಿದೆ. ಅವರು ಅದರಲ್ಲಿ ಸಜ್‌ದ್ ಮಾಡಲಿಲ್ಲ.

(1077) ಹಝ್ರತ್ ಉಮರ್(ರ) ಜುಮುಅ ದಿವಸ ಮಿಮ್‌ಬರ್(ಮೆಟ್ಟಿಲು) ಮೇಲೆ ನಿಂತುಕೊಂಡು ಸೂರ: ಅನ್ನಹ್ಲ್ ಪಠಿಸಿದರು. ಸಜ್‌ದ ಇರುವ ವಚನಕ್ಕೆ ತಲುಪಿದಾಗ ಮೆಟ್ಟಿಲಿನಿಂದ ಇಳಿದು ಸಜ್‌ದ ಮಾಡಿದರು. ಜನರು ಸಹ ಸಜ್‌ದ ಮಾಡಿದರು. ಎರಡನೆಯ ಜುಮುಅ ಬಂದಾಗ ಹಜ್‌ರತ್ ಉಮರ್(ರ) ಅದೇ ಸೂರ: ಪಠಿಸಿದರು. ಸಜ್‌ದ ಇರುವ ವಚನಕ್ಕೆ ತಲುಪಿದಾಗ ಹೇಳಿದರು. ಜನರೇ ನಾವು ಸಜ್‌ದ ಇರುವ ವಚನದಿಂದ ಮುಂದುವರೆಯುತ್ತೇವೆ. ಯಾರು ಸಜ್‌ದ ಮಾಡಿದರೋ ಅವರು ಒಳ್ಳೆಯದೇ ಮಾಡಿದ್ದಾರೆ. ಮತ್ತು ಯಾರು ಸಜ್‌ದ ಮಾಡಲಿಲ್ಲ ಅವರ ಮೇಲೆ ಯಾವ ಪಾಪವೂ ಇಲ್ಲ. ಹಝ್ರತ್ ಉಮರ್(ರ) ಸಜ್‌ದ ಮಾಡಲಿಲ್ಲ. ನಾಫೆ ಅವರು ಹಝ್ರತ್ ಉಮರ್ ಅವರಿಂದ ವರದಿ ಮಾಡುತ್ತಾರೆ. ಈ ಅಧಿಕಾಂಶವನ್ನು ತಿಳಿಸಿದರು. ಅಲ್ಲಾಹನು ಸಜ್‌ದ ಇರುವ ವಚನ ಬಂದರೆ ಸಜ್‌ದ ಮಾಡುವುದು ಕಡ್ಡಾಯಗೊಳಿಸಲಿಲ್ಲ. ಹೌದು ನಾವು ಬಯಸಿದರೆ ಮಾಡಬಹುದು. **(ಸಹೀ ಬುಖಾರಿ, ಸಂಪುಟ 2, ಕಿತಾಬ್ ಸುಜೂದುಲ್ ಖುರ್‌ಆನ್, ಮುದ್ರಣ ಖಾದಿಯಾನ್ 2006)**

## ಅಲ್ಲಾಹನು ನನಗೆ ನಾಲ್ಕು ರೀತಿಯ ದೃಷ್ಟಾಂತಗಳನ್ನು ನೀಡಿದ್ದಾನೆ. ಅದನ್ನು ನಾನು ಬಹಳ ಗೌರವದಿಂದ ಹಲವು ಸಲ ಬರೆದಿದ್ದೇನೆ ಮತ್ತು ಪ್ರಕಟಿಸಿದ್ದೇನೆ.

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ನಾನು ಪದೇ ಪದೇ ವಿವರಿಸಿರುತ್ತೇನೆ. ಅಲ್ಲಾಹನು ನನಗೆ ನಾಲ್ಕು ರೀತಿಯ ದೃಷ್ಟಾಂತಗಳನ್ನು ನೀಡಿದ್ದಾನೆ. ಮತ್ತು ಅದನ್ನು ನಾನು ಬಹಳ ಗೌರವದಿಂದ ಹಲವು ಸಲ ಬರೆದಿದ್ದೇನೆ ಹಾಗೂ ಪ್ರಕಟಪಡಿಸಿದ್ದೇನೆ.

ಪ್ರಥಮ: ಅರೇಬಿ ಭಾಷೆಯ ದೃಷ್ಟಾಂತ, ಈ ದೃಷ್ಟಾಂತ ಲಭಿಸಿದ ಸಂದರ್ಭವು ಒಮ್ಮೆ ಮುಹಮ್ಮದ್ ಹುಸೇನ್ (ಬಟಾಲ್ವಿ ಸಾಹಿಬ್) ಬರೆದಿದ್ದರು. ಈ ವಿನೀತನಿಗೆ ಅರಬಿಯ ಒಂದು ಅಕ್ಷರವು ತಿಳಿದಿರುವುದಿಲ್ಲ. ಹಾಗೂ ಎಂದೂ ಅರೇಬಿ ಬಲ್ಲವನಾಗಿದ್ದೇನೆ ಎಂಬ ದಾವೆ ಮಾಡಿರಲಿಲ್ಲ. ಅರಬಿ ಬರಹ ಮತ್ತು ವ್ಯಾಕರಣದಲ್ಲಿ ಮುಳುಗಿರುವವರು ಅದರ ಕಠಿಣತೆ ಚೆನ್ನಾಗಿ ಬಲ್ಲವರಾಗಿರುತ್ತಾರೆ ಮತ್ತು ಅದರ ಮಹಿಮೆಯು ಚೆನ್ನಾಗಿ ತಿಳಿದಿರುತ್ತಾರೆ. (ಮೌಲ್ವಿ ಅಬ್ದುಲ್ ಕರೀಮ್ ಸಾಹಿಬರತ್ತ ಸಂಕೇತವಿತ್ತು) ಅವರು ಪ್ರಾರಂಭದಿಂದಲೇ ನೋಡುತ್ತಿದ್ದಾರೆ. ಅಲ್ಲಾಹನು ಯಾವ ರೀತಿ ಪವಾಡ ರೀತಿಯಲ್ಲಿ ನನಗೆ ನೆರವನ್ನೀಯುತ್ತಿದ್ದಾನೆ. ಸಂದರ್ಭಕ್ಕೆ ತಕ್ಕಂತೆ ಉಚಿತವಾದ ಪದ ದೊರೆಯಲಿಲ್ಲವೆಂದರೆ ಎಷ್ಟೊಂದು ಕಠಿಣತೆ ಎದುರಿಸಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಅಲ್ಲಾಹನು ಆ ಪದಗಳನ್ನು ಅವತರಿಸಿ ಕೊಡುತ್ತಿದ್ದ. ಹೊಸ ಮತ್ತು ಕೃತಕಭಾಷೆ ಸುಲಭವಾಗಿ ಬಳಸಬಹುದು. ಆದರೆ ಶುದ್ಧಭಾಷೆ ಬಳಸುವುದು ತುಂಬ ಕಠಿಣವಾಗಿರುತ್ತದೆ. ಅಲ್ಲದೇ ಆ ಗ್ರಂಥಗಳನ್ನು ನಾವು ಬಹುಮಾನಗಳ ಪಂಥಹ್ವಾನಗಳೊಡನೆ ಪ್ರಕಟಿಸಿದ್ದೇನೆ. ನೀವು ಯಾರ ಸಹಕಾರವನ್ನು ಬೇಕಾದರು ಪಡೆಯಬಹುದು, ಭಾಷ ಪಂಡಿತರ ನೆರವು ಬೇಕಾದರೂ ಪಡೆದುಕೊಳ್ಳಿರಿ. ನನಗೆ ಅಲ್ಲಾಹನು ದೃಢಪಡಿಸಿದ್ದಾನೆ. ಅದಾಗ್ಯೂ ನಿಮ್ಮಿಂದ ಸಾಧ್ಯವಾಗುವುದಿಲ್ಲ ಎಂದು. ಏಕೆಂದರೆ ಪವಿತ್ರ ಖುರ್‌ಆನ್‌ನ ಸಾದೃಶ್ಯ ರೂಪದಲ್ಲಿ ಈ ದೃಷ್ಟಾಂತ ನನಗೆ ನೀಡಲಾಗಿದೆ.

ದ್ವಿತೀಯ: ಪ್ರಾರ್ಥನೆಗಳ (ದುಆ) ಸ್ವೀಕಾರ, ನಾನು ಅರಬಿ ಗ್ರಂಥಗಳ ರಚನೆಯ ನಡುವೆ ಅನುಭವಿಸಿದ್ದೇನೆ, ನನ್ನ ಎಷ್ಟೊಂದು ಪ್ರಾರ್ಥನೆಗಳು ಸ್ವೀಕಾರಗೊಂಡಿದೆ ಎಂದು. ಒಂದೊಂದು ಪದದ ಮೇಲೆ ದುಆ ಮಾಡಿದ್ದಾನೆ. ನಾನು ರಸೂಲುಲಾಹ್(ಸ) ರವರನ್ನು ಹೊರತಾಗಿ ಈ ಮಾತು ಹೇಳುತ್ತಿದ್ದೇನೆ. (ಏಕೆಂದರೆ ಅವರಿಂದಲೇ ಮತ್ತು ಅವರ ನೇತೃತ್ವದಿಂದಲೇ ಇವೆಲ್ಲ ಲಭಿಸಿದೆ) ಅಂದ ಹಾಗೆ ನಾನು ಖಡಾಖಂಡಿತವಾಗಿ ಹೇಳಬಹುದು. ತನ್ನಷ್ಟು ಪ್ರಾರ್ಥನೆಗಳು ಯಾರದ್ದು ಸಹ ಸ್ವೀಕೃತಗೊಂಡಿಲ್ಲ ನನ್ನ ಸ್ವೀಕೃತ ಪ್ರಾರ್ಥನೆಗಳು ಹತ್ತು ಸಾವಿರವೋ ಅಥವಾ ಎರಡು ಲಕ್ಷವೋ ಅಥವಾ ಹೆಚ್ಚೋ, ಕೆಲವು ಸ್ವೀಕೃತ ದೃಷ್ಟಾಂತಗಳು ಒಂದು ಲೋಕವೇ ಮನಗೊಂಡಂತಿದೆ.

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*

## ಮನಪರಿವರ್ತನೆಯಿಲ್ಲದೆ ಬಾರಿ ಕರ್ಮಗಳು ಫಲಪ್ರದವಾಗುವುದಿಲ್ಲ. ಕರ್ಮಗಳೊಂದಿಗೆ ಮನಶುದ್ಧಿಯೂ ಅನಿವಾರ್ಯವಾಗಿದೆ.

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) **ಇನ್ನಲ್ಲಝೀನ ಆಮನೂ ವ ಅಮಿಲುಸ್ಸಾಲಿಹಾತಿ ಯಹ್‌ದೀಹಿಮ್ ರಬ್ಬುಹುಮ್ ಬಿ ಈಮಾನಿಹಿಮ್** (ಯೂನುಸ್-10) ವ್ಯಾಖ್ಯಾನ ಮಾಡುತ್ತ ನುಡಿದರು. ಈ ವಚನದಲ್ಲಿ ಅಲ್ಲಾಹನು ಹೇಳಿದ್ದೇನೆಂದರೆ. . . "ವಾಸ್ತವ ಮಾರ್ಗದರ್ಶನವು ವಿಶ್ವಾಸದಿಂದ ದೊರೆಯುತ್ತದೆ. ಬರಿ ಕರ್ಮಗಳಿಂದ ಏನೂ ಆಗುವುದಿಲ್ಲ. ಮನಪರಿವರ್ತನೆ ಅವಶ್ಯವಾಗಿದೆ. ಒಬ್ಬ ಕಳ್ಳನು ಕದಿಯುವ ಇರಾದೆಯಿಂದ ಬಂದವನಾದರೆ ಅವನಿಗೆ ಸಂದರ್ಭ ಒದಗಿಬಾರದವ ಮಾತ್ರಕ್ಕೆ ಅವನು ಪ್ರಮಾಣಿಕನೆಂದು ಹೇಳಲಾಗುವುದಿಲ್ಲ. ಅದೇ ರೀತಿ ಒಬ್ಬನ ಹೃದಯವು ಬಹುದೇವಾರಾಧನೆಯಿಂದ ಮುಕ್ತವಾಗಿದೆ. ಆದರೆ ಅವನು ದೇವನ ಮುಂದೆ ಸಾಷ್ಟಾಂಗವೆರಗಲಿಲ್ಲ ಎಂದರೆ ಅವನಿಗೆ ಏಕದೇವ ವಿಶ್ವಾಸಿ ಎನ್ನಲಾಗುವುದಿಲ್ಲ ಕೆಲ ಮೂಢರ ಅನಿಸಿಕೆಯಾಗಿದೆ. ಇಸ್ಲಾಂ ಕರ್ಮಗಳಿಗೆ ಒತ್ತು ನೀಡುವುದಿಲ್ಲ. ಬದಲು ಕೇವಲ ವಿಶ್ವಾಸ (ಈಮಾನ್) ಹೊಂದಲು ಒತ್ತು ನೀಡುತ್ತದೆ ಎಂದು. ಈ ಮಾತು ಸರಿಯಲ್ಲ. ಇಸ್ಲಾಂ ಧರ್ಮವು ಒತ್ತು ನೀಡುವ ವಿಷಯವೆಂದರೆ-ಕರ್ಮಗಳೊಂದಿಗೆ ಮನಶುದ್ಧಿ ಅವಶ್ಯಕವಾಗಿದೆ. ಮನಶುದ್ಧಿ ಇಲ್ಲದಿದ್ದರೆ ಬರೀ ಕರ್ಮವು ಫಲಪ್ರದವಾಗುವುದಿಲ್ಲ. ಇಂತಹ ವಿಶ್ವಾಸ ಯಾವ ಪ್ರಯೋಜನವು ನೀಡುವುದಿಲ್ಲ. ವಾಸ್ತವದಲ್ಲಿ ಪರಿಶುದ್ಧತೆಯು ಹೃದಯ ಪಾವಿತ್ರ್ಯತೆ ಮತ್ತು ಭಾವನೆಗಳ ಪಾವಿತ್ರ್ಯತೆ ಆಗಿದೆ. ಈ ಮಾತು ಯಾವ

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ✿ شَرَّ السُّمُوْمِ عَدَاوَۃُ الصُّلَحَاءِ

## ಹೆನ್ರಿ ಮಾರ್ಟಿನ್ ಕ್ಲಾರ್ಕ್‌ಗೆ ಮುಬಾಹಲ ಸ್ವೀಕರಿಸಲು ಸಲಹೆ ಮತ್ತು ಬಹುಮಾನವಾಗಿ ಅರ್ಧ ಆಸ್ತಿಯನ್ನು ನೀಡಲು ಪಂಥಹ್ವಾನ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರು ಪಾದರಿ ಅಬ್ದುಲ್ಲ ಆಥಮ್‌ರೊಡನೆ ಅಮೃತ್‌ಸರದಲ್ಲಿ 1893ರ ಮೇ 22 ರಿಂದ 5ನೆ ಜೂನ್ 1893 ರವರೆಗೆ 15 ದಿವಸಗಳ ಕಾಲ "ಜಂಗ್ ಮುಖದ್ದಸ್" ಹೆಸರಿನಲ್ಲಿ ನಡೆದ ಚರ್ಚಾಕೂಟದ ವಿವರಗಳು ಈ ಪುಸ್ತಕದಲ್ಲಿ ನೀಡಿದ್ದೆವು. ಈ ಚರ್ಚಾಕೂಟದ ಆಯೋಜಕರು ಡಾ॥ ಹೆನ್ರಿ ಮಾರ್ಟಿನ್ ಕ್ಲಾರ್ಕ್ ಆಗಿದ್ದರು. ಆ ಸಮಯದಲ್ಲಿ ಪಂಜಾಬಿನ 13 ಪ್ರಸಿದ್ಧ ನಗರಗಳಲ್ಲಿ ಕ್ರೈಸ್ತರ ಬೃಹತ್ ಗಾತ್ರದ ಮಿಷನ್‌ಗಳು ಸ್ಥಾಪನೆಗೊಂಡಿದ್ದವು. ಅವುಗಳಲ್ಲಿ ಅಮೃತಸರದ ಮಿಷನ್ ಸಹ ಒಮದಾಗಿತ್ತು. ಹೆನ್ರಿ ಮಾರ್ಟಿನ್ ಕ್ಲಾರ್ಕ್ ಅಮೃತಸರ ಜಿಲ್ಲೆಯ ವೈದ್ಯಕೀಯ ಮಿಷನರಿ ಇನ್‌ಚಾರ್ಜ್ ವಹಿಸಿಕೊಂಡಿದ್ದರು. ಆಗ ಅವರು 1882 ರಲ್ಲಿ ಅಮೃತಸರ ವೈದ್ಯಕೀಯ ಮಿಷನ್‌ನ ಒಂದು ಶಾಖೆ ಜಂಡಿಯಾಲ ಜಿಲ್ಲಾ ಅಮೃತಸರದಲ್ಲು ಜಾರಿ ಮಾಡಿದರು. ಅದರಿಂದ ಅಲ್ಲಿ ಕ್ರೈಸ್ತರಿಗೆ ತುಂಬ ಪ್ರಗತಿ ಲಭಿಸಿತ್ತು. ಕ್ರೈಸ್ತ ಮಿಷನರಿಗಳು ಮುಸಲ್ಮಾನರೆಡೆ ಪ್ರಚಾರ ಮಾಡುತ್ತಿದ್ದರು. ಜಂಡಿಯಾಲದ ಮುಸಲ್ಮಾನರಾದ ಒಬ್ಬರು ಮಿಯಾ ಮುಹಮ್ಮದ್ ಬಕ್ಷ್ ಪಾಂದ ಅವರು ಒಂದಿಷ್ಟು ಕಲಿತವರಾಗಿದ್ದರು. ಮುಸಲ್ಮಾನರಿಗೆ ಕ್ರೈಸ್ತರ ಮೇಲೆ ಆಕ್ಷೇಪ ಎತ್ತಲು ಮತ್ತು ಪ್ರಶ್ನೆಗಳನ್ನು ಮಾಡಲು ಕಲಿಸಿಕೊಟ್ಟರು. ಅದರಿಂದ ಕ್ರೈಸ್ತ ಪ್ರಚಾರಕರು ಆತಂಕಗೊಂಡರು. ಮತ್ತು ಅವರು ಡಾ॥ ಹೆನ್ರಿ ಮಾರ್ಟಿನ್ ಕ್ಲಾರ್ಕ್‌ರಿಗೆ ಈ ವಿಷಯ ತಿಳಿಸಿದರು ಆಗ ಹೆನ್ರಿ ಮಾರ್ಟಿನ್ ಕ್ಲಾರ್ಕ್ ಅವರು ಮಿಯಾ ಮುಹಮ್ಮದ್ ಬಕ್ಷ್ ಅವರಿಗೆ ಒಂದು ಪತ್ರ ಬರೆದರು.

"ಜನಾಬ್ ಮನ್! ಸಲಾಂ, ಹೇಳುವುದೇನೆಂದೆರ ಇಂದಿನ ದಿನಗಳಲ್ಲಿ ಜಂಡಿಯಾಲ ಗ್ರಾಮದಲ್ಲಿ ಮಸೀಹರ ಮತ್ತು ಮುಸಲ್ಮಾನರ ಮಧ್ಯೆ ಬಹಳಷ್ಟು ಚರ್ಚೆಗಳು ನಡೆಯತೊಡಗಿವೆ. ಕೆಲ ನಮ್ಮ ಮಹನಿಯರು ನಮ್ಮ ಕ್ರೈಸ್ತ ಧರ್ಮದ ಮೇಲೆ ಆಕ್ಷೇಪ ಮಾಡುತ್ತಿದ್ದಾರೆ ಮತ್ತು ಪ್ರಶ್ನೆಗಳನ್ನು ಮಾಡುತ್ತಿದ್ದಾರೆ ಮತ್ತು ಉತ್ತರ ಬಯಸುತಿದ್ದಾರೆ. ಆದುದರಿಂದ ನಾನು ಭಾವಿಸುವುದೇನೆಂದರೆ ಒಂದು ಸಾರ್ವಜನಿಕ ಸಭೆ ಏರ್ಪಡಿಸಿದರೆ ಉತ್ತಮವಾದೀತು ಎಂದು. ಅದರಲ್ಲಿ ಇಸ್ಲಾಂ ಧರ್ಮ, ಮುಸಲ್ಮಾನರು ಮತ್ತು ಇತರ ಸಜ್ಜನರು ಒಳಗೊಂಡಿರಬೇಕು. ಅದೇ ರೀತಿ ಕ್ರೈಸ್ತರ ಕಡೆಯಿಂದಲೂ ವರಿಷ್ಠರು ಸೇರಬೇಕು, ಉಭಯತ್ರರು ಸೇರಿ ನಮ್ಮ ನಡುವೆ ಇರುವ ಭಿನ್ನಾಭಿಪ್ರಾಯಗಳ ಬಗ್ಗೆ ಚರ್ಚಿಸಿ ಒಂದು ನಿರ್ಣಯಕ್ಕೆ ಬರುವಂತಾಗಬೇಕು ಸತ್ಯ ಮಿಥ್ಯ ಯಾವುದು ಸಾಬೀತಾಗಬೇಕು. ಒಂದು ವೇಳೆ ಇಸ್ಲಾಂ ಧರ್ಮದವರು ಇಂತಹ ಚರ್ಚಾಕೂಟದಲ್ಲಿ ಭಾಗವಹಿಸದಿದ್ದರೆ ಅಥವಾ ಭಾಗವಹಿಸಲು ಇಷ್ಟಪಡದಿದ್ದರೆ ಭವಿಷ್ಯದಲ್ಲಿ ನಮ್ಮ ಮೇಲೆ ಆಕ್ಷೇಪ ಎತ್ತಬಾರದು. ಪ್ರಚಾರದ ಸಮಯದಲ್ಲಿ ಅಥವ ಇತರ ಸಂದರ್ಭಗಳಲ್ಲಿ ಅನವಶ್ಯಕ ಚರ್ಚೆಗೆ ಎಡೆಕೊಡಬಾರದು. ಮೌನವಾಗಿರಬೇಕು. ದಯವಿಟ್ಟು ಈ ಪತ್ರದ ಉತ್ತರ ಅತಿಶೀಘ್ರವಾಗಿ ನೀಡಬೇಕು. ಏಕೆಂದರೆ ನೀವು ನಮ್ಮ ಈ ಆಹ್ವಾನ ಸ್ವೀಕರಿಸಿದರೆ ಆ ಸಭೆಯನ್ನು ಏರ್ಪಡಿಸಲು ಮತ್ತು ಅದರಲ್ಲಿ ಚರ್ಚಿಸಬೇಕಾದ ವಿಷಯಗಳ ಬಗ್ಗೆ ವ್ಯವಸ್ಥೆ ಮಾಡಬೇಕಾಗಿದೆ. (ಹುಜ್ಜತುಲ್ ಇಸ್ಲಾಂ, ರೂಹಾನಿ ಖಝಾಈನ್, ಸಂಪುಟ–6, ಪುಟ–60)

ಮಿಯಾ ಮುಹಮ್ಮದ್ ಬಕ್ಷ್ ಪಾಂದ ಸಾಹಿಬ್ ಈ ಪರಿಸ್ಥಿತಿಗಳನ್ನು ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಅವಗಾಹನೆಗೆ ತರುತ್ತ ಬರೆದರು. ಕೆಲ ಅವಧಿಯಿಂದ ಜಂಡಿಯಾಲ ಗ್ರಾಮದ ಕ್ರೈಸ್ತರು ತುಂಬ ಗೊಂದಲಗಳನ್ನು ಎಬ್ಬಿಸುತ್ತಿದ್ದಾರೆ. ಅಷ್ಟೇ ಅಲ್ಲ. ಇಂದು 11 ಏಪ್ರಿಲ್ 1893 ರಂದು ಜಂಡಿಯಾಲ ಕ್ರೈಸ್ತರ ಪರವಾಗಿ ಡಾ॥ ಮಾರ್ಟಿನ್ ಕ್ಲಾರ್ಕ್ ಸಾಹಿಬ್ ಅಮೃತಸರ ನನ್ನ ಹೆಸರಿನಲ್ಲಿ ರಿಜಿಸ್ಟ್ರಾರ್ ರೂಪದಲ್ಲಿ ಒಂದು ಪತ್ರವನ್ನು ಕಳುಹಿಸಿದ್ದಾರೆ. ಜಂಡಿಯಾಲ ಇಸ್ಲಾಂ ಬಾಂಧವರು ತಮ್ಮ ಮತಪಂಡಿತರ ಹಾಗೂ ಇತರ ಸಜ್ಜನರ ಉಪಸ್ಥಿಯಿಯಲ್ಲಿ ಒಂದು ಸಭೆ (ಜಲ್ಸ) ಏರ್ಪಡಿಸಬೇಕು ಮತ್ತು ಸತ್ಯ ಧರ್ಮವನ್ನು ಸಂಶೋಧಿಸಬೇಕು. ಇಲ್ಲವಾದರೆ ಮುಂದೆ ಭವಿಷ್ಯದಲ್ಲಿ ಮೌನವಹಿಸಬೇಕು. ಆದುದರಿಂದ ತಮ್ಮ ಸೇವೆಯಲ್ಲಿ ಭಿನ್ನವಿಸಿಕೊಳ್ಳುವುದೇನೆಂದರೆ ಜಂಡಿಯಾಲ ಇಸ್ಲಾಂ ಬಾಂಧವರು ತುಂಬ ದುರ್ಬಲರು ಹಾಗೂ ಬಡವರಾಗಿದ್ದಾರೆ. ಆದುದರಿಂದ ತಮ್ಮ ಸಾನಿಧ್ಯದಲ್ಲಿ ಬೇಡಿಕೊಳ್ಳುತ್ತೇನೆ. ತಾವು ಜಂಡಿಯಾಲ ಇಸ್ಲಾಂ ಬಾಂಧವರಿಗೆ ನೆರವನ್ನು ನೀಡಬೇಕು. ಇಲ್ಲದಿದ್ದರೆ ಇಸ್ಲಾಮ್ ಧರ್ಮದ ಮೇಲೆ ಕಲೆ ಉಂಟಾಗುವುದು. ಅಂತೆಯೇ ಕ್ರೈಸ್ತರ ಈ ಪತ್ರವನ್ನು ವಿಚಾರಿಸಿಕೊಂಡು ಅವರಿಗೆ ಯಾವ ರೀತಿಯಲ್ಲಿ ಉತ್ತರ ನೀಡಬೇಕೆಂದು ಸಲಹೆ ನೀಡಬೇಕು." (ಹುಜ್ಜತುಲ್ ಇಸ್ಲಾಂ, ರೂಹಾನಿ ಖಝಾಯಿನ್ ಸಂಪುಟ 6, ಪುಟ 59)

ಡಾ॥ ಪಾದರ್ ಮಾರ್ಟಿನ್ ಕ್ಲಾರ್ಕ್ ಬಹುಶಃ ಜಂಡಿಯಾಲದ ದುರ್ಬಲ ಮುಸಲ್ಮಾನರ ಮೇಲೆ ಒತ್ತಡ ಹೇರಿ ಮತ್ತು ಅವರಿಗೆ ಬೆದರಿಕೆ ಒಡ್ಡಿ ಕ್ರೈಸ್ತರ ಪಾಳಯದಲ್ಲಿ ಸೇರಿಸಿಕೊಳ್ಳಬೇಕು ಎಂದು ಬಯಸುತ್ತಿದ್ದರೇನು. ಅವರು ಈ ಯುಕ್ತಿ ಅವರಿಗೆ ತಿರುಗುಬಾಣ ಆಗಬಹುದೆಂದು ಊಹಿಸಲೂ ಇರಲಿಲ್ಲ. ಮತ್ತು ಅವರಿಗೆ ಅಲ್ಲಾಹನ ಹುಲಿ– **ಜರಿಯುಲ್ಲಾಹು ಫೀ ಹುಲಲಿಲ್ ಅಂಬಿಯಾಯಿ,** ಅವರೊಡನೆ ಎದುರಿಸಬೇಕಾಗುವುದು, ಇದರಿಂದ ಲೋಕವಿರುವವರೆಗೆ ಕ್ರೈಸ್ತರ ಹಣೆಯ ಮೇಲೆ ಅಪಮಾನದ ಮತ್ತು ಖಿನ್ನತೆಯ ಚುಕ್ಕೆ ಬೀಳುವುದು ಎಣಿಸಿರಲಿಕ್ಕಿಲ್ಲ. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಇಂತಹ ಸಂದರ್ಭಗಳನ್ನು ಸಂತೋಷದಿಂದ ನಿರೀಕ್ಷಿಸುತ್ತಿದದರು. ಇಂತಹ ಸುವರ್ಣ ಅವಕಾಶ ಹೇಗೆ ತಾನೆ ಬಿಡಲು ಸಾಧ್ಯವಿತ್ತು. ಮುಹಮ್ಮದ್ ಬಕ್ಷ್ ಚಾಂದ ಸಾಹಿಬ್ ಅವರ ಪತ್ರ ಪಡೆಯುತ್ತಿದ್ದಂತೆಯೇ ಎಷ್ಟೊಂದು ಸಮಂಜಸ ರೀತಿಯಲ್ಲಿ ದಾರಿ ಮಾಡಿಕೊಟ್ಟರೆಂದರೆ ಪಾದರಿ ಮಾರ್ಟಿನ್ ಕ್ಲಾರ್ಕ್ ಬಯಸಿಯೂ ಚರ್ಚಾಕೂಟದ ಆಯೋಜನೆ ತಳ್ಳಿ ಹಾಕಲು ಆಗದಂತಾಯಿತು. ಅವರು ಪಾದರಿ ಮಾರ್ಟಿನ್ ಕ್ಲಾರ್ಕ್‌ರೊಡನೆ ಪತ್ರ ವ್ಯವಹಾರ ಪ್ರಾರಂಭಿಸಿದರು. 15 ಜನರ ಒಳಗೊಂಡ ಒಂದು ಗುಂಪು ಅವರ ಬಳಿ ಚರ್ಚಾಕೂಟದ ಶರತ್ತು, ನಿಯಮಗಳನ್ನು ಸೃಷ್ಟಿಸಲು ಕಳುಹಿಸಿದರು. ಅದರಲ್ಲಿ ಮಿಯಾ ಮುಹಮ್ಮದ್ ಬಕ್ಷ್ ಚಾಂದ ಸಾಹಿಬರು ಸಹ ಒಳಗೊಂಡಿದ್ದರು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಡಾ॥ ಪಾದರಿ ಕ್ಲಾರ್ಕ್ ಸಾಹಿಬರ "ಜಂಗ್ ಮುಕದ್ದಸ್" (ಧರ್ಮಯುದ್ಧ) ಮತ್ತು ಅವರನ್ನು ಎದುರಿಸಲು ಜಾಹೀರಾತು ನೀಡಿ ಬರೆದರು.

ಡಾ॥ ಸಾಹೇಬರಿಗೆ ಸ್ಪಷ್ಟಪಡಿಸುವುದೇನೆಂದರೆ, ಪತ್ರಗಳ ಮುಖಾಂತರ ತಾವು ಇಸ್ಲಾಂ ಧರ್ಮದ ಮತ ಪಂಡಿತರೊಡನೆ ಒಂದು "ಜಂಗ್–ಇ–ಮುಖದ್ದಸ್" (ಧರ್ಮಯುದ್ಧ) ಆಯೋಜಿಸುವ ಸಿದ್ಧತೆಯಲ್ಲಿರುವಿರಿ ಎಂದು ತಿಳಿದು ಬಂದಿದೆ. ಅವರು ತಮ್ಮ ಪತ್ರದಲ್ಲಿ ಈ ಯುದ್ಧವು ಒಂದು ನಿರ್ಣಾಯಕ ಹಂತಕ್ಕೆ ತಲುಪಿಸಬೇಕು ಎಂಬ ಇಂಗಿತ ನೀಡಿದ್ದಾರೆ. ಅಂತೆಯೇ ಈ ಬೆದರಿಕೆಯು ಕೊಟ್ಟಿದ್ದಾರೆ. ಇಸ್ಲಾಂ ಮತಪಂಡಿತರು ಈ ಯುದ್ಧದಲ್ಲಿ ವಿಮುಖರಾದರೆ ಅಥವಾ ಸೋಲುಂಟಾದರೆ ಭವಿಷ್ಯದಲ್ಲಿ ಮಸೀಹಿ ಪಂಡಿತರ ಮುಂದೆ ಬರುವ ಹಕ್ಕು ಕಳೆದುಕೊಳ್ಳುವರು ಅಥವಾ ತಮ್ಮ ಧರ್ಮವನ್ನು ಸತ್ಯ ಧರ್ಮ ಎಂದು ಸಾರಲು ಅಥವಾ ಕ್ರೈಸ್ತ ಸಮುದಾಯದ ಮುಂದೆ ನಿಲ್ಲಲಾರರು. ಅಂದ ಹಾಗೆ ಈ ವಿನೀತನು ಈ ಆಧ್ಯಾತ್ಮಿಕ ಧರ್ಮ ಯುದ್ಧಗಳಿಗಾಗಿಯೇ ನಿಯುಕ್ತಗೊಂಡವನಾಗಿದ್ದಾನೆ ಮತ್ತು ಅಲ್ಲಾಹನಿಂದ ಅವನ ವಾಣಿ ಪಡೆದು ಇದು ಸಹ ಬಲ್ಲವನಾಗಿದ್ದೇನೆ. ಪ್ರತಿಯೊಂದು ಕ್ಷೇತ್ರದಲ್ಲಿ ವಿಜಯವು ನಮ್ಮದೆ ಆಗಿರುತ್ತದೆ. ಆದುದರಿಂದ ಸಂಕೋಚವಿಲ್ಲದೆ ಡಾ॥ ಸಾಹಿಬರಿಗೆ ಪತ್ರಗಳ ಮೂಲಕ ತಿಳಿಸಲಾಗಿದೆ. ನಾವು ಬಯಸುವುದು ಮತ್ತು ನಮ್ಮ ಆಶಯವಾಗಿದೆ. ಈ ಯುದ್ಧ ಏರ್ಪಟ್ಟು ಸತ್ಯ ಯಾವುದು, ಮಿಥ್ಯ ಯಾವುದು ಬಹಿರಂಗೊಳ್ಳುವಂತಾಗಲಿ. (ಅದೇ ಪುಟ 44)

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಚರ್ಚೆಯ ನಂತರ ಮುಬಾಹಲಕ್ಕೆ ಸಲಹೆ ನೀಡುತ್ತ ಬರೆದರು.

"ವರ್ಷಾನುಗಟ್ಟಲೆಯ ಅನುಭವದಿಂದ ಈ ಮಾತು ಸಾಬೀತುಗೊಂಡಿದೆ. ಎಷ್ಟೇ ಸಮಂಜಸ ರೀತಿಯಲ್ಲಿ ಸಾಕ್ಷ್ಯಗಳೊಂದಿಗೆ ಚರ್ಚೆಯಾಗಲಿ ಮತ್ತು ಒಂದು ಗುಂಪು ಅಧಿಪತ್ಯ ಸಾಧಿಸಲಿ. ಆದರೂ ಸಹ ಎದುರಾಳಿ ಬಳಗವು ಸೋಲು ಒಪ್ಪಿಕೊಳ್ಳುವುದಿಲ್ಲ. ಬದಲು ಚರ್ಚಾ ವಿಷಯುಗಳನ್ನು ಉತ್ಪರೀಕ್ಷೆಯೊಂದಿಗೆ ತಮ್ಮ ಬರಹವನ್ನು ಪ್ರಕಟಪಡಿಸುತ್ತಾರೆ. ಹೀಗೆ ತಮ್ಮ ಭಗೀರಥ ಪ್ರಯತ್ನಗಳಿಂದ ನಾವೇ ವಿಜಯಿಯಾಗಿದ್ದೇವೆ ಎಂಬ ಭ್ರಮೆ ಹುಟ್ಟು ಹಾಕುತ್ತಾರೆ. ಹೀಗಾದರೆ ಒಬ್ಬ ವಿವೇಕವಂತನು ಭಾವಿಸಿಕೊಳ್ಳುತ್ತಾನೆ. ಎಲ್ಲ ಚರ್ಚಾ ಕೂಟಗಳಂತೆಯೇ ಇದೊಂದು ಎಂದು ಭಾವಿಸಿದಂತಾಗುತ್ತದೆ.

ಈ ಕಾರಣಗಳನ್ನು ಮನದಲ್ಲಿರಿಸಿ ಡಾ॥ ಸಾಹಿಬರಿಗೆ ರಿಜಿಸ್ಟ್ರ ಪತ್ರ ಮುಖಾಂತರ ಸಲಹೆ ನಿಡಲಾಗಿತ್ತು. ಉಭಯತ್ರರ 6, 6 ದಿನಗಳ ಚರ್ಚೆ ಮುಗಿಸಿಕೊಂಡ ನಂತರ ಅದರಲ್ಲಿ ಮುಬಾಹಲವು ಸೇರಿಸಿಕೊಳ್ಳಬೇಕು. ಅದು ಕೇವಲ ಇಂತಿಷ್ಟೇ ಸಾಕು. ಉಭಯತ್ರರು ತಮ್ಮ ಧರ್ಮದ ಪರವಾಗಿ ಅಲ್ಲಾಹನ

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಅಲ್ಲಾಹನಿಗಾಗಿ ಖರ್ಚು ಮಾಡುವುದನ್ನು ವ್ಯರ್ಥಗೊಳಿಸಲ್ಪಡುವುದಿಲ್ಲ. ಬದಲಿಗೆ, ಇದು ಅಲ್ಲಾಹನು ಹಲವು ಪಟ್ಟು ವರ್ಧಿಸಿ ಕೊಡುವಂತಹ ಸಾಲವಾಗಿದೆ.**

**ವಕ್ಫೇ ಜದೀದಿನ 63ನೇ ವರ್ಷದಲ್ಲಿ ವಿಶ್ವದಾದ್ಯಂತ ಅಹ್ಮದಿಯ ಜಮಾಅತ್ 1 ಕೋಟಿ 5 ಲಕ್ಷ 30 ಸಾವಿರ ಪೌಂಡ್ ಚಂದವಾಗಿ ತ್ಯಾಗ ನೀಡಿದಾದೆರ.**

**ಅಲ್ಲಾಹನ ಧರ್ಮದ ಪ್ರಚಾರಕ್ಕಾಗಿ, ಸೃಷ್ಟಿಗಳ ಸೇವೆಗಾಗಿ ಧನತ್ಯಾಗಗಳನ್ನು ಮಾಡುವುದು ಶ್ರೇಷ್ಠವಾದ ಒಳಿತಾಗಿದೆ ಮತ್ತು ಅಲ್ಲಾಹನು ಅದಕ್ಕೆ ಪ್ರತಿಫಲ ನೀಡದೇ ಇರುವುದಿಲ್ಲ.**

**ಅಲ್ಲಾಹನಿಗಾಗಿ, ಅವನ ಸಂಪ್ರೀತಿಗಾಗಿ ಅವನ ಮಾರ್ಗದಲ್ಲಿ ಖರ್ಚು ಮಾಡುವುದರಿಂದ ಮನಸ್ಸಮಾಧಾನ ಸಿಗುವುದಲ್ಲದೆ, ಅಲ್ಲಾಹನ ಸಂಪ್ರೀತಿಗಾಗಿ ನೀಡಲ್ಪಟ್ಟ ಆ ಹಣವನ್ನು ಅಲ್ಲಾಹನು ವಿಸ್ಮಯಕರವಾದ ರೀತಿಯಲ್ಲಿ ಮರಳಿ ನೀಡುತ್ತಾನೆ ಎಂಬುದು ಎಲ್ಲ ವಿಭಾಗದ ಅಹ್ಮದಿಯರ ಸ್ವಂತ ಅನುಭವವಾಗಿದೆ. ಕೇವಲ ತ್ಯಾಗಗಳನ್ನು ಮಾಡುವ, ಎಂದರೆ ಕೇವಲ ತ್ಯಾಗ ಮಾಡುವ ಉದ್ದೇಶದಿಂದ ತ್ಯಾಗ ಮಾಡುವ, ಕೇವಲ ಅಲ್ಲಾಹನ ಸಂಪ್ರೀತಿ ಸಿಗಬೇಕೆಂದು ಬಯಸುವ ಹಲವಾರು ಅಹ್ಮದಿಯರು ಇದ್ದಾರೆ. ಲೌಕಿಕವಾದ ಸಂಪತ್ತಿನ ರೂಪದಲ್ಲಿ ಅದರ ಪ್ರತಿಫಲ ಸಿಗಬೇಕೆಂಬ ಯೋಚನೆ ಸಹ ಅವರ ಹೃದಯದಲ್ಲಿ ಇರುವುದಿಲ್ಲ. ಆದರೆ ಶರತ್ತೇನೆಂದರೆ, ಸದುದ್ದೇಶದೊಂದಿಗೆ ಅಲ್ಲಾಹನ ಸಂಪ್ರೀತಿಯನ್ನು ಪಡೆಯಲಿಕ್ಕಾಗಿ ತ್ಯಾಗಗಳನ್ನು ಮಾಡಬೇಕು ಮತ್ತು ಅದಕ್ಕಾಗಿ ಅಲ್ಲಾಹನ ಇತರ ಆಜ್ಞೆಗ್ಗಳನ್ನು ಪಾಲಿಸಬೇಕು ಮತ್ತು ಒಳಿತುಗಳನ್ನು ಸಹ ಮಾಡಬೇಕು.**

**ನಿಷ್ಠೆಯಿಂದ ತ್ಯಾಗಗಳನ್ನು ಮಾಡಲು ತಯಾರಿರುತ್ತಾರೆ. ನಾವು ಜಮಾಅತಿನ ಹೆಸರನ್ನು ಲೋಕದಿಂದ ಅಳಿಸುವೆವು ಎಂದು ನಮ್ಮ ವಿರೋಧಿಗಳು ಹೇಳುತ್ತಾರೆ. ಅಲ್ಲಾಹನನ್ನು ಈ ರೀತಿಯಲ್ಲಿ ಪ್ರೀತಿಸುವ ಮತ್ತು ನಿಷ್ಠೆ ತೋರಿಸುವವರನ್ನು ಅಳಿಸಲು ಯಾರಿಗೆ ಸಾಧ್ಯ?**

**"ವಕ್ಫೇ ಜದೀದಿನ 64ನೇ ವರ್ಷದ ಆರಂಭದ ಸುವರ್ಣ ಸಂದರ್ಭದಲ್ಲಿ ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಸಾಂಪತ್ತಿಕ ತ್ಯಾಗಗಳ ಪ್ರಸ್ತಾವನೆ."**

**ಅಲ್‌ಜೀರಿಯಾ ಮತ್ತು ಪಾಕಿಸ್ತಾನದ ಅಹ್ಮದಿಯರಿಗಾಗಿ ದುಆ ಮಾಡುವ ವಿಶೇಶ ಕೋರಿಕೆ**

**ವಿಶೇಷವಾಗಿ ಪಾಕಿಸ್ತಾನದಲ್ಲಿರುವ ಅಹ್ಮದಿಯರು ಐಚ್ಛಿಕ ಸತ್ಕರ್ಮಗಳನ್ನು ಮತ್ತು ದುಆಗಳನ್ನು ಹೆಚ್ಚು ಹೆಚ್ಚು ಮಾಡಬೇಕು. ಈ ದುಆಗಳಲ್ಲಿ ರಬ್ಬಿ ಕುಲ್ಲಿ ಶೈಇನ್ ಖ಼ಾದಿಮುಕ ರಬ್ಬಿ ಫಹ್‌ಫಝ಼್‌ನೀ ವನ್ಸುರ್‌ನೀ ವರ್‌ಹಮ್‌ನೀ ಎಂಬ ದುಆವನ್ನು ಅಧಿಕವಾಗಿ ಮಾಡಿರಿ.ಅಲ್ಲಾಹುಮ್ಮ ಇನ್ನಾ ನಜ್‌ಅಲುಕ ಫೀ ನುಹೂರಿಹಿಂ ವ ನಊಧುಬಿಕ ಮಿನ್ ಶುರೂರಿಹಿಂ ಎಂಬ ದುಆ ಸಹ ಹೆಚ್ಚಾಗಿ ಮಾಡಿರಿ. ಅಲ್ಲಾಹನು ಅವರಿಗೆ ಸೌಭಾಗ್ಯ ನೀಡಲಿ ಮತ್ತು ಬೇಗನೇ ಅಲ್ಲಿನ ಸ್ಥಿತಿಗತಿಗಳನ್ನು ಅಲ್ಲಾಹನು ಸರಿಪಡಿಸಲಿ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **08–01–2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

**ಮಂಧ಼ಲ್ಲಧ಼ೀ ಯುಖ್‌ರಿಝುಲ್ಲಾಹ ಖರ್‌ಝನ್ ಹಸನನ್ ಫಯುಝ಼ಾಇಫಹೂ ಲಹೂ ಅಝ಼್ಆಫನ್ ಕಸೀರ.ವಲ್ಲಾಹು ಯಖ್‌ಬಿಝು ವಯಬ್‌ಸುತು ವಇಲೈಹಿ ತುರ್‌ಜಊನ್.**

ಎಂದರೆ, (ತನ್ನ ಸಂಪತ್ತಿನಂದ) ಅಲ್ಲಾಹನಗಾಗಿ ಉತ್ತಮವಾದ ಒಂದಂಶವನ್ನು ಮುರಿದು ಕೊಡುವವರು ಯಾರಿದ್ದಾರೆ? ಹಾಗೆ ಮಾಡುವುದಾದರೆ, ಅವನು (ಅಲ್ಲಾಹನು) ಅದನ್ನು ಅವನಿಗೆ ಅನೇಕ ಪಟ್ಟು ಹೆಚ್ಚಿಸಿ ಕೊಡುವನು. ಅಲ್ಲಾಹನು (ಧನವನ್ನು) ಪಡೆದು ಅದನ್ನು ವೃದ್ಧಿಗೊಳಿಸಿ ಕೊಡುತ್ತಾನೆ. (ಇದು ಅವನ ಕ್ರಮವಾಗಿದೆ). (ಕೊನೆಗೆ) ಅವನೆಡೆಗೆಯೇ ನೀವು ಮರಳಿಸಲ್ಪಡುವಿರಿ. ಈ ಆಯತ್ತಿನಲ್ಲಿ ಅಲ್ಲಾಹನಿಗೆ ಸಾಲಕೊಡುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಅಲ್ಲಾಹನಿಗೆ ಮನುಷ್ಯನ ಹಣದ ಆವಶ್ಯಕತೆಯಿದೆ ಮತ್ತು ತನ್ನ ಆವಶ್ಯಕತೆಯನ್ನು ಪೂರೈಸಲು ಅವನು ಸಾಲವನ್ನು ಬೇಡುತ್ತಿದ್ದಾನೆಂದು ಇದರ ಅರ್ಥವಲ್ಲ. ಸಾಲವೆಂಬುವುದರ ಸಾಮಾನ್ಯ ಅರ್ಥ ನಾವು ಕೊಡುವ ಮತ್ತು ಪಡೆಯುವ ಸಾಲವಾಗಿದೆ. ಆದರೆ ಸಾಲವೆಂದು ಅರ್ಥ ಕೊಡಲಾಗುವ ಅರಬಿ ಪದವಾದ "ಖರ್ಝ್"ಗೆ ಒಳ್ಳೆಯ ಅಥವಾ ಕೆಟ್ಟ ಪ್ರತಿಫಲವೆಂಬ ಅರ್ಥವೂ ಇದೆ. ಇಲ್ಲಿ ಇದರ ಅರ್ಥವೇನೆಂದರೆ, ಅಲ್ಲಾಹನು ಅತ್ಯುತ್ತಮವಾದ ಪ್ರತಿಫಲ ನೀಡುವಂತಾಗಲು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದು.

ಆದ್ದರಿಂದ ಅಲ್ಲಾಹನಿಗಾಗಿ ಖರ್ಚು ಮಾಡುವರಾದರೆ, ಅಲ್ಲಾಹನಿಗೆ ನೀಡುವರಾದರೆ ಅಲ್ಲಾಹನು ಅದರ ಅತ್ಯುತ್ತಮ ಪ್ರತಿಫಲವನ್ನು ದಯಪಾಲಿಸುವನು. ಪವಿತ್ರ ಖುರ್‌ಆನಿನಲ್ಲಿ ಹಲವೆಡೆ ಅಲ್ಲಾಹನು ಧನತ್ಯಾಗದ ಬಗ್ಗೆ ಪ್ರಸ್ತಾಪಿಸಿದ್ದಾನೆ. ಧರ್ಮಕ್ಕಾಗಿ ಅಥವಾ ಅಲ್ಲಾಹನ ಸೃಷ್ಟಿಯ ಉನ್ನತಿಗಾಗಿ ಖರ್ಚು ಮಾಡುವುದನ್ನು ಸ್ವತಃ ಅಲ್ಲಾಹನಿಗೆ ಖರ್ಚು ಮಾಡುವುದಕ್ಕೆ ಸಮವೆಂದು ಹೇಳಿದ್ದಾನೆ. ಅಲ್ಲಾಹನಿಗಾಗಿ ಖರ್ಚು ಮಾಡುವುದನ್ನು ವ್ಯರ್ಥಗೊಳಿಸಲ್ಪಡುವುದಿಲ್ಲ. ಬದಲಿಗೆ, ಇದು ಅಲ್ಲಾಹನು ಹಲವು ಪಟ್ಟು ವರ್ಧಿಸಿ ಕೊಡುವಂತಹ ಸಾಲವಾಗಿದೆ. ಅಲ್ಲಾಹನಿಗೆ ಯಾವುದೇ ಸಾಲದ ಆವಶ್ಯಕತೆಯಿದೆ ಎಂದು ಯಾರೂ ಭಾವಿಸದಿರಲಿ. ಅಲ್ಲಾಹನು ಸ್ವತಃ ಪರಿಪಾಲಕನಾಗಿದ್ದಾನೆ. ಸಕಲ ಲೋಕಗಳನ್ನು ಪರಿಪಾಲಿಸುವವನೂ ಎಲ್ಲರಿಗೂ ಕೊಡುವವನೂ ಆಗಿದ್ದಾನೆ. ಅವನಿಗೆ ಯಾರ ಆವಶ್ಯಕತೆಯೂ ಇಲ್ಲ. ಅಲ್ಲಾಹನು ತನಗಾಗಿ ಸಾಲವೆಂಬ ಪದವನ್ನು ಉಪಯೋಗಿಸುವಾಗ ಅದರ ಅರ್ಥ ನಾವು ಅವನ ಮಾರ್ಗದಲ್ಲಿ ಖರ್ಚು ಮಾಡಿಕೊಂಡು ಅವನ ಅಗಣಿತವಾದ ಅನುಗ್ರಹಗಳನ್ನು ಪಡೆಯುವವರಾಗಬೇಕು ಎಂದಾಗಿದೆ. ಯಾರು ಅವನ ಮಾರ್ಗದಲ್ಲಿ ಉತ್ತಮವಾದ ಸಾಲವನ್ನು ನೀಡುವರು ಎಂದು ಕೇಳಿದ್ದಾನೆ. ಈ ಸವಾಲನ್ನು ಕೇಳಿಕೊಂಡು ಅವನ ಮಾರ್ಗದಲ್ಲಿ ಖರ್ಚುಮಾಡಿ ಅವನ ಅಪರಿಮಿತವಾದ ಅನುಗ್ರಹಗಳ ವಾರಸುದಾರರಾಗಲು ಮತ್ತು ಆಗುತ್ತಿರಲು ಅವನು ಪ್ರೇರೇಪಿಸುತ್ತಾನೆ. ಮುಂದೆ ಅದನ್ನು ಅವನೇ ವಿಶದೀಕರಿಸಿದ್ದಾನೆ. ಅವನು ಈ ಸಾಲವನ್ನು ಅವನ ಬಳಿ ಇರಿಸಲು ಅವನ ಆವಶ್ಯಕತೆಗಳನ್ನು

ಪೂರೈಸಲು ಬೇಡುತ್ತಿಲ್ಲ. ಬದಲಿಗೆ ಅದನ್ನು ನಮಗೆ ಹಲವು ಪಟ್ಟು ವರ್ಧಿಸಿ ಕೊಡಲಿಕ್ಕಾಗಿ ಈ ಸಾಲವನ್ನು ಪಡೆಯುತ್ತಿದ್ದಾನೆ ಎಂದು ಹೇಳುತ್ತಿದ್ದಾನೆ. ನೀವು ನನ್ನ ಧರ್ಮಕ್ಕಾಗಿ ನನ್ನ ಸೃಷ್ಟಿಗಳ ಏಳಿಗೆಗಾಗಿ ಖರ್ಚು ಮಾಡುವವರಾದರೆ ಹಲವು ಪಟ್ಟು ವರ್ಧಿಸಿ ಮರಳಿ ಕೊಡುವೆನು ಎಂದು ಹೇಳುತ್ತಿದ್ದಾನೆ. ನೀವು ನಿಮ್ಮ ಇಷ್ಟದಿಂದ ಸ್ವಂತ ಖುಶಿಯಿಂದ ಈ ಖರ್ಚನ್ನು ಮಾಡಬೇಕೆಂದು ಉತ್ತಮವಾದ ಸಾಲವೆಂಬ ಪದಪ್ರಯೋಗದಿಂದ ಸ್ಪಷ್ಟಪಡಿಸುತ್ತಾನೆ. ಹೀಗೆ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವಾಗ ಅದು ನಿಮ್ಮ ಕಡೆಯಿಂದ ಉತ್ತಮವಾದ ಸಾಲವಾಗುವುದು ಮತ್ತು ಅಲ್ಲಾಹನು ಸಹ ಅದನ್ನು ಹಲವು ಪಟ್ಟು ವರ್ಧಿಸಿ ಕೊಡುವನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಂ ಒಂದು ಸಭೆಯಲ್ಲಿ ಇದಕ್ಕೆ ಸಂಬಂಧಿಸಿ ಒಂದು ಕಡೆ ಹೇಳುತ್ತಾರೆ: ಅಲ್ಲಾಹನು ನಮ್ಮಿಂದ ಸಾಲ ಕೇಳುವುದರಿಂದ ಅವನಿಗೆ ಅದರ ಆವಶ್ಯಕತೆಯಿದೆ ಮತ್ತು ಅವನು ನಿರ್ಗತಿಕನು ಎಂದಲ್ಲ ಅದರ ತಾತ್ಪರ್ಯ. ನಊಝುಬಿಲ್ಲಾಹ್. ಹೀಗೆ ಭಾವಿಸುವುದು ಕೂಡ ಕುಫ್ರ್ ಆಗಿದೆ. ಬದಲಿಗೆ ಪ್ರತಿಫಲದೊಂದಿಗೆ ಮರಳಿಕೊಡುವನು, ವರ್ಧಿಸಿ ಮರಳಿ ಕೊಡುವನು ಎಂದಾಗಿದೆ ಇದರ ಅರ್ಥ. ಇದು ಅಲ್ಲಾಹನು ಅನುಗ್ರಹಿಸಲು ಬಯಸುವವನೊಡನೆ ತೋರಿಸುವ ಒಂದು ರೀತಿಯಾಗಿದೆ. (ಮಲ್‌ಫೂಝಾತ್, ಸಂಪುಟ-3, ಪುಟ-268)

ಮತ್ತೊಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: **ಮಂಝಲ್ಲಝೀ ಯುಖ್‌ರಿಝುಲ್ಲಾಹ ಖರ್‌ಝನ್ ಹಸನ** ಅಲ್ಲಾಹನಿಗೆ ಯಾರು ಸಾಲವನ್ನು ಕೊಡುವನು? ಅಲ್ಲಾಹನು ಹಸಿವಿನಿಂದಿದ್ದಾನೆ ಎಂದಾಗಿದೆ ಇದರ ಅರ್ಥವೆಂದು ಒಬ್ಬ ಮೂರ್ಖ ಹೇಳುತ್ತಾನೆ. ಹೀಗೆ ಹೇಳುವ ಮೂರ್ಖನಿಗೆ ಏನೂ ಗೊತ್ತಿಲ್ಲ. ಈ ಆಯತ್ತಿನಿಂದ ಅಲ್ಲಾಹನು ಹಸಿವಿನಿಂದಿದ್ದಾನೆಂದು ಎಲ್ಲಿದೆ? ಉತ್ತಮವಾದ ಸಾಲವನ್ನು ನನಗೆ ಕೊಡು ಎಂದು ಅಲ್ಲಾಹನು ಹೇಳುವುದರಿಂದ ಅಲ್ಲಾಹನು ಹಸಿವಿನಿಂದ ಇದ್ದಾನೆ ಎಂಬ ಅರ್ಥ ಎಲ್ಲಿಂದ ಬಂತು? ಸಾಲವೆಂಬುದರ ಅರ್ಥ, ಮರಳಿ ಕೊಡುವ ವಾಗ್ದಾನವಿರುವ ಸಂಗತಿಯಾಗಿದೆ. ಸಾಲವಿರುವುದೇ ಮರಳಿ ಕೊಡಲಿಕ್ಕಾಗಿದೆ. ಅದರೊಂದಿಗೆ ವಾಗ್ದಾನವಿರುತ್ತದೆ. ಸಾಲವೆಂಬುದಕ್ಕೆ ಆಕ್ಷೇಪಕನು ತನ್ನ ಕೈಯಿಂದ ಹಸಿವು ಅಥವಾ ಅಲ್ಲಾಹನು ಬಡವನು ಮತ್ತು ಅವನಿಗೆ ಅದರ ಆವಶ್ಯಕತೆಯಿದೆ ಎಂಬ ಸಂಗತಿಯನ್ನು ಸೇರಿಸುತ್ತಾನೆ. ನಾನು ಹಸಿವಿನಿಂದ ಇದ್ದೇನೆ ಮತ್ತು ಬಡತನದಲ್ಲಿದ್ದೇನೆ ಆದ್ದರಿಂದ ನನಗೆ ಕೊಡು, ಅದನ್ನು ನಾನು ನನ್ನ ಆವಶ್ಯಕತೆಗಾಗಿ ಖರ್ಚು ಮಾಡುವೆನು ಎಂದು ಅಲ್ಲಾಹನು ಹೇಳಿಲ್ಲ. ಆದರೆ ತನ್ನ ದಾಸನ ಬಗ್ಗೆ ಹೀಗೆ ಹೇಳಿದ್ದಾನೆ. ಅವನ ದಾಸನು ಹಸಿವಿನಿಂದ ಇರುವಾಗ ಅವನಿಗೆ ನೀನು ಕೊಡುವಾಗ, ಅವನ ಮೇಲೆ ಖರ್ಚು ಮಾಡುವಾಗ ಅದು ಅಲ್ಲಾಹನ ಮೇಲೆ ಖರ್ಚು ಮಾಡಿದಂತೆಯೇ ಆಗಿದೆ. ಇಲ್ಲಿ ಸಾಲವೆಂಬುದರ ಅರ್ಥ, ಅಲ್ಲಾಹನಿಗಾಗಿ ಸತ್ಕರ್ಮ ಮಾಡುವುದು ಎಂದಾಗಿದೆ. ಅಲ್ಲಾಹನು ಅವುಗಳ ಪ್ರತಿಫಲ ಹಲವು ಪಟ್ಟುಗಳಷ್ಟು ವರ್ಧಿಸಿ ಕೊಡುತ್ತಾನೆ. ಅಲ್ಲಾಹನಿಗಾಗಿ ಮಾಡುವ ಯಾವುದೇ ಸತ್ಕರ್ಮವನ್ನು ಅವನು ವರ್ಧಿಸಿಕೊಡುತ್ತಾನೆ. ಕೇವಲ ಹಣ ಮತ್ತು ರೂಪಾಯಿಯ ವಿಷಯವಲ್ಲ. ಇದು ಅಲ್ಲಾಹನ ಮಹಿಮೆಗೆ ಸೇರಿದ ವಿಷಯವಾಗಿದೆ. ಈ ಪರಂಪರೆ ದಾಸನ ಮತ್ತು ಪ್ರಭುವಿನ ನಡುವೆ ಇರುವ ಸಂಗತಿಯಾಗಿದೆ. ಇದರ ಬಗ್ಗೆ ಚಿಂತಿಸುವಾಗ ಇದರ ಅರ್ಥ ಸ್ಪಷ್ಟವಾಗಿ ಗೊತ್ತಾಗುತ್ತದೆ. ಏಕೆಂದರೆ, ಯಾವುದೇ ಸತ್ಕರ್ಮ ಮಾಡದಿರುವಾಗಲೂ, ದುಆ ಮಾಡದಿರುವಾಗಲೂ ವಿಶ್ವಾಸಿ ಅಥವಾ ಅವಿಶ್ವಾಸಿ ಎಂಬ ವ್ಯತ್ಯಾಸವಿಲ್ಲದೆ ಅಲ್ಲಾಹನು ಪ್ರತಿಯೊಬ್ಬರ ಪರಿಪಾಲನೆ ಮಾಡುತ್ತಿದ್ದಾನೆ. ಯಾರು ಸತ್ಯವಿಶ್ವಾಸಿ ಅಥವಾ ಯಾರು ಸತ್ಯನಿಷೇಧಿ ಎಂದು ಲೆಕ್ಕಿಸದೇ ತನ್ನ ಪರಿಪಾಲನೆ ಮತ್ತು ಕಾರುಣ್ಯದ ಗುಣದಿಂದ ಎಲ್ಲರಿಗೂ ತನ್ನ ಅನುಗ್ರಹಗಳನ್ನು ತಲುಪಿಸುತ್ತಿದ್ದಾನೆ. ಹೀಗಿರುವಾಗ ಯಾರಾದರೂ ಸತ್ಕರ್ಮಗಳನ್ನು ಮಾಡುವಾಗ ಅವನು ಅದನ್ನು ಹೇಗೆ ವ್ಯರ್ಥಗೊಳಿಸುವನು. ಯಾವುದೇ ಒಳಿತು ಇಲ್ಲದೇ ಯಾವುದೇ ಕೆಲಸ ಮಾಡದೇ ಇರುವಾಗಲೂ ಅಲ್ಲಾಹನು ಎಲ್ಲರನ್ನು ಪಾಲನೆ ಪೋಷಣೆ ಮಾಡುತ್ತಿರುವಾಗ ಯಾರಾದರೂ ಒಳಿತುಗಳನ್ನು ಮತ್ತು ಸತ್ಕರ್ಮಗಳನ್ನು ಮಾಡುವಾಗ ಅದನ್ನು ಅಲ್ಲಾಹನು ಏಕೆ ವ್ಯರ್ಥಗೊಳಿಸಬೇಕು? ಅದಕ್ಕೆ ಪ್ರತಿಫಲ ಕೊಡದೇ ಇರಬೇಕು? ಅವನ ಮಹಿಮೆಯೇನೆಂದರೆ, **ಫಮನ್ ಯಅ್‌ಮಲ್ ಮಿಸ್‌ಕಾಲ ಧರ್ರತಿನ್ ಖೈರನ್‌ಯರಹ್**. (ಅಲ್‌ಝಿಲ್‌ಝಾಲ್:8) ಎಂದರೆ ಅಣುವಿನಷ್ಟಾದರೂ ಯಾರಾದರೂ ಸತ್ಕರ್ಮ ಮಾಡಿದರೆ, ಅಲ್ಲಾಹನು ಅವನಿಗೆ ಅದರ ಪ್ರತಿಫಲವನ್ನು ನೀಡುವನು ಮತ್ತು ಯಾರಾದರೂ ಒಂದು ಕಣದಷ್ಟು ಕೆಡುಕು ಮಾಡಿದರೆ ಅದರ ಪರಿಣಾಮವನ್ನು ಕೂಡ ಕಾಣುವನು. ಇದಾಗಿದೆ ಈ ಆಯತ್ತಿನಲ್ಲಿರುವ ಸಾಲದ ಯಥಾರ್ಥ ಅರ್ಥ. **ಮಂಝಲ್ಲಝೀ ಯುಖ್‌ರಿಝುಲ್ಲಾಹ ಖರ್‌ಝನ್ ಹಸನ** (ಅಲ್‌ಬಖರ: 246) ಎಂಬುದರ ವ್ಯಾಖ್ಯಾನ **ಫಮನ್ ಯಅ್‌ಮಲ್ ಮಿಸ್‌ಕಾಲ ಧರ್ರತಿನ್ ಖೈರನ್‌ಯರಹ್** (ಅಲ್‌ಝಿಲ್‌ಝಾಲ್: 8) ಎಂಬ ಆಯತ್ತಿನಲ್ಲಿದೆ. ಎಂದರೆ, ಅಣುವಿನಷ್ಟಾದರೂ ಯಾರಾದರೂ ಸತ್ಕರ್ಮ ಮಾಡಿದರೆ ಅಲ್ಲಾಹನು ಅವನಿಗೆ ಅದರ ಪ್ರತಿಫಲವನ್ನು ನೀಡುವನು. (ಮಲ್‌ಫೂಝಾತ್, ಸಂಪುಟ-1, ಪುಟ-226-227)

ಒಟ್ಟಿನಲ್ಲಿ ಅಲ್ಲಾಹನ ಧರ್ಮದ ಪ್ರಚಾರಕ್ಕಾಗಿ, ಸೃಷ್ಟಿಗಳ ಸೇವೆಗಾಗಿ ಧನತ್ಯಾಗಗಳನ್ನು ಮಾಡುವುದು ಶ್ರೇಷ್ಠವಾದ ಒಳಿತಾಗಿದೆ ಮತ್ತು ಅಲ್ಲಾಹನು ಅದಕ್ಕೆ ಪ್ರತಿಫಲ ನೀಡದೇ ಇರುವುದಿಲ್ಲ. ಪವಿತ್ರ ಖುರ್‌ಆನಿನಲ್ಲಿ ಮತ್ತೊಂದು ಕಡೆ ಅಲ್ಲಾಹನು ಅದನ್ನು ಪ್ರಸ್ತಾಪಿಸಿಯೂ ಇದ್ದಾನೆ. ಧನತ್ಯಾಗದ ಬಗ್ಗೆ ಜಮಾಅತಿನ ಸದಸ್ಯರಿಗಿಂತ ಬೇರೆ ಯಾರಿಗೆ ಗೊತ್ತು. ಅಲ್ಲಾಹನಿಗಾಗಿ, ಅವನ ಸಂಪ್ರೀತಿಗಾಗಿ ಅವನ ಮಾರ್ಗದಲ್ಲಿ ಖರ್ಚು ಮಾಡುವುದರಿಂದ ಮನಸ್ಸಮಾಧಾನ ಸಿಗುವುದಲ್ಲದೆ, ಅಲ್ಲಾಹನ ಸಂಪ್ರೀತಿಗಾಗಿ ನೀಡಲ್ಪಟ್ಟ ಆ ಹಣವನ್ನು ಅಲ್ಲಾಹನು ವಿಸ್ಮಯಕರವಾದ ರೀತಿಯಲ್ಲಿ ಮರಳಿ ನೀಡುತ್ತಾನೆ ಎಂಬುದು ಎಲ್ಲ ವಿಭಾಗದ ಅಹ್ಮದಿಯರ ಸ್ವಂತ ಅನುಭವವಾಗಿದೆ. ಕೇವಲ ತ್ಯಾಗಗಳನ್ನು ಮಾಡುವ, ಎಂದರೆ ಕೇವಲ ತ್ಯಾಗ ಮಾಡುವ ಉದ್ದೇಶದಿಂದ ತ್ಯಾಗ ಮಾಡುವ, ಕೇವಲ ಅಲ್ಲಾಹನ ಸಂಪ್ರೀತಿ ಸಿಗಬೇಕೆಂದು ಬಯಸುವ ಹಲವಾರು ಅಹ್ಮದಿಯರು ಇದ್ದಾರೆ. ಲೌಕಿಕವಾದ ಸಂಪತ್ತಿನ ರೂಪದಲ್ಲಿ ಅದರ ಪ್ರತಿಫಲ ಸಿಗಬೇಕೆಂಬ ಯೋಚನೆ ಸಹ ಅವರ ಹೃದಯದಲ್ಲಿ ಇರುವುದಿಲ್ಲ. ಆದರೆ ಉತ್ತಮ ರೀತಿಯಲ್ಲಿ ಅದನ್ನು ಮರಳಿಕೊಡುವನು ಎಂದು ಅಲ್ಲಾಹನು ಹೇಳುತ್ತಾನೆ. ಹೀಗೆ ಮರಳಿಯೂ ಕೊಡುತ್ತಾನೆ. ಕೆಲವರು ಕಷ್ಟದ ಸ್ಥಿತಿಯಲ್ಲಿದ್ದರೂ ತ್ಯಾಗಗಳನ್ನು ಮಾಡುತ್ತಾರೆ ಮತ್ತು ಅವರ ಆವಶ್ಯಕತೆಗಳನ್ನು ಹೇಗಾದರೂ ಅಲ್ಲಾಹನು ಪೂರೈಸುವನು ಎಂಬ ಪ್ರತೀಕ್ಷೆಯನ್ನು ಇರಿಸುತ್ತಾರೆ. ಅಲ್ಲಾಹನು ಅವರ ನಿರೀಕ್ಷೆಯನ್ನು ಪೂರ್ತಿ ಮಾಡುತ್ತಾನೆ. ಅಲ್ಲಾಹನು ಹೇಗೆ ಅವರ ಆವಶ್ಯಕತೆಗಳನ್ನು ಪೂರೈಸಿದನು ಎಂದು ಅವರು ಸಹ ಅಚ್ಚರಿಗೊಳ್ಳುತ್ತಾರೆ. ಆದರೆ ಶರತ್ತೇನೆಂದರೆ, ಸದುದ್ದೇಶದೊಂದಿಗೆ ಅಲ್ಲಾಹನ ಸಂಪ್ರೀತಿಯನ್ನು ಪಡೆಯಲಿಕ್ಕಾಗಿ ತ್ಯಾಗಗಳನ್ನು ಮಾಡಬೇಕು ಮತ್ತು ಅದಕ್ಕಾಗಿ ಅಲ್ಲಾಹನ ಇತರ ಆಜ್ಞೆಗಳನ್ನು ಪಾಲಿಸಬೇಕು ಮತ್ತು ಒಳಿತುಗಳನ್ನು ಸಹ ಮಾಡಬೇಕು. ಕೇವಲ ಸಂಪತ್ತನ್ನು ಕೊಟ್ಟು, ಹಿರಿದಾದ ತ್ಯಾಗವನ್ನು ಮಾಡಿದ್ದಾಗಿ ಮತ್ತು ಇತರ ಕರ್ತವ್ಯಗಳನ್ನು ಈಡೇರಿಸಿದ್ದಾಗಿ ಭಾವಿಸುವುದು ಸರಿಯಲ್ಲ. ಇತರ ಸತ್ಕರ್ಮಗಳನ್ನು ಮಾಡುವುದು ಸಹ ಆವಶ್ಯಕ. ಒಬ್ಬ ವ್ಯಾಪಾರಿಯ ಹಾಗೆ ಲಾಭ ಪಡೆಯಲಿಕ್ಕಾಗಿ ಮಾತ್ರ ಹಣವನ್ನು ಖರ್ಚು ಮಾಡುವುದಲ್ಲ. ಅಲ್ಲಾಹನ ಮಾರ್ಗದಲ್ಲಿ ಕೊಟ್ಟರೆ ಅದರ ಲಾಭ ಸಿಗುವುದು ಎಂಬ ಚಿಂತೆ ಮಾತ್ರವಿರಬಾರದು.

ಹೇಗಿದ್ದರೂ ಅಲ್ಲಾಹನ ಈ ಆದೇಶದಿಂದ ಪ್ರಯೋಜನ ಪಡೆದ ಕೆಲವು ಅಹ್ಮದಿಯರ ಘಟನೆಗಳನ್ನು ನಾನೀಗ ಮುಂದಿರಿಸುತ್ತೇನೆ. ಅವರು ಪ್ರಾಮಾಣಿಕವಾಗಿ ಅಲ್ಲಾಹನ ಮಾರ್ಗದಲ್ಲಿ ತ್ಯಾಗಗಳನ್ನು ಮಾಡಿದ್ದರು ಮತ್ತು ವಿಸ್ಮಯಕರವಾದ ರೀತಿಯಲ್ಲಿ ಅಲ್ಲಾಹನು ಅವರ ಆವಶ್ಯಕತೆಗಳನ್ನು ನೆರವೇರಿಸಿದನು ಎಂದು ಮಾತ್ರವಲ್ಲ ಅದನ್ನು ವರ್ಧಿಸಿಕೊಟ್ಟನು. ಕೆಲವರು ತಮ್ಮ ಮತ್ತು ತಮ್ಮ ಮಕ್ಕಳ ಹಸಿವನ್ನು ಹೇಗೆ ನೀಗಿಸುವುದು ಎಂಬುದನ್ನು ಕೂಡ ಯೋಚಿಸದೇ ತ್ಯಾಗಗಳನ್ನು ಮಾಡಿದ್ದಾರೆ. ಆದರೆ ಕೆಲವೇ ಕ್ಷಣಗಳಲ್ಲಿ ಅಲ್ಲಾಹನು ಅದಕ್ಕಿಂತ ಉತ್ತಮ ರೀತಿಯಲ್ಲಿ ಹಸಿವನ್ನು ನೀಗಿಸುವ ವ್ಯವಸ್ಥೆಯನ್ನು ಮಾಡಿದ್ದನು. ಅವರ ಕೈಯಲ್ಲಿ ಇದ್ದುದಕ್ಕಿಂತ ಬಹಳ ವರ್ಧಿಸಿ ಅಲ್ಲಾಹನು ಕೊಟ್ಟನು. ಹೀಗೆ ಈ ಸಂಗತಿಗಳು ಅವರ ವಿಶ್ವಾಸವನ್ನು ವರ್ಧಿಸಲು ಕಾರಣವಾಯಿತು. ಇವರಾಗಿದ್ದಾರೆ ಅಲ್ಲಾಹನ ಸಂಪ್ರೀತಿಯನ್ನು ಗಳಿಸುವ ಜನರು. ಅವುಗಳಿಗೆ ಅಗಣಿತವಾದ ಉದಾಹರಣೆಗಳು ನಾವು ಅಹ್ಮದಿಯಾ ಜಮಾಅತಿನಲ್ಲಿ ಕಾಣಬಹುದಾಗಿದೆ.

ಗಿನಿಕನಾಕುರಿಯ ಸದರ್ ಮತ್ತು ಮುಬಲ್ಲಿಗ್ ಇಂಚಾರ್ಜ್ ಹೇಳುತ್ತಾರೆ: ಅವರು ನನ್ನ ವಖ್ಫೆ ಜದೀದಿನ ಕಳೆದ ವರ್ಷದ ಖುತ್ಬವನ್ನು ಮಸೀದಿಯಲ್ಲಿ ಓದಿಹೇಳಿದರು. ಅದರಲ್ಲಿ ನಾನು ಧನತ್ಯಾಗದ ಪ್ರಾಮುಖ್ಯತೆಯನ್ನು ಹೇಳಿದ್ದೆ. ಇದಕ್ಕೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್‌ರ ಉಲ್ಲೇಖಗಳನ್ನು ಮುಂದಿರಿಸಿದ್ದೆ. ಅದರಲ್ಲಿ ಅಲ್ಲಾಹನ ತನಕ ತಲುಪಲು ಇರುವ ಐದು ಮಾರ್ಗಗಳಲ್ಲಿ ಒಂದು ಜಿಹಾದ್ ಫಿಲ್ ಮಾಲ್ ಎಂದರೆ, ಸಂಪತ್ತಿನ ತ್ಯಾಗವೆಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿದ್ದರು. ಒಂದು ಹೃದಯದಲ್ಲಿ ಎರಡು ಪ್ರೇಮಗಳು ಒಟ್ಟುಸೇರದು ಎಂದು ಹೇಳಿದ್ದರು. ಎಂದರೆ ಸಂಪತ್ತನ್ನು ಪ್ರೀತಿಸುವುದರೊಂದಿಗೆ ಅಲ್ಲಾಹನು ಪ್ರೀತಿಸುವುದು ಸಾಧ್ಯವಲ್ಲವೆಂದು ಹೇಳಿದ್ದರು. ಅದಲ್ಲದೆ ನಾನು ಆ ಖುತ್ಬದಲ್ಲಿ ಸಾಮಾನ್ಯವಾಗಿ ಹೇಳುವ ರೀತಿಯಲ್ಲಿ ಕೆಲವು ಧನತ್ಯಾಗದ ವಿಶ್ವಾಸವರ್ಧಕ ಘಟನೆಗಳನ್ನು ಹೇಳಿದ್ದೆ. ಜುಮಾ ನಮಾಝ್ ನಂತರ ಒಬ್ಬ ಬಡ ಮತ್ತು ನಿಷ್ಠಾವಂತನಾದ ಅಹ್ಮದೀ ಮೂಸಾ ಖಬಾ ಸಾಹಿಬ್‌ರು ತನ್ನ ಜೇಬಿನಲ್ಲಿ ಇದ್ದಷ್ಟು ಹಣವನ್ನು ಅತ್ಯಂತ ನಿಷ್ಠೆಯಿಂದ ವಖ್ಫೇ ಜದೀದಿಗಾಗಿ ಪಾವತಿಸಿದರು. ಅದಕ್ಕಿಂತ ಮುಂಚಿತವಾಗಿಯೇ ಅವರು ವಾಗ್ದಾನ ಮಾಡಿದ್ದ ಚಂದಾವನ್ನು ಪಾವತಿಸಿದ್ದರು. ಎಷ್ಟಿದೆ ಎಂದು ಅವರೊಡನೆ ಕೇಳಿದಾಗ, ಜೇಬಿನಲ್ಲಿದ್ದದನ್ನು ಕೊಟ್ಟೆ, ನೀವೇ ಎಣಿಸಿರಿ ಎಂದು ಹೇಳಿದರು. ಅಲ್ಲಾಹನ ಪ್ರೀತಿಯನ್ನು ಗಳಿಸಿಕ್ಕಾಗಿ ನೀಡಿದ್ದೇನೆ. ಎಣಿಸಿ ಕೊಟ್ಟಿಲ್ಲ. ಅದನ್ನು

ಎಣಿಸಲಾದಾಗ ಅವು ಐವತ್ತು ಸಾವಿರ ಫ್ರಾಂಕ್ ಇದ್ದವು. ಮನೆಗೆ ಹೋಗುವ ಖರ್ಚಿಗಾಗಿ ಸ್ವಲ್ಪ ಹಣವನ್ನು ಮರಳಿ ಪಡೆಯಲು ಅವರೊಡನೆ ಹೇಳಲಾಯಿತು. ಅವರು ಹೇಳಿದರು: ಒಂದು ಹೃದಯದಲ್ಲಿ ಎರಡು ಪ್ರೇಮಗಳು ಒಟ್ಟುಸೇರದು ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿದ್ದನ್ನು ನೀವು ಕೇಳಿರಲಿಲ್ಲವೇ? ಆದ್ದರಿಂದ ಇಂದು ನನ್ನನ್ನು ಅಲ್ಲಾಹನ ಮೇಲಿನ ಪ್ರೇಮದ ಆಸರೆಯಲ್ಲಿ ಜೀವಿಸಲು ಬಿಡಿರಿ. ಹೀಗೆ ಹೇಳಿಕೊಂಡು ಅವರು ಸಂತೋಷದಿಂದ ತನ್ನ ಮನೆಗೆ ಹೊರಟುಹೋದರು.

ಈ ದೃಶ್ಯಗಳನ್ನು ನೋಡಿಕೊಂಡು ಹೃದಯವು ಅಲ್ಲಾಹನ ಸ್ತುತಿಯಿಂದ ತುಂಬುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನು ಎಂತಹ ನಿಷ್ಠಾವಂತ ಜಮಾಅತನ್ನು ಪ್ರದಾನ ಮಾಡಿದ್ದಾನೆ. ಜನರು ಖುತ್ಬಗಳನ್ನು ಕೇಳುತ್ತಾರೆ ಮತ್ತು ಆಲಿಸಿಕೊಂಡು, ಹೌದು ನಾವು ಕೇಳಿದ್ದೇವೆ ಎಂದು ಹೇಳಿಕೊಳ್ಳುತ್ತಾರೆ. ಆದರೆ ಹಝ್ರತ್ ಮಸೀಹ್ ಮೌಊದ್ರ(ಅ) ಮಾತುಗಳನ್ನು ಇಷ್ಟು ಆಳವಾಗಿ ನೋಟ್ ಮಾಡುವುದು ಮತ್ತು ಎರಡು ಪ್ರೇಮಗಳು ಒಂದು ಹೃದಯದಲ್ಲಿ ಇರಲು ಸಾಧ್ಯವಲ್ಲವೆಂದು ಹೇಳಿಕೊಂಡು ಅದರ ಪ್ರಕಾರ ನಡೆಯುವುದು ದೊಡ್ಡ ಸಂಗತಿಯಾಗಿದೆ. ಜನರು ಚಿಂತಿಸುವುದಿಲ್ಲ ಮತ್ತು ಗಮನವಿಟ್ಟು ಆಲಿಸುವುದಿಲ್ಲ. ಆಳವಾಗಿ ಯಾವುದಾದರೂ ಸಂಗತಿಯನ್ನು ಕೇಳಿ ಅದರಂತೆ ನಡೆಯುವುದಕ್ಕೆ ಇದೊಂದು ಉದಾಹರಣೆಯಾಗಿದೆ. ಎಂತಹ ವಿಸ್ಮಯಕರವಾದ ತ್ಯಾಗಗಳ ದೃಶ್ಯಗಳಾಗಿವೆ. ಪ್ರತಿಯೊಂದು ಸ್ಥಿತಿಯಲ್ಲಿ ಅಲ್ಲಾಹನೊಡನೆ ಮಾಡಿರುವ ನಿಷ್ಠೆಯ ಪ್ರತಿಜ್ಞೆಯನ್ನು ಈಡೇರಿಸುವುದು ಮತ್ತು ದೂರದೇ ಇರುವುದು ಸಹ ಬೈಅತ್ತಿನ ನಿಬಂಧನೆಯ ಪ್ರಕಾರವೇ ಆಗಿದೆ. ಹಣವನ್ನು ಪಾವತಿಸಿದಾಗ, ತ್ಯಾಗಗಳನ್ನು ಮಾಡಿದಾಗ ಅವರು ಸಂತೋಷಗೊಂಡರು. ನಿಷ್ಠೆಯಿಂದ ತ್ಯಾಗಗಳನ್ನು ಮಾಡಲು ತಯಾರಿರುತ್ತಾರೆ. ನಾವು ಜಮಾಅತಿನ ಹೆಸರನ್ನು ಲೋಕದಿಂದ ಅಳಿಸುವೆವು ಎಂದು ನಮ್ಮ ವಿರೋಧಿಗಳು ಹೇಳುತ್ತಾರೆ. ಅಲ್ಲಾಹನನ್ನು ಈ ರೀತಿಯಲ್ಲಿ ಪ್ರೀತಿಸುವ ಮತ್ತು ನಿಷ್ಠೆ ತೋರಿಸುವವರನ್ನು ಅಳಿಸಲು ಯಾರಿಗೆ ಸಾಧ್ಯ? ಅಲ್ಲಾಹನನ್ನು ಈ ರೀತಿಯಲ್ಲಿ ಪ್ರೀತಿಸುವವರನ್ನು ಅಲ್ಲಾಹನು ತನ್ನೊಂದಿಗೆ ಜೋಡಿಸಿ ಇರಿಸುತ್ತಾನೆ ಮತ್ತು ಶತ್ರುವಿನ ಧೂಳು ಕೂಡ ಕಾಣಸಿಗುವುದಿಲ್ಲ.

ಅಹ್ಮದಿಯಾ ಜಮಾಅತ್ ಫ್ರಾನ್ಸಿನ ಒಬ್ಬಾಕೆ ಸ್ತ್ರೀಯಾದ ಡೆನಿವಾ ಸಾಹಿಬರು ಕೆಲವು ಕಾಲಗಳಿಗೆ ಮುಂಚೆ ಬೈಅತ್ ಮಾಡಿದ್ದರು. ಸಾಕಷ್ಟು ಕಷ್ಟತೆಗಳನ್ನು ಅವರು ಕುಟುಂಬದೊಂದಿಗೆ ಅನುಭವಿಸುತ್ತಿದ್ದಾರೆ. ವಖ್ಫೇ ಜದೀದ್, ತಹ್ರೀಕ್ ಜದೀದ್, ಮಸ್ಜಿದ್ ಫಂಡ್ ಮುಂತಾದ ಎಲ್ಲ ಧನತ್ಯಾಗದಲ್ಲೂ ಸದಾ ಭಾಗವಹಿಸಲು ಅವರು ಪ್ರಯತ್ನಿಸುತ್ತಿದ್ದರು. ಚಂದಾಗಳ ಅನುಗ್ರಹಗಳನ್ನು ಅವರು ಕಣ್ಣಾರೆ ನೋಡಿದ್ದರು. ಈ ವರ್ಷ ವಖ್ಫೇ ಜದೀದಿನ ಚಂದವನ್ನು ಪಾವತಿಸುವ ಸಮಯದಲ್ಲಿ ಒಂದು ದೀರ್ಘಕಾಲದಿಂದ ಉತ್ತಮ ನೌಕರಿಗಾಗಿ ಪ್ರಯತ್ನಿಸುತ್ತಿದ್ದ ಸಮಯವಾಗಿತ್ತು. ಆದರೆ ಯಾವುದೇ ನೌಕರಿ ಸಿಗುತ್ತಿರಲಿಲ್ಲ. ವಖ್ಫೇ ಜದೀದಿನ ಚಂದವನ್ನು ಪಾವತಿಸಿದ ದಿನದಂದು, ಪಾವತಿಸಿದ ಹತ್ತು ನಿಮಿಷಗಳ ನಂತರ ಅವರಿಗೆ ಒಂದು ಕಂಪೆನಿಯಿಂದ ನೌಕರಿ ಸಿಕ್ಕಿದ್ದಾಗಿ ಫೋನ್ ಕರೆ ಬಂತು. ಎಲ್ಲ ಚಂದಾಗಳನ್ನು ಪಾವತಿಸಿದ ನಂತರ ವಿಶೇಷವಾಗಿ ವಖ್ಫೇ ಜದೀದಿನ ಚಂದವನ್ನು ಪಾವತಿಸಿದ ಕೂಡಲೇ ಉದ್ಯೋಗ ಸಿಕ್ಕಿರುವುದು ನಿಶ್ಚಯವಾಗಿಯೂ ಅವರಿಗೆ ಅಲ್ಲಾಹನ ಕಡೆಯಿಂದ ಒಂದು ದೃಷ್ಟಾಂತವಾಗಿತ್ತು. ಖಾಝ್ಹಕಿಸ್ತಾನದ ಮುಬಲ್ಲಿಗ್ ಸಾಹಿಬ್‌ರು ಬರೆಯುತ್ತಾರೆ: ಲೋಕಲ್ ಮುಅಲ್ಲಿಮ್ ಸಾಹಿಬ್‌ರಾದ ದಸ್ಲಾನ್ ಸಾಹಿಬ್‌ರ ಹೆಂಡತಿ ಕೆಲವು ವರ್ಷಗಳ ಹಿಂದೆ ಬೈಅತ್ ಮಾಡಿದ್ದರು. ಈ ವರ್ಷ ತನ್ನ ಹುಟ್ಟು ವರ್ಷದ ಸಂದರ್ಭದಲ್ಲಿ ಅಲ್ಲಿನ ಲೋಕಲ್ ಕರೆನ್ಸಿಯಾದ ಏಳು ಸಾವಿರ ತೀಂಗೆಯನ್ನು ತಹ್ರೀಕ್ ಜದೀದ್, ವಖ್ಫೇ ಜದೀದ್‌ಗಾಗಿ ಅರ್ಧ ಅರ್ಧ ಮಾಡಿಕೊಂಡು ಕೊಟ್ಟರು. ಇದನ್ನು ಪಾವತಿಸಿದ ಒಂದು ವಾರದಲ್ಲೇ ಅವರಿಗೆ ಎಪ್ಪತ್ತು ಸಾವಿರ ತೀಂಕೆಯಷ್ಟು ಮೊಬಲಗು ಲಭಿಸಿತ್ತು. ಅದರ ಯಾವ ನಿರೀಕ್ಷೆಯೂ ಅವರಿಗೆ ಇದ್ದಿರಲಿಲ್ಲ. ಅಲ್ಲಾಹನ ಮಾರ್ಗದಲ್ಲಿ ತ್ಯಾಗವನ್ನು ಮಾಡಿದ್ದಾಗ ಅವನು ಹತ್ತು ಪಟ್ಟು ವರ್ಧಿಸಿ ಮರಳಿ ಕೊಟ್ಟನು.

ನಮ್ಮೊಂದಿಗೆ ಏಕೆ ಹೀಗೆ ಆಗುವುದಿಲ್ಲವೆಂದು ಕೆಲವರು ಕೇಳುತ್ತಾರೆ. ಇಂತಹ ಘಟನೆಗಳು ನಮ್ಮೊಂದಿಗೆ ಆಗುವುದಿಲ್ಲವೆಂದು ಕೆಲವರು ಹೇಳುತ್ತಾರೆ. ಅಂಥವರು ಇಸ್ತಿಗ್‌ಫಾರ್ ಮಾಡಬೇಕು, ಅಲ್ಲಾಹನಲ್ಲಿ ಕ್ಷಮೆಯನ್ನು ಯಾಚಿಸಬೇಕು. ತ್ಯಾಗವನ್ನು ಮಾಡುವಾಗ, ಅದು ಅಲ್ಲಾಹನಿಗಾಗಿ ಮಾತ್ರ ಮಾಡುವ ತ್ಯಾಗವೆಂಬ ನಿಯ್ಯತ್ ಅವರಿಗೆ ಇತ್ತೇ ಎಂದು ಹೃದಯವನ್ನು ತಟ್ಟಿ ಕೇಳಬೇಕು. ಹಾಗೆ ಆಗಿದ್ದರೆ, ದೂರು ಸಹ ಉಂಟಾಗಲಿಕ್ಕಿಲ್ಲ. ಅಲ್ಲಾಹನು ತ್ಯಾಗಮಾಡಲು ಸೌಭಾಗ್ಯ ನೀಡಿದ್ದನು ಎಂಬ ವಿಷಯದಲ್ಲಿ ಸಂತೋಷಗೊಳ್ಳಬೇಕು. ಅಲ್ಲಾಹನು ಯಾವ ರೀತಿಯಲ್ಲಿ ಕೊಡಲು ಇಚ್ಛಿಸುತ್ತಾನೋ ಆ ರೀತಿಯಲ್ಲಿ ನೀಡುವನು. ಇಂದಲ್ಲದಿದ್ದರೆ ನಾಳೆ ಕೊಡುವನು. ಆದರೆ ಉದ್ದೇಶವೇ ವರ್ಧಿಸಿ ಸಿಗಬೇಕೆಂದಾಗಿದ್ದರೆ ಅವರಿಗೆ ದೂರು ಕೂಡ ಇರುವುದು. ಇಂಥವರಿಗೆ ನಮಾಝ್ ಕೂಡ ಭಾರವಾಗುತ್ತದೆ.

ಮಾಸ್ಕೋದ ಒಬ್ಬ ಸಹೋದರನಾದ ಅಬ್ದುರ್ರಹೀಂ ಸಾಹಿಬ್ ಹೇಳುತ್ತಾರೆ. ನೌಕರಿಯ ವಿಷಯದಲ್ಲಿ ನನ್ನ ಭಾಗ್ಯ ಯಾವಾಗಲೂ ಕೆಟ್ಟದಾಗಿತ್ತು. ಎಲ್ಲಿ ಕೆಲಸ ಸಿಕ್ಕಿದ್ದರೂ ಅಲ್ಲಿಯ ಸಂಬಳ ಕುಟುಂಬ ಸಾಕುವುದಕ್ಕೆ ಬೇಕಾದಷ್ಟು ಇರಲಿಲ್ಲ. ಒಂದು ತಿಂಗಳು ಸಂಬಳವೇ ಸಿಗಲಿಲ್ಲ. ಆದರೆ ಅನಂತರ ಅಲ್ಲಾಹನು ಕೃಪೆದೋರಿದನು. ನನ್ನ ಸಂಬಳ ವರ್ಧಿಸಲು ಶುರುವಾಯಿತು. ಚಂದಾಗಳನ್ನು ಕ್ರಮಬದ್ಧವಾಗಿ ಪಾವತಿಸಬೇಕೆಂಬುದಕ್ಕೆ ಇದು ಅಲ್ಲಾಹನ ಕಡೆಯಿಂದ ಇರುವ ಸೂಚನೆಯೆಂದು ನನಗೆ ಗೊತ್ತಾಯಿತು. ಹೀಗೆ ಸರಿಯಾಗಿ ಚಂದಗಳನ್ನು ಸಂದಾಯ ಮಾಡಲು ಶುರುಮಾಡಿದೆ. ಹೀಗೆ ಸಂದಾಯ ಮಾಡಿದ ಕಾರಣದಿಂದ ಅಲ್ಲಾಹನು ಹೆಚ್ಚಿನ ಕೃಪೆಯನ್ನು ತೋರಿಸಿದನು. ನಾನು ಎರಡು ವರ್ಷದಿಂದ ಪ್ರತೀಕ್ಷಿಸುತ್ತಿದ್ದ ಒಂದು ನೌಕರಿಯ offer(ಪ್ರಸ್ತಾವನೆ) ನನಗೆ ಸಿಕ್ಕಿತ್ತು. ಅಲ್ಲಾಹನ ಅನುಗ್ರಹದಿಂದ ಈಗ ನನಗೆ ವಖ್ಫೇ ಜದೀದ್ ಚಂದಾವನ್ನು ಸಂದಾಯ ಮಾಡುವ ಸೌಭಾಗ್ಯ ಸಿಕ್ಕಿದೆ. ಚಂದಾಗಳನ್ನು ಸ್ಥಿರವಾಗಿ ಸಂದಾಯ ಮಾಡುವುದರಿಂದ ಅಲ್ಲಾಹನು ಮನುಷ್ಯನ ಆದಾಯದಲ್ಲಿ ವರ್ಧನೆ ಮಾಡುತ್ತಾ ಹೋಗುತ್ತಾನೆ. ವರಮಾನದ ಸ್ಥಿರವಾದ ವ್ಯವಸ್ಥೆಯನ್ನು ಸಹ ಮಾಡುತ್ತಾನೆ. ಜಮಾಅತಿನ ಚಂದಾಗಳಲ್ಲಿ ಭಾಗವಹಿಸಲು ಅಲ್ಲಾಹನು ನನಗೆ ಸೌಭಾಗ್ಯ ನೀಡುತ್ತಿರುವುದಕ್ಕೆ ನಾನು ಅಲ್ಲಾಹನಗೆ ಕೃತಜ್ಞತೆ ಅರ್ಪಿಸುತ್ತೇನೆ.

ಸೀರಲಿಯೋನಿನ ವಾಟರ್‌ಲೊ ರೀಜನಿನ ಮುಬಲ್ಲಿಗ್‌ರಾದ ಇಫ್‌ತಿಖಾರ್ ಸಾಹಿಬ್ ಬರೆಯುತ್ತಾರೆ: ವಖ್ಫೇ ಜದೀದಿನ ಚಂದವನ್ನು ವಸೂಲು ಮಾಡಲು ಹಲವು ಜಮಾಅತುಗಳಿಗೆ ಹೋಗಿದ್ದೆ. ಚಂದಾಗಳ ಪ್ರಾಮುಖ್ಯತೆಯನ್ನು ನಿಮಗೆ ಹೇಳಿಕೊಡುವುದರಲ್ಲಿ ನಮಗೆ ಬಹಳ ಕಡಿಮೆ ಗಮನವಿತ್ತು. ತಹ್ರೀಕ್ ಜದೀದಿನ ಚಂದಾದ ಘೋಷಣೆಯ ವೇಳೆ ನಾನು ಹೇಳಿದ್ದೆ: ಸಿರಲಿಯೋನಿನಲ್ಲಿ ಪೊಟೆಂಶಿಯಲ್ ಇದೆ. ಬಯಸುವುದಾದರೆ ಅಲ್ಲಿ ಚಂದಾ ನೀಡುವುದರಲ್ಲಿ ವರ್ಧನೆ ಉಂಟು ಮಾಡಬಹುದಾಗಿದೆ ಎಂದು ಹೇಳಿದ್ದೆ. ಹೀಗೆ ಈ ಮುಬಲ್ಲಿಗ್ ಸಾಹಿಬ್‌ರು ಅಲ್ಲಿಗೆ ಹೋಗಿ ನನ್ನ ಈ ಸಂದೇಶವನ್ನು ಅವರಿಗೆ ತಲುಪಿಸಿದರು. ಸಿರಲಿಯೋನ್ ಬಹಳ ದೊಡ್ಡ ಜಮಾಅತ್ ಮತ್ತು ಹಳೆಯ ಜಮಾಅತ್ ಆಗಿದೆ ಹಾಗು ಜಮಾಅತಿನ ಸದಸ್ಯರು ತ್ಯಾಗಗಳನ್ನು ಮಾಡಲು ತಯಾರಿದ್ದಾರೆ. ಹುದ್ದೇದಾರರ ಕಡೆಯಿಂದ ಮಡಿವಂತಿಕೆ ಉಂಟಾಗಿದೆ ಎಂಬ ನನ್ನ ಮಾತನ್ನು ಅವರಿಗೆ ಹೇಳಿಕೊಟ್ಟರು. ಈ ಸಂದೇಶವನ್ನು ಕೇಳಿ ಜಮಾಅತಿನ ಸದಸ್ಯರಲ್ಲಿ ಒಂದು ಆವೇಶ ಮತ್ತು ಹುರುಪು ಉಂಟಾಯಿತು. ಅವರು ವಖ್ಫೇ ಜದೀದ್ ಮಾತ್ರವಲ್ಲ, ಇತರ ಎಲ್ಲ ಚಂದಾಗಳನ್ನು ವರ್ಧಿಸಿ ಪಾವತಿಸಿದರು.

ಲಿಯೋಟನ್ ಎಂಬ ಸ್ಥಳದಲ್ಲಿ 18 ಮನೆಗಳನ್ನು ಸಂಪರ್ಕಿಸಲಾಯಿತು. ಅದರ ಪರಿಣಾಮವಾಗಿ 13 ಲಕ್ಷ ಲಿಯೊನ್ ಒಂದೇ ದಿನದಲ್ಲಿ ವಸೂಲು ಮಾಡಲಾಯಿತು. ಎರಡು ಅಹ್ಮದಿ ಸ್ಕೂಲ್‌ಗಳ ವಿದ್ಯಾರ್ಥಿಗಳು ಒಂದೇ ದಿನ 3 ಲಕ್ಷ ಲಿಯೊನ್ ಒಂದೇ ದಿನ ವಖ್ಫೇ ಜದೀದಿಗೆ ಪಾವತಿಸಿದರು. ಅನಂತರ 2ಲಕ್ಷದಷ್ಟು ವರ್ಧಿಸಿ ಕೊಟ್ಟರು. ಲಯೊಟನಿನಲ್ಲಿ ಒಬ್ಬ ಹುಡುಗಿಯಾದ ಮುಸ್ಲಿಮ ಗೋಫೂನ 50 ಸಾವಿರ ಲಿಯೊನ್ ಪಾವತಿಸಿದಳು ಮತ್ತು ಖಲೀಫತುಲ್ ಮಸೀಹರಿಗೆ ಇದಕ್ಕೆ ಸಂಬಂಧಿಸಿ ಪತ್ರ ಬರೆದು ತಿಳಿಸಲು ಹೇಳಿದಳು. ಐದು ವಿದ್ಯಾರ್ಥಿಗಳು ಕೆಲಸಗಳನ್ನು ಮಾಡಿಕೊಂಡು ಅದರಿಂದ ಸಿಗುವ ಕೂಲಿಯಿಂದ 50 ಸಾವಿರ ಲಿಯೊನ್ ವಖ್ಫೇ ಜದೀದಿಗೆ ಚಂದವಾಗಿ ಸಮರ್ಪಿಸಿದರು. ಇವರು ಖಲೀಫರ ಆಜ್ಞೆಗೆ ಲಬ್ಬೈಕ್ ಹೇಳಿ ತ್ಯಾಗಗಳನ್ನು ಮಾಡಲು ತಯಾರಾಗುವ ಜನರಾಗಿದ್ದಾರೆ. ಎಂದಿಗೂ ಖಲೀಫರನ್ನು ಭೇಟಿಯಾಗಲಿಲ್ಲ. ಆದರೆ ಅವರ ಹೃದಯಗಳಲ್ಲಿ ಖಿಲಾಫತ್‌ನೊಂದಿಗೆ ಪ್ರೀತಿ ಮತ್ತು ಗೌರವ ಇದೆ. ಆದ್ದರಿಂದ ಅಲ್ಲಾಹನಿಗಾಗಿ ಪ್ರತಿಯೊಂದು ತ್ಯಾಗಕ್ಕೆ ತಯಾರಾಗಿರುತ್ತಾರೆ. ಇದೇ ಪ್ರೀತಿಯ ಇನ್ನೊಂದು ಉದಾಹರಣೆಯನ್ನು ನೋಡಿರಿ. ಅದು ಸಹ ಲಿಯೊಟನ್ ಜಮಾಅತಿನದ್ದಾಗಿದೆ. ಮುಬಲ್ಲಿಗ್ ಸಾಹಿಬ್‌ರು ಹೇಳುತ್ತಾರೆ: ನಾನು ಏಸ್ಸರ ಮನೆಗೆ ಹೋಗಿ ಚಂದಾದ ಬಗ್ಗೆ ಹೇಳಿದೆ ಮತ್ತು ಖುತ್ಬದ ಉಲ್ಲೇಖವನ್ನು ಓದಿ ಹೇಳಿದೆ. ಸಿರಲಿಯೋನನಲ್ಲಿ ಜಮಾಅತಿನ ಸದಸ್ಯರು ತ್ಯಾಗಗಳನ್ನು ಮಾಡಲು ತಯಾರಿದ್ದಾರೆ ಎಂದು ನಾನು ಹೇಳಿದ್ದನ್ನು ಓದಿ ಹೇಳಿದರು. ಬಹಳ ವಿಕಾರಭರಿತರಾಗಿ ಅವರ ಪತ್ನಿ ಹೇಳಿದರು: ಖಲೀಫತುಲ್ ಮಸೀಹರು ಸರಿಯಾಗಿ ಹೇಳಿದ್ದಾರೆ. ಆದರೆ ನನ್ನ ಸ್ಥಿತಿ ಈಗ ಏನೆಂದರೆ ಮನೆಯಲ್ಲಿ ಏನೂ ಇಲ್ಲ. ಅಷ್ಟರಲ್ಲಿ ಕುಳಿತುಕೊಂಡಿರುವಾಗಲೇ ಯಾವುದೇ ನಿರೀಕ್ಷೆಯಿಲ್ಲದೆ ಸ್ವಲ್ಪ ಹಣ ಒಬ್ಬರು ತಂದು ಕೊಟ್ಟರು. ಅದನ್ನು ಅವರು ಮುಬಲ್ಲಿಗ್‌ರೊಂದಿಗೆ ಬಂದಿದ್ದ ಸೆಕ್ರೆಟರಿ ಮಾಲಿಗೆ ಕೊಟ್ಟು ರಶೀದಿ ಕೊಡಲು ಹೇಳಿದರು. ಅದನ್ನು ಎಣಿಸಿದಾಗ ಅದು 2ಲಕ್ಷ ಲಿಯೊನ್ ಇತ್ತು ಎಂದು ಗೊತ್ತಾಯಿತು. ಅದನ್ನು ಪೂರ್ತಿಯಾಗಿ ಚಂದದಲ್ಲಿ ಕೊಟ್ಟರು. ಚಂದ ಸಂದಾಯ ಮಾಡಿದ ಕಾರಣದಿಂದ ಬಹಳ ಸಮಾಧಾನ ಮತ್ತು ಸಂತೋಷದಿಂದ ಇದ್ದರು. ಯಾವುದೇ ದೂರು ಇರಲಿಲ್ಲ. ನೀವು ತಪ್ಪಾದ ಸಮಯದಲ್ಲಿ ಬಂದಿದ್ದೀರಿ. ಈಗ ನಮಗೆ ಅದರ

ಆವಶ್ಯಕತೆಯಿತ್ತು. ಎಲ್ಲವನ್ನು ನೀವು ತೆಗೆದಿದ್ದೀರಿ ಎಂಬ ರೀತಿಯ ಯಾವ ದೂರೂ ಅವರಿಗೆ ಇರಲಿಲ್ಲ. ಈ ಹಣದಿಂದ ಸ್ವಲ್ಪ ಮನೆಯ ಆವಶ್ಯಕತೆಗಾಗಿ ಇರಿಸಿರಿ ಎಂದು ಮುಬಲ್ಲಿಗ್ ಸಾಹಿಬ್‌ರು ಹೇಳಿದರು. ಅವರು ಹೇಳಿದರು: ಅದರ ಪರಿವೆಯಿಲ್ಲ. ಏನೂ ಇರಿಸುವ ಆವಶ್ಯಕತೆಯಿಲ್ಲ. ಆದರೆ ಸ್ವಲ್ಪ ಸಮಯದಲ್ಲೇ ಅವರಿಗೆ ಎಲ್ಲಿಂದಲೋ ಸ್ವಲ್ಪ ಹೆಚ್ಚು ಹಣ ಬಂತು. ಈ ರೀತಿಯಲ್ಲಿ ಅವರ ಆಹಾರ ಪಾನಿಯದ ವ್ಯವಸ್ಥೆಯಾಯಿತು. ಅಲ್ಲಾಹನು ಸಾಲವಾಗಿ ಅದನ್ನು ತನ್ನ ಬಳಿ ಇರಿಸಲಿಲ್ಲ.

ಕಿರ್ಗಿಸ್ತಾನದ ಮುಬಲ್ಲಿಗ್ ಸಾಹಿಬರು ಬರೆಯುತ್ತಾರೆ: ಕಿರ್ಗಿನ ಒಬ್ಬ ನಿಷ್ಠಾವಂತ ಅಹ್ಮದಿಯಾದ ಖುವ್ವತ್ ಸಾಹಿಬ್‌ರು ಬಶ್‌ಕೀಕ್‌ನಲ್ಲಿ ನೆಲೆಸಿರುವರು. ಅವರು ವಖ್ಫೇ ಜದೀದಿಗಾಗಿ ಒಂದು ಸಾವಿರ ಸುಮ್ ಕರೆನ್ಸಿಯನ್ನು ಕೊಡುವುದಾಗಿ ವಾಗ್ದಾನ ಮಾಡಿದ್ದರು. ಸುಮ್ ಎಂಬುದು ಕಿರ್ಗಿನ ಕರನ್ಸಿ ಆಗಿದೆ. ಸಾಂಪತ್ತಿಕ ವರ್ಷ ಕೊನೆಗೊಳ್ಳುವುದಕ್ಕೆ ಒಂದು ತಿಂಗಳಿಗೆ ಮುಂಚಿತವಾಗಿ ಅಲ್ಲಿನ ಜಮಾಅತಿನ ಸದರ್ ಖುತ್ಬದಲ್ಲಿ ವಖ್ಫೇ ಜದೀದಿನ ಚಂದದ ಪ್ರಾಮುಖ್ಯದ ಬಗ್ಗೆ ಬೆಳಕು ಬೀರಿದರು. ಅವರು ಖುತ್ಬದಲ್ಲಿ ಖಲೀಫತುಲ್ ಮಸೀಹರು ಕಳೆದ ವರ್ಷ ಖುತ್ಬದಲ್ಲಿ ಹೇಳಿದ್ದ ಕೆಲವು ಘಟನೆಗಳನ್ನು ಓದಿ ಹೇಳಿದರು. ಅಲ್ಲಿಯ ವರೆಗೆ ನಾನು ವಾಗ್ದಾನ ಮಾಡಿದ್ದ ಒಂದು ಸಾವಿರ ಸುಮ್ ಕರೆನ್ಸಿಯಲ್ಲಿ 200 ಸುಮ್ ಮಾತ್ರ ಸಂದಾಯ ಮಾಡಿದ್ದೆ. ಸಂಪೂರ್ಣವಾಗಿ ಪಾವತಿಸಲು ಸೌಭಾಗ್ಯ ಸಿಕ್ಕಿರಲಿಲ್ಲ. ಅವರಿಗೆ ರೋಗಿಯಾಗಿರುವ ಒಬ್ಬ ಸಹೋದರಿ ಇದ್ದರು. ಅವಳಿಗಾಗಿ ಪ್ರತಿ ತಿಂಗಳು ನಾಲ್ಕು ಸಾವಿರ ಸುಮ್ ಸರ್ಕಾರ ನೀಡುತ್ತಿತ್ತು. ಆ ದಿನ ಜುಮಾದ ನಂತರ ಇವರು ಸಹೋದರಿಯ ಪೆನ್ಶನ್ ಪಡೆಯಲು ಎಟಿಎಂ ಮಿಶನಿನಲ್ಲಿ ಕಾರ್ಡ್ ಹಾಕಿದರು. ಅಕೌಂಟಿನಲ್ಲಿ ಹತ್ತು ಸಾವಿರ ಸುಮ್ ಇತ್ತು. ಈ ಹಣ ಸಾಕಾಗುತ್ತಿಲ್ಲ. ಆದ್ದರಿಂದ ಅಲೌನ್ಸ್ ವರ್ಧಿಸಿ ಕೊಡಬೇಕೆಂದು ಹೇಳಿ ಒಂದು ವಾರಕ್ಕೆ ಮುಂಚೆ ಅವರ ತಾಯಿ ಸರ್ಕಾರಕ್ಕೆ ಪತ್ರ ಬರೆದಿದ್ದರು. ಅದೇ ಹಣ ಬಂದಿರಬಹುದೆಂದು ನಾನು ಭಾವಿಸಿದ್ದೆ. ಆದರೆ ನಾವು ನಮ್ಮ ವಾಗ್ದಾನದ ಪ್ರಕಾರ ಐದು ಸಾವಿರ ಸುಮ್ ನೀಡುವೆವು ಎಂದು ಹೇಳಿ ಬೆಳಿಗ್ಗೆ ಸರ್ಕಾರದಿಂದ ಫೋನ್ ಬಂತು. ಹೀಗೆ ಹೆಚ್ಚಿನ ಐದು ಸಾವಿರ ಸಿಕ್ಕಿತ್ತು. ಹೀಗೆ ಚಂದಾಗಾಗಿ ಖರ್ಚು ಮಾಡಿದ್ದ ಹಣದಷ್ಟು ಅಕೌಂಟಿನಲ್ಲಿ ಬಂದಿತ್ತು. ಅದು ಎಲ್ಲಿಂದ ಬಂತು ಎಂದು ನಮಗೆ ಗೊತ್ತಿಲ್ಲ. ಇದು ನಿಮ್ಮದೇ ಹಣವಾಗಿದೆ. ಇದರೊಂದಿಗೆ ನಮ್ಮ ಯಾವ ಸಂಬಂಧವೂ ಇಲ್ಲವೆಂದು ಬ್ಯಾಂಕ್ ಹೇಳಿತು. ಇದು ಚಂದಾ ನೀಡಿದ್ದ ಅನುಗ್ರಹವಾಗಿತ್ತು. ಹೀಗೆ ತ್ಯಾಗಗಳು ವಿಶ್ವಾಸ ವರ್ಧನೆಗೆ ಕಾರಣವಾಗುತ್ತದೆ.

ತಸ್ಸಾನಿಯದ ಅಮೀರ್ ಸಾಹಿಬ್‌ರು ಹೇಳುತ್ತಾರೆ: ಝುಂಜ್‌ಬಾರ್ ಜಮಾಅತಿನ ಖೈರ್ ರಶೀದ್ ಸಾಹಿಬ್‌ರಿಗೆ ವರ್ಷದ ಕೊನೆಯಲ್ಲಿ ವಖ್ಫೇ ಜದೀದ್ ಚಂದಾದ ಬಗ್ಗೆ ನೆನಪಿಸಿ ಕೊಡಲಾಯಿತು. ಇದರ ಬಗ್ಗೆ ಹೇಳಲಾದ ಸಮಯದಲ್ಲಿ ಅವರಿಗೆ ಯಾವುದೇ ನೌಕರಿ ಅಥವಾ ಹಣವಿರಲಿಲ್ಲ. ಆದರೆ ಅಲ್ಲಾಹನು ಏನಾದರೂ ವ್ಯವಸ್ಥೆ ಮಾಡುವನು ಆದ್ದರಿಂದ ಸಂಪೂರ್ಣವಾಗಿ ಸಂದಾಯ ಮಾಡಿದ್ದ ವ್ಯಕ್ತಿಗಳ ಹೆಸರಲ್ಲಿ ನನ್ನ ಹೆಸರನ್ನು ಸೇರಿಸಲು ಮುಬಲ್ಲಿಗ್ ಸಾಹಿಬ್‌ರೊಡನೆ ಅವರು ಹೇಳಿದರು. ಎರಡು ದಿನಗಳ ನಂತರ ಅವರಿಗೆ ಡ್ರೈವರಾಗಿ ಕೆಲಸ ಸಿಕ್ಕಿತು. ಮೊದಲ ದಿನದ ಆದಾಯದಿಂದ ಸುಲಭವಾಗಿ ಅವರ ಮತ್ತು ಮಕ್ಕಳ ಕಡೆಯಿಂದ ವಖ್ಫೇ ಜದೀದಿನ ಚಂದಾವನ್ನು ಸಂದಾಯ ಮಾಡಿದರು. ಚಂದಾ ನೀಡುವ ನಿಯ್ಯತ್ತಿನ ಕಾರಣದಿಂದ ಸ್ಥಿರವಾದ ಆದಾಯ ವ್ಯವಸ್ಥೆ ಉಂಟಾಯಿತು. ಅವರು ಹೇಳುತ್ತಾರೆ: ನಮ್ಮ ವಿಶ್ವಾಸ ಸಹ ಇದರಿಂದ ಸುದೃಢವಾಗುತ್ತದೆ.

ತನ್ಸಾನಿಯದ ಅಮೀರ್ ಸಾಹಿಬ್ ಬರೆಯುತ್ತಾರೆ: ಅರೀಂಗ ರೀಜನಿನ ತಾಹಾ ಸಾಹಿಬ್‌ರಿಗೆ ವಖ್ಫೇ ಜದೀದಿನ ಚಂದಾದ ಅಸಾಧಾರಣವಾದ ಅನುಗ್ರಹಗಳನ್ನು ನೋಡಲು ಸೌಭಾಗ್ಯ ಸಿಕ್ಕಿತು. ಅವರ ವಖ್ಫೇ ಜದೀದಿನ ಚಂದದ ವಾಗ್ದಾನ ಸುಮಾರು 6 ಲಕ್ಷ ಶಿಲ್ಲಿಂಗ್ ಆಗಿತ್ತು. ಸಾಂಪತ್ತಿಕ ಕಷ್ಟತೆಯ ಕಾರಣದಿಂದ ಅವರು ನನಗೆ ನವೆಂಬರಿನಲ್ಲಿ ಪತ್ರ ಬರೆದಿದ್ದರು. ದೇಶದ ಮತ್ತು ವ್ಯಾಪಾರದ ಸ್ಥಿತಿ ತುಂಬ ಕೆಟ್ಟಿದೆ. ಅಲ್ಲಾಹನು ನೀಡಿದ ಸೌಭಾಗ್ಯದಿಂದ ವಖ್ಫೇ ಜದೀದಿನ ಚಂದಾವನ್ನು ಪೂರ್ತಿಯಾಗಿ ನೀಡಲು ಸಾಧ್ಯವಾಗಲಿ ಎಂದು ದುಆ ಮಾಡಲು ಹೇಳಿದರು. ಇವರು ಕೇವಲ ವೈಯಕ್ತಿಕ ಆವಶ್ಯಕತೆಗಾಗಿ ನನಗೆ ಪತ್ರ ಬರೆಯುವುದಿಲ್ಲ. ಚಂದಾ ಮಾಡಲು ದುಆ ಮಾಡಬೇಕೆಂದು ಹೇಳಿ ಚಿಂತೆಯಿಂದ ಬರೆಯುತ್ತಾರೆ. ಚಂದಗಳನ್ನು ಸಂದಾಯ ಮಾಡುವಂತಾಗಲು ಕೆಲವರು ನಮಾಝ್ ಮತ್ತು ತಹಜ್ಜುದ್ ನಿರ್ವಹಿಸುತ್ತಾರೆ. ತಮ್ಮ ವೈಯಕ್ತಿಕ ಆವಶ್ಯಕತೆಗಳಿಗೆ ಅಲ್ಲ. ಅವರು ಹೇಳುತ್ತಾರೆ: ಪತ್ರ ಬರೆದ ಕೂಡಲೆ ಮನಸ್ಸಮಾಧಾನವುಂಟಾಯಿತು. ಇನ್ಶಾ ಅಲ್ಲಾಹ್, ಏನಾದರೂ ವ್ಯವಸ್ಥೆ ಆಗಬಹುದು ಎಂದು ಅನಿಸುತ್ತಿತ್ತು.ಪತ್ರ ಬರೆದು 24 ಗಂಟೆಗಳು ಕಳೆದಿರಬಹುದು. ಯಾರದ್ದೋದೋ ಶಿಫಾರಸ್ಸಿನಿಂದ ನನ್ನ ಬಳಿ ಒಬ್ಬ ವ್ಯಕ್ತಿ ವ್ಯಾಪಾರಕ್ಕೆ ಸಂಬಂಧಿಸಿ ಸಲಹೆ ಪಡೆಯಲು ಕನ್ಸಲ್ಟೇಶನಿಗಾಗಿ ಬಂದರು. ಅವರು 15ವರ್ಷಗಳ ಹಿಂದೆ ನನ್ನ ಸಹಪಾಠಿ ಆಗಿದ್ದರು ಎಂದು ಅವರನ್ನು ಭೇಟಿಯಾದಾಗ ಗೊತ್ತಾಯಿತು. ಕೆಲಸಕ್ಕೆ ಸಂಬಂಧಿಸಿ ಮಾತುಕತೆಗಳು ನಡೆಯಿತು. ಅನಂತರ ಅವರ ಮೂಲಕ ಆರು ಮಿಲಿಯನ್ ಶಿಲ್ಲಿಂಗಿನ ಒಂದು ಕೋಂಟ್ರಾಕ್ಟ್ ನನಗೆ ಸಿಕ್ಕಿತು. ಅಲ್ಲಾಹನು ನಾನು ವಾಗ್ದಾನ ಮಾಡಿದ್ದ ಚಂದಗಿಂತ ಹತ್ತು ಪಟ್ಟು ಹೆಚ್ಚಿನ ಹಣದ ವ್ಯವಸ್ಥೆಯನ್ನು ಮಾಡಿದನು. ಈ ಅಡ್ವಾನ್ಸ್‌ನಿಂದ ಮೊತ್ತಮೊದಲು ನಾನು ವಖ್ಫೇ ಜದೀದಿನ ವಾಗ್ದಾನವನ್ನು ಸಂದಾಯ ಮಾಡಿದೆ.

ಝುಂಜಬಾರ್ ಜಮಾಅತಿನ ಒಬ್ಬ ನವ ಅಹ್ಮದಿ ಜುಮಾ ಸಾಹಿಬ್ ಸಬ್‌ಝಿ ಮಂಡಿಯಲ್ಲಿ ಕೂಲಿಗೆಲಸ ಮಾಡುತ್ತಾರೆ. ವಖ್ಫೇ ಜದೀದಿನ ವಾಗ್ದಾನಕ್ಕೆ ಸಂಬಂಧಿಸಿ ಅವರೊಡನೆ ಹೇಳಲಾದ ಸಮಯದಲ್ಲಿ ಲೋಡಿಂಗ್ ಅನ್‌ಲೋಡಿಂಗ್ ಆ ದಿನಗಳಲ್ಲಿ ಸ್ಥಗಿತಗೊಂಡಿತ್ತು. ಸಾಂಪತ್ತಿಕ ಸ್ಥಿತಿ ಕೆಟ್ಟುಹೋಗಿತ್ತು. ನಾನು ಮುಂಚೆ ಹೇಳಿದಂತೆ ಈ ಕೂಲಿಗೆಲಸ ಮಾಡುವ ನವಅಹ್ಮದಿ, ಬಡ ಅಹ್ಮದಿ ತಹಜ್ಜುದಿನಲ್ಲಿ ಕೆಲವು ದಿನಗಳು ಚಂದಾ ಸಂದಾಯ ಮಾಡುವ ಸೌಭಾಗ್ಯಕ್ಕಾಗಿ ವಿಶೇಷವಾಗಿ ದುಆ ಮಾಡಿದರು. ತನ್ನ ಅವಶ್ಯಕತೆಗಳು ಪೂರೈಸಲು ಅಥವಾ ಹೊಟ್ಟೆ ತುಂಬಿಸಲು ದುಆ ಮಾಡಿರಲಿಲ್ಲ. ಧನತ್ಯಾಗದಲ್ಲಿ ಹಿಂದಿರಬಾರದೆಂದು ದುಆ ಮಾಡಿದ್ದರು. ಹೀಗೆ ವಖ್ಫೇ ಜದೀದಿನ ವರ್ಷ ಪೂರ್ತಿಯಾಗುವ ಮೂರು ದಿನಗಳಿಗೆ ಮುಂಚಿತವಾಗಿ ಸ್ಥಗಿತಗೊಂಡಿದ್ದ ವ್ಯಾಪಾರ ಪುನಃ ಶುರುವಾದ ಕಾರಣ ಅವರಿಗೆ ಕೂಲಿಗೆಲಸ ಸಿಕ್ಕಿತು. ಅದರಿಂದ ಅವರು ತನ್ನ ಮತ್ತು ಮಕ್ಕಳ ಚಂದಾವನ್ನು ಸಂದಾಯ ಮಾಡುವ ಸೌಭಾಗ್ಯ ಪಡೆದರು. ಅವರು ಹೇಳುತ್ತಾರೆ: ಬೈಅತ್ ಮಾಡಿದ ಅಂದಿನಿಂದ ಅಲ್ಲಾಹನು ಚಂದದ ಅನುಗ್ರಹದಿಂದ ನನ್ನ ಸಂಪತ್ತಿನಲ್ಲಿ ಅಪರಿಮಿತವಾದ ಅನುಗ್ರಹಗಳನ್ನು ವರ್ಷಿಸಿದ್ದಾನೆ. ಈ ಜನರಿಗೆ ಚಿಂತೆ ಇರುವುದಾದರೆ, ಚಂದದ ಬಗ್ಗೆ. ತಹಜ್ಜುದಿನಲ್ಲಿ ಎದ್ದುಕೊಂಡು ಚಂದಾ ಸಂದಾಯ ಮಾಡುವ ಸೌಭಾಗ್ಯಕ್ಕಾಗಿ ದುಆ ಮಾಡುತ್ತಾರೆ. ಇದು ಹುಚ್ಚುತನವೆಂದು ಒಬ್ಬ ಲೌಕಿಕನಾದ ವ್ಯಕ್ತಿ ಹೇಳಬಹುದು. ಭೌತಿಕರ ದೃಷ್ಟಿಯಲ್ಲಿ ಮೂರ್ಖರಾದ ಈ ಜನರೇ ಅಲ್ಲಾಹನ ಪ್ರಿಯ ಜನರಾಗಿದ್ದಾರೆ. ಅವನು ಅವರ ಆವಶ್ಯಕತೆಗಳನ್ನು ಪೂರೈಸುತ್ತಾನೆ. ರಿಪೋರ್ಟಿನಲ್ಲಿ ವಿಸ್ಮಯಕರವಾದ ಘಟನೆಗಳು ಇರುತ್ತವೆ. ಗೇಂಬಿಯದ ಅಮೀರ್ ಸಾಹಿಬ್ ಬರೆಯುತ್ತಾರೆ: ನಾರ್ಥ್ ಬಂಕ್ ರೀಜನಿನ ಒಂದು ಗ್ರಾಮದ ಇಬ್ರಾಹೀಂ ಸಾಹಿಬರು ಉತ್ತಮ ವ್ಯಾಪಾರಿಯಾಗಿದ್ದರು. ಜನರು ತಮ್ಮ ಅಮಾನತ್ತುಗಳನ್ನು ಅವರಿಗೆ ಒಪ್ಪಿಸುತ್ತಿದ್ದರು. ಆ ಸಮಯದಲ್ಲಿ ಅವರು ಅಹ್ಮದಿಯಾಗಿರಲಿಲ್ಲ. ಕೆಲವು ಕಾರಣದಿಂದ ಅವರು ವ್ಯಾಪಾರದಲ್ಲಿ ದೀವಾಳಿಯಾದರು. ವ್ಯಾಪಾರವನ್ನು ಸುರಕ್ಷಿತಗೊಳಿಸಲು ಅವರಿಗೆ ಒಪ್ಪಿಸಲಾದ ಅಮಾನತ್ತಿನಿಂದ ಸಹ ಅವರು ಖರ್ಚು ಮಾಡಿದರು. ಅವರಿಗೆ ಒಪ್ಪಿಸಲಾದ ಅಮಾನತ್ತುಗಳನ್ನು ಸಹ ಮರಳಿಸಲು ಸಾಧ್ಯವಾಗಲಿಕ್ಕಿಲ್ಲವೆಂದು ಅನಿಸಿದಾಗ ಅವರು ಅವರ ತಂದೆಯರ ಊರಾದ ಗಿನಿಕನಾಕುರಿಗೆ ಹೋದರು. ಮೂರು ವರ್ಷಗಳ ತನಕ ಅಲ್ಲೇ ಇದ್ದರು. ಅನಂತರ ಮರಳಿ ಹೋಗಲು ತೀರ್ಮಾನಿಸಿದರು. ಅವರ ಹೃದಯಲ್ಲಿ ಒಳಿತಿತ್ತು. ಆದ್ದರಿಂದ ಈ ವಿಷಮ ಸ್ಥಿತಿಯನ್ನು ಎದುರಿಸಲು ತೀರ್ಮಾನಿಸಿದರು. ಜನರಿಗೆ ಹೇಗಾದರೂ ಹಣವನ್ನು ಕೊಡಬೇಕೆಂದು ತೀರ್ಮಾನಿಸಿದರು. ಹೀಗೆ ಅವರು ಗ್ರಾಮದ ಚೀಫ್ ಮತ್ತು ಡಿಸ್ಟ್ರಿಕ್ಟ್ ಚೀಫಿಗೆ ಫೋನ್ ಮಾಡಿದರು. ಒಂದು ಅವಕಾಶ ಕೊಡಲು ಮತ್ತು ಬಂಧಿಮಾಡದಿರಲು ವಿನಂತಿಸಿದರು. ಹೀಗೆ ಪರಿಶ್ರಮದಿಂದ ಕೆಲಸಮಾಡಿಕೊಂಡು ಜನರು ಅಮಾನತ್ತುಗಳನ್ನು ಮರಳಿ ಕೊಡುವ ಶರತ್ತಿನೊಂದಿಗೆ ಚೀಫ್ ಊರಿಗೆ ಮರಳಿ ಬರಲು ಅನುಮತಿ ಕೊಟ್ಟರು. ಹೀಗೆ ಮಾಡದಿದ್ದರೆ ಜೈಲಿಗೆ ಕಳಿಸಲಾಗುವುದು ಎಂದು ಹೇಳಿದರು. ಅವರು ಬಂದು ನಾಲ್ಕು ತಿಂಗಳಾದಾಗ ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಂದೇಶ ಲಭಿಸಿತು. ಹೀಗೆ ಅವರು ಅಹ್ಮದಿಯ್ಯತ್ ಸ್ವೀಕರಿಸಿದರು. ನಿಯತವಾಗಿ ಚಂದಗಳನ್ನು ನೀಡಲು ಶುರುಮಾಡಿದರು. ಅಲ್ಲಾಹನ ಅನುಗ್ರಹದಿಂದ ಚಂದದ ಪಾವತಿಯ ಕಾರಣದಿಂದ ಅವರ ಕೆಲಸದಲ್ಲಿ ಅಸಾಮಾನ್ಯವಾದ ಅನುಗ್ರಹ ಉಂಟಾಯಿತು. ಎರಡು ವರ್ಷಗಳಲ್ಲಿ ಅವರು ತನ್ನ 2ಲಕ್ಷ ಡಿಲಾಸಿಯಷ್ಟು ಇದ್ದ ಎಲ್ಲ ಸಾಲಗಳನ್ನು ತೀರಿಸಿದರು. ಮಾತ್ರವಲ್ಲ ಮನೆಯನ್ನು ಸಹ ಕಟ್ಟಿದರು. ಅಂಗಡಿಯನ್ನು ಪುನಃ ಸ್ಥಾಪಿಸಿದರು. ಈಗ ಅವರ ಕೆಲಸ ಮುಂಚೆಗಿಂತ ಬಹಳ ಉತ್ತಮಗೊಳ್ಳುತ್ತಿವೆ. ಇದೆಲ್ಲ ಚಂದದ ಅನುಗ್ರಹದಿಂದ ಉಂಟಾಯಿತು ಎಂದು ಅವರು ಸ್ವತಃ ಹೇಳುತ್ತಾರೆ.

ಆಸ್ಟ್ರೇಲಿಯ ಜಮಾಅತಿನ ಲಜ್ನ ಮೆಂಬರ್ ಆದ ಒಬ್ಬರು ಹೇಳುತ್ತಾರೆ: ನಾವು ಹೊಸ ಮನೆಗೆ ಶಿಫ್ಟ್ ಆದಾಗ ನಮ್ಮ ಆರ್ಥಿಕ ಸ್ಥಿತಿ ಉತ್ತಮವಾಗಿರಲಿಲ್ಲ. ಮನೆ ಬಾಡಿಗೆ ಸಹ ಹೆಚ್ಚಾಗಿತ್ತು. ಆವಶ್ಯಕವಾದ ಸಾಮಾನುಗಳನ್ನು ಖರೀದಿ ಮಾಡುವಂತಾಗಲು ಅಷ್ಟು ಹಣವೂ ಇರಲಿಲ್ಲ. ಇನ್ನೊಂದು ಕಡೆ ಚಂದದ ವರ್ಷ ಸಹ ಮುಕ್ತಾಯಗೊಳ್ಳುತ್ತಿತ್ತು. ನಾನು ಅಲ್ಲಾಹನ ಮೇಲೆ ಭರವಸೆ ಇಟ್ಟುಕೊಂಡು ಚಂದಾ ಸಂದಾಯ ಮಾಡಿದೆ. ಇವರು ಶ್ರೀಮಂತ ದೇಶದಲ್ಲಿ ಇರುವ ಸ್ತ್ರೀಯಾಗಿದ್ದಾರೆ. ಬಡದೇಶದ ಸ್ತ್ರೀಯಲ್ಲ. ಯಾರನ್ನು ಬೇಡುವಂತಾಗದಿರಲು, ಅಲ್ಲಾಹನೇ ಆವಶ್ಯಕತೆಗಳನ್ನು ಪೂರೈಸಲು ಅವರು

ದುಆ ಮಾಡಿದರು. ಅದೇ ದಿನ ಸಂಜೆಗೆ ನನ್ನ ಗಂಡ ಮನೆಗೆ ಬಂದು ಸ್ವಲ್ಪ ಹಣವನ್ನು ಕೊಟ್ಟು ಹೇಳಿದರು: ಇಂದು ನನ್ನ ಆಫಸರಿಂದ ನನಗೆ ಬೋನಸ್ ಸಿಕ್ಕಿದೆ. ಇದು ನನಗೆ ಮಾತ್ರ ಸಿಕ್ಕಿದೆ. ಬೇರೆ ಉದ್ಯೋಗಿಗಳಿಗೆ ಸಿಗಲಿಲ್ಲ ಎಂದು ಹೇಳಿದರು. ನಾನು ಚಂದಾವಾಗಿ ಸಂದಾಯ ಮಾಡಿದ ಹಣಕ್ಕಿಂತ ಅದು ಎರಡು ಪಟ್ಟು ಇತ್ತು. ಅಲ್ಲಾಹನ ಈ ಅನುಗ್ರಹ ಮತ್ತು ಕೃಪೆಯಿಂದ ನಾನು ಅಚ್ಚರಿಗೊಂಡೆನು. ಅಲ್ಲಾಹನಿಗಾಗಿ ತ್ಯಾಗವಮಾಡುವವರನ್ನು ಅವನು ನಿಸ್ಸಹಾಯಕನಾಗಿ ಬಿಡುವುದಿಲ್ಲವೆಂದು ನನಗೆ ದೃಢವಿಶ್ವಾಸವುಂಟಾಯಿತು.

ಭಾರತದಿಂದ ಖಮರುದ್ದೀನ್ ಸಾಹಿಬ್ ಬರೆಯುತ್ತಾರೆ: ಸಾಂಪತ್ತಿಕ ವರ್ಷದ ಕೊನೆಯಲ್ಲಿ ನಾಝಿಂ ವಖ್ಫೇ ಜದೀದ್ ಸಾಹಿಬ್‌ರೊಂದಿಗೆ ಪರ್ಯಟನೆ ಮಾಡುತ್ತಾ ಕಾಲಿಕೆಟ್ ತಲುಪಿದೆ. ಈ ವೇಳೆಯಲ್ಲಿ ಒಬ್ಬ ಅಹ್ಮದಿಯಾದ ಹನೀಫ್ ಸಾಹಿಬ್‌ರ ಮನೆಗೂ ಹೋದೆವು. ಅವರು 8 ವರ್ಷಗಳ ಹಿಂದೆ ಬೈಅತ್ ಮಾಡಿದ್ದರು. ಅವರು ಕೂಲಿಗೆಲಸ ಮಾಡುತ್ತಾ ಜೀವನ ಸಾಗಿಸುತ್ತಿದ್ದರು. ಅವರ ಮನೆಗೆ ಹೋದಾಗ ಅವರ ಹತ್ತು ವಯಸ್ಸಿನ ಮಗ ತನ್ನ ಹಣದ ಪೆಟ್ಟಿಗೆಯನ್ನು ತೆಗೆದುಕೊಂಡು ಬಂದನು. ಅವನ ವಖ್ಫೇ ಜದೀದ್ ಚಂದಾವನ್ನು ಪಾವತಿಸುತ್ತಾ ಹನೀಫ್ ಸಾಹಿಬ್‌ರು ಹೇಳಿದರು: ಅವನು ಈ ಚಂದಾವನ್ನು ವಖ್ಫೇ ಜದೀದಿಗಾಗಿ ವರ್ಷ ಪೂರ್ತಿ ಒಟ್ಟುಗೂಡಿಸಿಟ್ಟಿದ್ದನು. ಅದನ್ನು ತೆರೆದಾಗ ಅದರಲ್ಲಿ ಹಿರಿದಾದ ಮೊಬಲಗು ಇತ್ತು. ನಾಝಿಂ ಸಾಹಿಬ್ ಆ ಹುಡುಗನೊಡನೆ ಕೇಳಿದರು: ಸಾಮಾನ್ಯವಾಗಿ ಮಕ್ಕಳು ತಮಗೆ ಇಷ್ಟವಿರುವ ವಸ್ತುಗಳನ್ನು ಖರೀದಿಮಾಡಲು ಹಣವನ್ನು ಒಟ್ಟುಗೂಡಿಸುತ್ತಾರೆ. ನೀನೇಕೆ ವಖ್ಫೇ ಜದೀದ್ ಚಂದಾಗಾಗಿ ಇದನ್ನು ನೀಡುತ್ತಿದ್ದೀಯಾ? ಅವನು ಅದಕ್ಕೆ ಉತ್ತರವಾಗಿ ಹೇಳಿದ್ದುದರ ಸಾರ ಹೀಗಿತ್ತು: ಅಲ್ಲಾಹನು, ಹಝ್ರತ್ ಪೈಗಂಬರ್(ಸ) ಮತ್ತು ಆದರಣೀಯ ಖ಼ಲೀಫರು ಅಲ್ಲಾಹನ ಮಾರ್ಗದಲ್ಲಿ ಖರ್ಚುಮಾಡಲು ಆದೇಶಿಸುತ್ತಾರೆ. ಆದ್ದರಿಂದಲೇ ಈ ಹಣವನ್ನು ಚಂದಾ ವಖ್ಫೇ ಜದೀದಿಗಾಗಿ ನೀಡುತ್ತಿದ್ದೇನೆ. ಇದಾಗಿದೆ ಅಹ್ಮದೀ ಮಕ್ಕಳ ತರಬೇತಿ. ಯಾವ ಜಮಾಅತಿನ ಮಕ್ಕಳ ಆಲೋಚನೆ ಹೀಗಿದೆಯೋ ಮತ್ತು ಯಾರ ತರಬೇತಿ ಹೀಗೆ ಮಾಡಲಾಗಿದೆಯೋ ಆ ಜಮಾಅತಿಗೆ ಅಹ್ಮದಿಯ್ಯತ್ತಿನ ವಿರೋಧಿಗಳಿಗೆ ನಷ್ಟವುಂಟು ಮಾಡಲು ಹೇಗೆ ಸಾಧ್ಯ? ವಿರೋಧಿಗಳು ಎಷ್ಟು ಶಕ್ತವಾಗಿ ಎದುರಿಸಿದರೂ ಸರಿ. ಅಲ್ಲಾಹನು ತನ್ನ ಧರ್ಮವನ್ನು ಲೋಕದಲ್ಲಿ ಹರಡಲು ಈ ಜಮಾಅತನ್ನು ಸ್ಥಾಪಿಸದ್ದಾನೆ. ಆದ್ದರಿಂದ ಪ್ರತಿ ಸಂದರ್ಭದಲ್ಲಿ ಅಲ್ಲಾಹನೇ ಅದಕ್ಕೆ ಆಸರೆಯಾಗುತ್ತಾನೆ. ಸಹಾಯ ಮಾಡುತ್ತಾನೆ. ಒಂದು ಪೀಳಿಗೆಯ ನಂತರ ಇನ್ನೊಂದು ಪೀಳಿಗೆಯ ಹೃದಯಗಳಲ್ಲಿ ಅದರ ಪ್ರೇಮ ಮತ್ತು ಅದರ ಉದ್ದೇಶವನ್ನು ಪೂರ್ತಿ ಮಾಡುವ ಹುರುಪನ್ನು ಉಂಟು ಮಾಡುತ್ತಾ ಹೋಗುತ್ತಾನೆ.

ತನ್ಸಾನಿಯದ ಅಮೀರ್ ಸಾಹಿಬ್ ಬರೆಯುತ್ತಾರೆ: ನೆರೆಕರೆಯ ದೇಶವಾದ ಮಲಾವಿ ಮುಂಕಿ ಮಗೋಚಿ ಜಮಾಅತಿನ ಮುಅಲ್ಲಿಂ ಸಾಹಿಬ್‌ರು ಹೇಳುತ್ತಾರೆ: ಒಬ್ಬ ಸಹೋದರನಾದ ಇಬ್ರಾಹೀಂ ಸಾಹಿಬ್ ಮಾಂಸ ಮಾರಾಟದ ವ್ಯಾಪಾರವನ್ನು ಮಾಡುತ್ತಿದ್ದರು. ಅವರು ಈ ವರ್ಷ ಐದು ಸಾವಿರ 8ನೂರು ಮಲಾವಿಯನ್ ಕವಾಚ ಕರೆನ್ಸಿಯ ವಾಗ್ದಾನ ವಖ್ಫೇ ಜದೀದ್‌ಗಾಗಿ ಮಾಡಿದ್ದರು. ವರ್ಷದಲ್ಲಿ ಸ್ವಲ್ಪ ಸ್ವಲ್ಪ ಸಂದಾಯ ಮಾಡುತ್ತಿದ್ದರು. ಡಿಸೆಂಬರ್ ತನಕ ಸ್ವಲ್ಪ ಸಂದಾಯ ಮಾಡಲು ಬಾಕಿಯಿತ್ತು. ಆದರೆ ದೇಶದ ಸ್ಥಿತಿಯ ಕಾರಣದಿಂದ ವ್ಯಾಪಾರ ನಿಂತುಹೋಯಿತು. ಅವರು ಸಾಲ ಪಡೆದು ವಾಗ್ದಾನವನ್ನು ಪೂರ್ತಿ ಮಾಡಿದರು. ಒಂದು ವಾರದಲ್ಲಿ ಅವರು ಪುನಃ ಕೆಲಸವನ್ನು ಶುರುಮಾಡಿ ಮಾಂಸವನ್ನು ಮಾರಾಟ ಮಾಡಲು ಆಡನ್ನು ಖರೀದಿ ಮಾಡಿದರು. ಕೆಲವೇ ದಿನಗಳಲ್ಲಿ ಎಷ್ಟು ಅನುಗ್ರಹ ಉಂಟಾಯಿತೆಂದರೆ, ಅವರ ಎಲ್ಲ ಸಾಲಗಳು ಸಂದಾಯಗೊಂಡಿತು. ಭರವಸೆ ಮತ್ತು ತ್ಯಾಗದ ಮನೋಭಾವವಿರುವ ಈ ಬಡಜನರು ಚಂದ ನೀಡುವಾಗ ಅಲ್ಲಾಹನು ಸಹ ಅನುಗ್ರಹ ಸುರಿಸುತ್ತಾನೆ. ದೇಶದ ಸ್ಥಿತಿ ಹಾಗೆಯೇ ಇತ್ತು. ಆದರೆ ಅಲ್ಲಾಹನು ಅವರ ಸ್ಥಿತಿಯನ್ನು ಬದಲಿಸಿದನು.

ಮಲಾವಿಯ ಜಮಾಅತಾದ ಮವಾಲದ ಮುಅಲ್ಲಿಮ್ ಸಾಹಿಬ್‌ರು ಹೇಳುತ್ತಾರೆ: ನಮ್ಮ ಜಮಾಅತಿನಲ್ಲಿ ಮಟ್‌ನಬ ಎಂಬ ಹೆಸರಿನ ವಿಧವೆಯಾದ ಒಬ್ಬ ಸ್ತ್ರೀ ಇದ್ದಾರೆ. ಪ್ರತಿ ವರ್ಷ ತನ್ನ ಸಾಮರ್ಥ್ಯಕ್ಕೆ ಅನುಸಾರ ಚಂದಾವನ್ನು ನೀಡುತ್ತಿದ್ದರು. ಈ ವರ್ಷ ವಖ್ಫೇ ಜದೀದಿಗಾಗಿ ಸ್ವಲ್ಪ ಹಣದ ವಾಗ್ದಾನವನ್ನು ಮಾಡಿದ್ದರು. ವರ್ಷದ ನಡುವೆ ಇತರ ಸ್ತ್ರೀಯರಿಗಿಂತ ಮುಂಚಿತವಾಗಿ ಚಂದಾವನ್ನು ಪೂರ್ತಿಯಾಗಿ ಸಂದಾಯ ಮಾಡುವ ಸೌಭಾಗ್ಯವನ್ನು ಸಹ ಪಡೆದರು. ಚಂದಾವನ್ನು ಪೂರ್ತಿಯಾಗಿ ಸಂದಾಯ ಮಾಡಿದ ಅಂದಿನ ರಾತ್ರಿ ಅವರು ಒಂದು ಕನಸನ್ನು ಕಂಡರು. ಇಂದಿನಿಂದ ನಿನ್ನ ಕೆಲಸಗಳಲ್ಲಿ ಅಲ್ಲಾಹನು ನೆರವು ನೀಡುವನು ಎಂದು ಕನಸಿನಲ್ಲಿ ಹೇಳಲಾಯಿತು. ಮುಂದಿನ ದಿನ ಅವರು ಮುಅಲ್ಲಿಮ್ ಸಾಹಿಬ್‌ರ ಬಳಿಗೆ ಬಂದರು. ವಖ್ಫೇ ಜದೀದ್ ಚಂದಕ್ಕೆ ಹೆಚ್ಚಿನ ಹಣವನ್ನು ನೀಡಿದರು. ಚಂದಾದ ಅನುಗ್ರಹದಿಂದ ಅಲ್ಲಾಹನು ಅವರ ಕೃಷಿಯಲ್ಲಿ ಬಹಳ ವರ್ಧನೆ ಮಾಡುತ್ತಾನೆ ಎಂದು ಅವರು ಹೇಳುತ್ತಾರೆ. ಈಗಂತು ನಿನ್ನ ಸಹಾಯವನ್ನು ನಾನು ಸ್ವತಃ ಮಾಡುವೆನು ಎಂದು ಅಲ್ಲಾಹನು ನನ್ನೊಡನೆ ಹೇಳಿದ್ದಾನೆ ಎಂದು ಅವರು ಹೇಳುತ್ತಾರೆ. ಕೆಲವು ವೇಳೆ ಹೇಗೆ ಅಲ್ಲಾಹನು ಬೇಗನೇ ವಿಶ್ವಾಸ ವರ್ಧನೆಯನ್ನು ಉಂಟು ಮಾಡುತ್ತಾನೆ ಎಂದು ನೋಡಿರಿ.

ಅಲ್‌ಬಾನಿಯದ ಮುಬಲ್ಲಿಗ್ ಬರೆಯುತ್ತಾರೆ: ಒಬ್ಬ ಸಹೋದರನಾದ ಮೈಕ್ಲಸ್ ಬಿಯಾ ಸಾಹಿಬ್‌ರು ಮೂರು ವರ್ಷಗಳ ಹಿಂದೆ ಬೈಅತ್ ಮಾಡಿದ್ದರು. ಅವರು ಜಮಾಅತಿನ ಸೆಕ್ರಟರಿ ತಬ್ಲೀಗ್ ಸಹ ಆಗಿರುವರು. ಬಹಳ ಕ್ರಿಯಾಶೀಲ ಖಾದಿಂ ಆಗಿದ್ದಾರೆ. ಒಂದು ದಿನ ಅವರು ತನ್ನೊಂದಿಗೆ ಒಂದು ಡಬ್ಬವನ್ನು ತೆಗೆದುಕೊಂಡು ಬಂದರು. ಅದು ಹಣದಿಂದ ತುಂಬಿತ್ತು. ಅವರು ಹೇಳಿದರು: ಉಳಿತಾಯವಾಗುವ ಹಣವನ್ನು ಅದರಲ್ಲಿ ಜಮಾಅತಿನ ಚಂದಾಗಾಗಿ ಹಾಕುವ ಉದ್ದೇಶದಿಂದ ಅವರು ಒಂದು ತಿಂಗಳಿಂದ ಆ ಡಬ್ಬವನ್ನು ತನ್ನ ವಾಹನದಲ್ಲಿ ಇರಿಸಿದ್ದರು. ಹೀಗೆ ಅವರು ಮೊದಲ ಬಾರಿ ತುಂಬಿದ ಡಬ್ಬವನ್ನು ತೆಗೆದುಕೊಂಡು ಬಂದರು. ಅದರಲ್ಲಿ ಒಂದು ಭಾಗವನ್ನು ನಾಲ್ಕು ತಿಂಗಳ ಮಗುವಾದ ಬಿಯೋರನ್ ಬಿಯೋದ ಪರವಾಗಿ ತಹ್ರೀಕ್ ಜದೀದ್ ಮತ್ತು ವಖ್ಫೇ ಜದೀದ್ ಚಂದಾ ನೀಡಿದರು. ಉಳಿದ ಹಣವನ್ನು ತನ್ನ ಪರವಾಗಿ ತಹ್ರೀಕ್ ಜದೀದ್, ವಖ್ಫೇ ಜದೀದ್ ಮತ್ತು ಕಡ್ಡಾಯ ಚಂದಾವಾಗಿ ಪಾವತಿಸಿದರು. ಅದರ ನಂತರ ಪ್ರತಿ ತಿಂಗಳು ಹಣದ ಡಬ್ಬವನ್ನು ತುಂಬಿಸಿ ತರುತ್ತಿದ್ದರು. ವಖ್ಫೇ ಜದೀದಿನ ಸಂದರ್ಭದಲ್ಲಿ ಡಿಸೆಂಬರ್ ಕೊನೆಯಲಿ ಕೊನೆಯ ಜುಮಾದ ವೇಳೆ ತನ್ನ ಸಾಮರ್ಥ್ಯದ ಪ್ರಕಾರ ಸಾಕಷ್ಟು ದೊಡ್ಡ ಮೊಬಲಗಿನ ಧನತ್ಯಾಗವನ್ನು ಅವರು ಮಾಡಿದ್ದರು. ಅಹ್ಮದಿಯಾದ ನಂತರ ತ್ಯಾಗದ ಒಂದು ಆವೇಶ ಉಂಟಾಗುತ್ತದೆ. ಏಕೆಂದರೆ ಅವರು ಅಲ್ಲಾಹನ ಅನುಗ್ರಹಗಳ ದೃಶ್ಯಗಳನ್ನು ನೋಡುತ್ತಾರೆ.

ಯು.ಕೆ. ಜಮಾಅತಿನ ಸದರ್ ಹೇಳುತ್ತಾರೆ: ನಮ್ಮ ಟಾರ್ಗಟಿನಲ್ಲಿ ಸಾಕಷ್ಟು ಕೊರತೆಯಿತ್ತು. ನಾನು ಇದಕ್ಕಾಗಿ ತಹಜ್ಜುದ್‌ನಲ್ಲಿ ಎದ್ದುಕೊಂಡು ದುಆ ಮಾಡುತ್ತಿದ್ದೆ. ಒಂದು ದಿನ ನನ್ನ ಪತ್ನಿ ಒಬ್ಬರ ಹೆಸರು ಸೂಚಿಸುತ್ತಾ, ಅವರೊಡನೆ ಕೇಳಿದರೆ ಹೆಚ್ಚಿನ ಪಾವತಿ ಆಗುವುದುಎಂದು ಹೇಳಿದಳು. ಹೀಗೆ ಅವರನ್ನು ಸಂಪರ್ಕಿಸಲಾಯಿತು. ಆ ಕುಟುಂಬದವರು ತಮ್ಮ ಹೆಸರನ್ನು ಬಯಲು ಮಾಡಬಾರದೆಂಬ ಶರತ್ತಿನೊಂದಿಗೆ ಒಂದು ಸಾವಿರ ಪೌಂಡ್ ಪಾವತಿ ಮಾಡಿದರು. ಅದಲ್ಲದೇ ಒಂದು ಸಾವಿರ ಪೌಂಡ್ ತಮ್ಮ ಮಕ್ಕಳ ಪರವಾಗಿ ಸಹ ಪಾವತಿ ಮಾಡಿದರು. ಇದಲ್ಲದೇ ಸಹ ಆವಶ್ಯವಿದ್ದರೆ ಹೇಳಿರಿ ಎಂದು ಕೂಡ ಹೇಳಿದರು.

ಯು.ಕೆ.ಯಿಂದಲೇ ಇಸ್ಲಾಮಾಬಾದಿನ ಲಜ್ನ ಸೆಕ್ರಟರಿ ವಖ್ಫೇ ಜದೀದ್ ಹೇಳುತ್ತಾರೆ: ಯೂನಿವರ್ಸಿಟಿಯಿಂದ ಗ್ರಾಜುವೇಶನ್ ಮಾಡಿದ ನಂತರ ಮಕ್ಕಳ ಪರಿಪಾಲನೆಯಲ್ಲಿ ಮಗ್ನನಾಗಿದ್ದೆ. ಈಗ ನನ್ನ ಮಕ್ಕಳಿಗೆ ಐದು ಮತ್ತು ಎಂಟು ವರ್ಷಗಳಾಗಿವೆ. ಎಲ್ಲ ಚಂದಾಗಳು ಗಂಡನ ಆದಾಯದಿಂದಲೇ ಆಗುತ್ತಿದ್ದೆ. ನನ್ನ ಸ್ವಂತ ಅಕೌಂಟಿನಲ್ಲಿ ಮಕ್ಕಳ ಚೈಲ್ಡ್ ಬೆನಿಫಿಟಿನ ಹಣ ಮಾತ್ರ ಬರುತ್ತಿತ್ತು. ಅಲ್ಲಾಹನ ಮಾರ್ಗದಲ್ಲಿ ಖರ್ಚುಮಾಡಿದ್ದರೂ ಅದನ್ನು ಯಥಾರ್ಥ ಧನತ್ಯಾಗವೆಂದು ಹೇಳಲು ಸಾಧ್ಯವಿಲ್ಲವೆಂದು ನನಗೆ ಅನಿಸುತ್ತಿತ್ತು. ಹೀಗೆ ಈ ವರ್ಷ ಸೆಪ್ಟೆಂಬರಿನಲ್ಲಿ ನನ್ನ ಪ್ರಿನ್ಸಿಪಲ್ ಅಕೌಂಟಿನಿಂದ ಚಂದಾಗಾಗಿ ಸ್ಟಾಡಿಂಗ್ ಆರ್ಡರ್ ಮೂಲಕ ಚಂದಾ ವಸಿಯ್ಯತ್, ತಹ್ರೀಕ್ ಜದೀದ್ ಮತ್ತು ವಖ್ಫೇ ಜದೀದ್ ಅಲ್ಲದೆ, ನನ್ನ ತಾತ ಮತ್ತು ಚಿಕ್ಕಪ್ಪರ ಪರವಾಗಿಯೂ ಚಂದಗಳನ್ನು ನೀಡಲು ಶುರುಮಾಡಿದೆ. ಮಾಸಿಕ ಕಂತುಗಳನ್ನು ಯಥಾರ್ಥ ತ್ಯಾಗವಾಗುವ ರೀತಿಯಲ್ಲಿ ನಿಶ್ಚಯಿಸಿದೆ. ಅದೇ ತಿಂಗಳು ಹೆಚ್ಚಿನ ಎಕ್ಸ್‌ಪೀರಿಯನ್ಸ್‌ಗಾಗಿ ನಾನು ಮಕ್ಕಳ ಸ್ಕೂಲಿನಲ್ಲಿ ಟೀಚರ್ ಜಾಬಿಗಾಗಿ ಅರ್ಜಿಯನ್ನು ನೀಡಿದ್ದೆ. ಆದರೆ ಜಾಬ್ ಸಿಗುವ ಯಾವ ನಿರೀಕ್ಷೆಯೂ ಇರಲಿಲ್ಲ. ನನ್ನ ಅಕೌಂಟಿನಿಂದ ಮೊದಲ ಬಾರಿಗೆ ಚಂದವನ್ನು ನೀಡಲಾದ ಮರುದಿನ ನನಗೆ ಸ್ಕೂಲಿನಿಂದ ಇಂಟರ್‌ವ್ಯೂಗಾಗಿ ಕರೆ ಬಂತು. ನನ್ನ ಅಕೌಂಟಿನಂದ ಎರಡನೇ ಬಾರಿ ಚಂದಾವನ್ನು ಪಾವತಿಸಿದಾಗ ನನಗೆ ಅಸಿಸ್ಟೆಂಟ್ ಟೀಚರಿನ ಬದಲಿಗೆ ಬೇರೊಂದು ಮುಖ್ಯವಾದ ಕೆಲಸವನ್ನು ನೀಡಲಾಯಿತು. ಇದರಿಂದ ನನ್ನ ಆದಾಯ ಹತ್ತು ಪಟ್ಟು ವರ್ಧಿಸಿತು. ಇದು ಅಲ್ಲಾಹನ ಮಾರ್ಗದಲ್ಲಿ ಮಾಡಿದ ಧನತ್ಯಾಗದ ಪರಿಣಾಮವಾಗಿದೆ ಎಂದು ನನಗೆ ದೃಢ ವಿಶ್ವಾಸವುಂಟಾಯಿತು.

ಜರ್ಮನಿಯ ಮುಬಲ್ಲಿಗ್‌ರಾದ ಫರ್‌ಹಾ ಸಾಹಿಬ್ ಹೇಳುತ್ತಾರೆ: ಲೋಕಲ್ ಇಮಾರತಾದ ವೀಝ್‌ಬಾದಿನಿನ ಒಬ್ಬ ಖಾದಿಮ್ ಹೇಳಿದರು. ಅವರು ತಹ್ರೀಕ್ ಜದೀದಿನ ಚಂದವನ್ನು ಸಂದಾಯ ಮಾಡಿದ್ದರು. ಮಾತ್ರವಲ್ಲ ವಖ್ಫೇ ಜದೀದಿಗಾಗಿ ಪಾವತಿಸಬೇಕಾದ ಹಣವನ್ನು ಸಹ ಹೆಚ್ಚಾಗಿ ತಹ್ರೀಕ್ ಜದೀದಿಗೆ ಕೊಟ್ಟಿದ್ದರು. ನೀವು ಸಂದಾಯ ಮಾಡಬೇಕಾದ 800 ಯೂರೋಸ್ ಇವೆ ಎಂದು ಹೇಳಿಕೊಂಡು ಅದೇ ತಿಂಗಳು ಟೇಕ್ಸ್ ಡಿಪಾರ್ಟ್‌ಮೆಂಟಿನಿಂದ

ಪತ್ರ ಬಂತು. ಆದಾಗ್ಯೂ ನಾನು ಧೈರ್ಯಮಾಡಿಕೊಂಡು ವಖ್ಫೇ ಜದೀದಿನ ಚಂದವನ್ನು ಸಂದಾಯ ಮಾಡಿದೆ. ಸಾಲವನ್ನು ಪಡೆದುಕೊಂಡು ಟೇಕ್ಸ್ ಸಹ ನೀಡಲು ತೀರ್ಮಾನಿಸಿದೆ. ಇದರ ಕೆಲವು ವಾರಗಳ ನಂತರ ಟೇಕ್ಸ್ ಡಿಪಾರ್ಟ್‌ಮೆಂಟಿನಿಂದ ಪತ್ರ ಬಂತು. ನಾವು ಪುನಃ ನಿಮ್ಮ ಡೊಕ್ಯೂಮೆಂಟ್‌ಗಳನ್ನು ಪರಿಶೀಲಿಸಿದ್ದೇವೆ. ನಿಮ್ಮ ಮೇಲೆ ಯಾವುದೇ ಟೇಕ್ಸ್ ಇಲ್ಲ. ಬದಲಿಗೆ ನಾವು ನಿಮಗೆ ನಾಲ್ಕು ಸಾವಿರ ನಾನ್ನೂರು ಯೂರೋ ಮರಳಿ ಕೊಡಬೇಕಾಗಿದೆ. ಕೆಲವು ದಿನಗಳಲ್ಲಿ ನನ್ನ ವಾಹನ ಅಪಘಾತದಲ್ಲಿ ಸಿಲುಕಿತು. ನಷ್ಟವುಂಟಾಯಿತು. ಬೇರೆ ಯಾರೋ ನಷ್ಟ ಉಂಟು ಮಾಡಿದ್ದರು. ನನಗೆ ಅದರ ನಾಲ್ಕು ಸಾವಿರ ಏಳುನೂರು ಯೂರೋ ಸಿಕ್ಕಿತು. ಸ್ವಲ್ಪ ಧೈರ್ಯ ತೋರಿಸಿ ಚಂದವನ್ನು ವರ್ಧಿಸಿ ಕೊಟ್ಟಿದ್ದೆ. ಅಲ್ಲಾಹನು ಅದನ್ನು ಪಾವತಿಸುವ ವ್ಯವಸ್ಥೆಯನ್ನು ಮಾಡಿದನು. ಇದನ್ನು ಯಾರಾದರೂ ಆಕಸ್ಮಿಕ ಘಟನೆ ಎಂದು ಹೇಳಬಹುದು. ಆದರೆ ಇದು ಅಲ್ಲಾಹನ ಅನುಗ್ರಹದ ಕಾರಣದಿಂದ ಆಗಿದೆ ಎಂದು ಒಬ್ಬ ಸತ್ಯವಿಶ್ವಾಸಿಗೆ ಗೊತ್ತಿದೆ.

ಕೆನಡದ ಲಜ್ನ ಸದರ್ ಹೇಳುತ್ತಾರೆ: ಒಬ್ಬ ಸಹೋದರಿಯ ಗಂಡ ಶಿಕ್ಷಣ ಪಡೆಯುವುದರಲ್ಲಿ ಮಗ್ನರಾಗಿದ್ದರು. ನೌಕರಿಯೊಂದಿಗೆ ಹೊರಗಿನ ಎಲ್ಲ ಜವಾಬ್ದಾರಿ ಅವರ ಮೇಲೆ ಬಂತು. ಈ ಆಯಾಸ ಉಂಟುಮಾಡುವ ದಿನಚರಿ ಅವರನ್ನು ದುರ್ಬಲಗೊಳಿಸಿತು. ಅವರು ರೋಗಿಯಾದರು. ಅದೇ ವೇಳೆ ವಖ್ಫೇ ಜದೀದ್ ಮತ್ತು ತಹ್ರೀಕ್ ಜದೀದಿನ ಸಮಯವಾದಾಗ ಅವರು ತಮ್ಮ ಆದಾಯಕ್ಕಿಂತ ಎರಡು ಪಟ್ಟು ಚಂದವನ್ನು ಬರೆಸಿದರು. ಕೆಲವು ಕಾಲದ ನಂತರ ಅವರು ಜಾಬ್ ಕೊನೆಗೊಂಡಿತು. ಕಠಿಣವಾದ ಸಂಕಷ್ಟಕ್ಕೆ ಸಿಲುಕಿದರು. ಕ್ರೆಡಿಟ್ ಕಾರ್ಡಿನಿಂದ ಖರ್ಚುಗಳನ್ನು ಪೂರೈಸಲು ಶುರುಮಾಡಿದರು. ವರ್ಷದ ಕೊನೆಗೆ ಚಂದ ಸಂದಾಯ ಮಾಡುವ ಸಮಯವಾದಾಗ ನಿರ್ಬಂಧಾವಸ್ಥೆಯಲ್ಲಿ ಅಲ್ಲಾಹನ ಮೇಲೆ ಭರವಸೆ ಇರಿಸುತ್ತಾ ಅವರು ಕ್ರೆಡಿಟ್ ಕಾರ್ಡಿನಿಂದಲೇ ಚಂದಗಳನ್ನು ಸಹ ಪಾವತಿಸಿದರು. ಅವರಿಗೆ ಕ್ರೆಡಿಟ್ ಪ್ರೊಟೆಕ್ಷನ್ ಇನ್ಶುರನ್ಸ್ ಇದೆಯೆಂದು ಅದೇ ದಿನಗಳಲ್ಲಿ ಅವರಿಗೆ ಬ್ಯಾಂಕಿನಿಂದ ಗೊತ್ತಾಯಿತು. ಜಾಬ್ ಇಲ್ಲವಾದರೆ, ಅದಕ್ಕಾಗಿ ಅರ್ಜಿಯನ್ನು ಕೊಡಬಹುದಾಗಿದೆ ಎಂದು ಗೊತ್ತಾಯಿತು. ಈ ರೀತಿಯಲ್ಲಿ ಅವರ ಕ್ರೆಡಿಟ್ ಕಾರ್ಡಿನ ಹಣದ ಪಾವತಿಯ ಎಲ್ಲ ಏರ್ಪಾಡು ಆಯಿತು. ಅದರೊಂದಿಗೆ ಅವರಿಗೆ ಹೊಸ ನೌಕರಿ ಸಹ ಲಭಿಸಿತು. ಅದು ಹಿಂದಿನ ನೌಕರಿಗಿಂತ ಒಳ್ಳೆಯದಾಗಿತ್ತು. ಅವರ ಆರ್ಥಿಕ ಸ್ಥಿತಿ ಉತ್ತಮಗೊಳ್ಳಲು ಶುರುವಾಯಿತು. ಅವರು ಮೊದಲಿಗಿಂತ ಹೆಚ್ಚು ಕಡ್ಡಾಯ ಚಂದಾಗಳನ್ನು ಪಾವತಿಸಿದರು. ಐಚ್ಛಿಕ ಚಂದಾಗಳನ್ನು ಸಹ ವರ್ಧಿಸಿದರು. ಅದೇ ವೇಳೆ ಅವರ ಗಂಡನ ಶಿಕ್ಷಣ ಸಹ ಪೂರ್ತಿಯಾಯಿತು. ಅವರಿಗೆ ಸಹ ಉತ್ತಮ ನೌಕರಿ ಸಿಕ್ಕಿತು. ಹೀಗೆ ಇವರು ತನ್ನ ಜಾಬನ್ನು ಬಿಟ್ಟರು. ಮತ್ತು ಗಂಡನ ಜಾಬಿನಿಂದಲೇ ಜೀವನ ಸಾಗಿಸಲು ಶುರುಮಾಡಿದರು.

ಇಂಡೋನೇಶಿಯದ ಮುಬಲ್ಲಿಗ್ ಸಾಹಿಬ್ ಬರೆಯುತ್ತಾರೆ: ರಮಾಝ್ಹಾನಿನ ತಿಂಗಳಲ್ಲಿ ವಖ್ಫೇ ಜದೀದ್ ಮತ್ತು ತಹ್ರೀಕ್ ಜದೀದ್ ಚಂದವನ್ನು ಸಂದಾಯ ಮಾಡುವ ಬಯಕೆ ಯಾವಾಗಲೂ ಅಮೀನ್ ಸಾಹಿಬ್‌ರ ಕುಟುಂಬದವರಿಗೆ ಇರುತ್ತಿತ್ತು. ಈ ವರ್ಷ ಆದಾಯ ಕಡಿಮೆಯಿತ್ತು. ವಾಗ್ದಾನವನ್ನು ಈಡೇರಿಸುವುದು ಸಾಧ್ಯವಲ್ಲವೆಂದು ಬಾಹ್ಯವಾಗಿ ತೋರುತ್ತಿತ್ತು. ಮುಬಲ್ಲಿಗ್ ಸಾಹಿಬ್ ಹೇಳುತ್ತಾರೆ: ರಮಝ್ಹಾನ್ ತಿಂಗಳಲ್ಲಿ ಉಪವಾಸದಲ್ಲಿ ಇದ್ದುಕೊಂಡು ದಿನಾಲು ತನ್ನ ಕುಟುಂಬದವರೊಡನೆ ಪರ್ವತದ ಪ್ರದೇಶದಲ್ಲಿ ನಾಲ್ಕು ಕಿ.ಮಿ. ದೂರದಲ್ಲಿರುವ ತನ್ನ ಕ್ಯಾಂಡಲ್ ನೇಟಿನ ತೋಟದಲ್ಲಿ ಅಮೀನ್ ಸಾಹಿಬ್ ಹೋಗುವುದನ್ನು ನೋಡಿದ್ದೇನೆ. ಇಲ್ಲಿ ಕೆಲಸ ಮಾಡಿಕೊಂಡು ತನ್ನ ಚಂದದ ವಾಗ್ದಾನವನ್ನು ಪೂರ್ತಿಮಾಡಲು ಹೀಗೆ ಹೋಗುತ್ತಿದ್ದರು. ಹೀಗೆ ಅವರು ರಮಝ್ಹಾನ್ ತಿಂಗಳಲ್ಲೇ ಎರಡು ಲಕ್ಷದ ವಾಗ್ದಾನವನ್ನು ಪೂರ್ತಿ ಮಾಡಿದರು. ಇಷ್ಟು ಹಣವನ್ನು ಕಠಿಣವಾದ ಪರಿಶ್ರಮವಿಲ್ಲದೆ ಒಟ್ಟುಗೂಡಿಸುವುದು ಅವರಿಗೆ ಸಾಧ್ಯವಲ್ಲ. ಉಪವಾಸದಲ್ಲಿ ಇದ್ದುಕೊಂಡು ಇಷ್ಟು ಕಷ್ಟದಿಂದ ಕೆಲಸಮಾಡಲು ಕಾರಣವೇನೆಂದು ಮುಬಲ್ಲಿಗ್ ಸಾಹಿಬ್ ಅವರೊಡನೆ ಕೇಳಿದರು. ಅವರು ಹೇಳಿದರು: ನಾನು ಮತ್ತು ನನ್ನ ಕುಟುಂಬ ಕೇವಲ ಖಲೀಫರ ಆಜ್ಞೆಗಳಂತೆ ನಡೆಯುತ್ತಾ ಅಲ್ಲಾಹನ ಸಂಪ್ರೀತಿಯನ್ನು ಪಡೆಯಲು ಬಯಸುತ್ತೇವೆ.

ಬುರ್ಕಿನಾಫಾಸೋದ ಒಂದು ಜಮಾಅತ್ತಿದೆ. ಅಲ್ಲಿ ನಯಾನ್ವ ಸಾಹಿಬ್ ಎಂಬ ಸಹೋದರ ಇದ್ದಾರೆ. ಹತ್ತು ವರ್ಷಗಳಿಗಿಂತ ಮುಂಚೆ ಬೈಅತ್ ಮಾಡಿದ್ದರು. ಆದರೆ ಚಂದ ನೀಡುವುದರಲ್ಲಿ ಹಿಂದಿದ್ದರು. ಮನೆಯಲ್ಲಿ ಹೆಚ್ಚಾಗಿ ರೋಗ ಮತ್ತು ಕಷ್ಟತೆಯ ಸ್ಥಿತಿಗಳು ಇರುತ್ತಿದ್ದುವು. ಕೆಲವು ಕಾಲದಿಂದ ಕ್ರಮಬದ್ಧವಾಗಿ ಚಂದಾಗಳನ್ನು ವಿಶೇಷವಾಗಿ ತಹ್ರೀಕ್ ಜದೀದ್ ಮತ್ತು ವಖ್ಫೇ ಜದೀದ್ ಚಂದವನ್ನು ಸಂದಾಯ ಮಾಡಲು ಶುರುಮಾಡಿದರು. ಇದರ ಕಾರಣದಿಂದ ಅವರ ಮನೆಯ ಕಷ್ಟತೆಯ ಸ್ಥಿತಿ ಕಡಿಮೆ ಆಗುತ್ತಾ ಹೋಯಿತು. ಮಾತ್ರವಲ್ಲ ರೋಗಗಳಿಗೆ ಶಮನ ನೀಡಿದನು. ಈ ವರ್ಷ ಅವರು ಆವೇಶದಿಂದ ವಖ್ಫೇ ಜದೀದಿನಲ್ಲಿ ಭಾಗವಹಿಸಿದರು. ಅವರಿಗೆ ಕೆಲಸಗಳನ್ನು ಕೊಡದ ಜನರು ಸ್ವತಃ ಬಂದು ಕಾಂಟ್ರಾಕ್ಟ್ ಮಾಡಿಕೊಂಡು ಕೆಲಸವನ್ನು ಕೊಟ್ಟರು. ವಖ್ಫೇ ಜದೀದಿನ ಮೂಲಕ ಹಣವನ್ನು ವರ್ಧಿಸುವಂತೆ ಮಾಡಿದ್ದು ಅಲ್ಲಾಹನ ಅನುಗ್ರಹವೇ ಆಗಿದೆ ಎಂದು ಇದ್ರೀಸ್ ಸಾಹಿಬ್ ಹೇಳುತ್ತಾರೆ. ನಾನು ಕೆಲವು ಘಟನೆಗಳನ್ನು ವಿವರಿಸಿದೆ. ಇಂತಹ ಹಲವಾರು ಘಟನೆಗಳು ಇರುತ್ತವೆ. ಅಲ್ಲಾಹನು ಸದಾ ಜಮಾಅತಿನ ಸದಸ್ಯರೊಂದಿಗೆ ಹೀಗೆಯೇ ವರ್ತಿಸಲಿ. ಅಹ್ಮದಿಯರು ಪ್ರಾಮಾಣಿಕತೆ ಮತ್ತು ನಿಷ್ಠೆಯಿಂದ ತ್ಯಾಗಗಳನ್ನು ಮಾಡುತ್ತಿರಲಿ. ಅಲ್ಲಾಹನು ತನ್ನ ಅನುಗ್ರಹಗಳ ದೃಶ್ಯಗಳನ್ನು ತೋರಿಸುತ್ತಿರಲಿ.

ಈಗ ನಾನು ವಖ್ಫೇ ಜದೀದಿನ ಹೊಸ ವರ್ಷದ ಘೋಷಣೆಯೊಂದಿಗೆ ಕಳೆದ ವರ್ಷದ ಕೆಲವು ಅಂಕಿಅಂಶಗಳನ್ನು ಮುಂದಿರಿಸುತ್ತೇನೆ. ಅಲ್ಲಾಹನ ಅನುಗ್ರಹದಿಂದ ವಖ್ಫೇ ಜದೀದಿನ 63ನೇ ವರ್ಷ 2020, ಡಿಸೆಂಬರ್ 31ರಂದು ಮುಕ್ತಾಯಗೊಂಡಿತು ಮತ್ತು 64ನೇ ವರ್ಷ ಜನವರಿಯಿಂದ ಶುರುವಾಯಿತು. ಅಲ್ಲಾಹನ ಅನುಗ್ರಹದಿಂದ ಈ ವರ್ಷ ಜಮಾಅತಿಗೆ ಒಂದು ಕೋಟಿ ಐದು ಲಕ್ಷ ಮೂವತ್ತು ಸಾವಿರ ಪೌಂಡಿನ ತ್ಯಾಗವನ್ನು ಮಾಡುವ ಸೌಭಾಗ್ಯ ಲಭಿಸಿತು. ಈ ವಸೂಲಿ ಕಳೆದ ವರ್ಷಕ್ಕಿಂತ ಎಂಟು ಲಕ್ಷ ಎಂಬತ್ತೇಳು ಸಾವಿರ ಪೌಂಡ್ ಹೆಚ್ಚಾಗಿತ್ತು. ಅಲ್‌ಹಮ್ದುಲಿಲ್ಲಾಹ್. ಇದು ಮನುಷ್ಯ ಪ್ರಯತ್ನದಿಂದ ಆಗಲು ಸಾಧ್ಯವಲ್ಲ. ಇದು ಕೇವಲ ಅಲ್ಲಾಹನ ವಿಶೇಷವಾದ ಅನುಗ್ರಹವಾಗಿದೆ. ಈ ವರ್ಷ ಸಹ ಬ್ರಿಟನ್ ಲೋಕದ ಜಮಾಅತುಗಳಲ್ಲಿ ಒಟ್ಟು ವಸೂಲಿನ ದೃಷ್ಟಿಯಲ್ಲಿ ಮೊದಲ ಸ್ಥಾನವನ್ನು ಪಡೆದಿದೆ. ಅವರು ಸಾಕಷ್ಟು ವರ್ಧನೆಯನ್ನು ಮಾಡಿದ್ದಾರೆ. ಬ್ರಿಟನಿನ ಲಜ್ನ ಇಮಾಇಲ್ಲಾಹ್ ಅಲ್ಲಾಹನ ಅನುಗ್ರಹದಿಂದ ಬಹಳ ಪರಿಶ್ರಮದಿಂದ ಕೆಲಸ ಮಾಡುತ್ತಿದೆ. ಈ ವರ್ಷ ಇಷ್ಟು ಹೆಚ್ಚಿನ ವರ್ಧನೆ ಉಂಟಾಗಲು ಕಾರಣ, ಲಜ್ನದ ಹಾಗೆಯೇ ಪುರುಷರು ಸಹ ಪರಿಶ್ರಮದಿಂದ ಕೆಲಸ ಮಾಡಿದ್ದಾರೆ ಎಂದು ತೋರುತ್ತದೆ. ಎರಡನೇ ಸ್ಥಾನದಲ್ಲಿ ಜರ್ಮನಿಯಿದೆ. ಅವರು ಸಹ ತುಂಬ ವರ್ಧನೆ ಮಾಡಿದ್ದಾರೆ. ಆದರೆ ಬ್ರಿಟನ್ ಅವರಿಂದ ತುಂಬ ಮುಂದಿದೆ. ಪಾಕಿಸ್ತಾನವಂತು ಕರೆನ್ಸಿಯ ಕಾರಣದಿಂದ ಬಹಳ ಹಿಂದೆ ಹೋಗಿದೆ. ಆದರೂ ಮೂರನೇ ಸ್ಥಾನದಲ್ಲಿದೆ. ಹೇಗಿದ್ದರೂ ಒಟ್ಟಾಗಿ ದೇಶದ ಕರೆನ್ಸಿಯ ದೃಷ್ಟಿಯಲ್ಲಿ ಇಲ್ಲಿ ಸಹ ವರ್ಧನೆಯಿದೆ. ಜನರು ತ್ಯಾಗಗಳನ್ನು ಮಾಡುತ್ತಿದ್ದಾರೆ. ಪಾಕಿಸ್ತಾನದಲ್ಲಿ ಜೀವದ ತ್ಯಾಗವನ್ನು ಸಹ ನೀಡಲಾಗುತ್ತಿದೆ. ಧನತ್ಯಾಗಗಳನ್ನು ಸಹ ಮಾಡುತ್ತಿದ್ದಾರೆ. ಮನಸ್ಸಿನ ತ್ಯಾಗವನ್ನು ಮಾಡುತ್ತಿದ್ದಾರೆ. ಸ್ಥಿರವಾಗಿ ಅವರನ್ನು ಹಿಂಸಿಸಲಾಗುತ್ತಿದೆ. ಅಲ್ಲಾಹನು ಅವರ ಕಷ್ಟತೆಗಳನ್ನು ನೀಗಿಸಲಿ. ಕೆನಡ ನಾಲ್ಕನೇ ಸ್ಥಾನದಲ್ಲಿದೆ. ಅನಂತರ ಅನುಕ್ರಮವಾಗಿ ಅಮೇರಿಕ, ಭಾರತ, ಆಸ್ಟ್ರೇಲಿಯಾ, ಮಿಡಲ್ ಈಸ್ಟಿನ ಒಂದು ಜಮಾಅತ್, ಇಂಡೋನೇಶ್ಯ ಮತ್ತು ಘಾನ. ಘಾನ ಸಹ ದೊಡ್ಡ ದೇಶಗಳಿಗೆ ಸರಿಸಾಟಿಯಾಗಿ ಈಗ ನಿಂತಿದೆ. ಮೊದಲ ಹತ್ತು ಸ್ಥಾನಗಳಲ್ಲಿ ಇದೆ.

ತಲಾ ಸಂದಾಯದ ದೃಷ್ಟಿಯಲ್ಲಿ ಅಮೇರಿಕ ಮೊದಲನೇ ಸ್ಥಾನದಲ್ಲಿದೆ. ಅನಂತರ ಸ್ವಿಟ್ಜರ್‌ಲಾಂಡ್, ಬ್ರಿಟನ್.

ಆಫ್ರಿಕದಲ್ಲಿ ಒಟ್ಟು ವಸೂಲಿನ ದೃಷ್ಟಿಯಲ್ಲಿ ಘಾನ ಮೊದಲ ಸ್ಥಾನದಲ್ಲಿದೆ. ಅನಂತರು ಅನುಕ್ರಮವಾಗಿ ಮಾರಿಶಿಯಸ್, ನೈಜೀರಿಯಾ, ಬುರ್ಕಿನಾಫಾಸೋ, ತನ್ಸಾನಿಯ, ಸಿರಲಿಯೋನ್, ಗೇಂಬಿಯ, ಕೆನ್ಯಾ, ಮಾಲಿ ಬೆನಿನ್. ಭಾಗವಹಿಸಿದವರ ಸಂಖ್ಯೆ 14 ಲಕ್ಷ 52 ಸಾವಿರವಾಗಿದೆ.

ಒಟ್ಟು ವಸೂಲಿಯ ದೃಷ್ಟಿಯಿಂದ ಬ್ರಿಟನಿನ ಹತ್ತು ಜಮಾಅತುಗಳು ಹೀಗಿವೆ. ಫಾರನ್‌ಹಮ್ ಮೊದಲನೇ ಸ್ಥಾನದಲ್ಲಿದೆ. ಅನಂತರ ಅನುಕ್ರಮವಾಗಿ ಇಸ್ಲಾಮಾಬಾದ್, ವೋಸ್ಟರ್ ಪಾರ್ಕ್, ಪಟ್ನಿ, ಬರ್ಮಿಂಘಮ್ ಸೌಥ್, ಜಲಿಂಘಮ್, ಸೌತ್ ಚೀಮ್, ಮಸ್ಜಿದ್ ಫಝ್ಲ್, ಬರ್ಮಿಂಘಮ್ ವೆಸ್ಟ್, ನ್ಯೂ ಮೋಲ್ಡನ್.

ಒಟ್ಟು ವಸೂಲಿಯ ದೃಷ್ಟಿಯಿಂದ ಮೊದಲ ಐದು ರೀಜನ್‌ಗಳು ಹೀಗಿವೆ: ಮೊದಲನೇ ಸ್ಥಾನದಲ್ಲಿ ಬೈತುಲ್ ಫುತೂಹ್, ಅನಂತರ ಅನುಕ್ರಮವಾಗಿ ಮಸ್ಜಿದ್ ಫಝ್ಲ್, ಇಸ್ಲಾಮಾಬಾದ್, ಮಿಡ್‌ಲೇಂಡ್ ಮತ್ತು ಬೈತುಲ್ ಇಹ್ಸಾನ್. ದಫ್ತರ್ ಅತ್ಫಾಲ್ ಪ್ರಕಾರ ಮೊದಲ ಹತ್ತು ಜಮಾಅತುಗಳು ಹೀಗಿವೆ: ಮೊದಲನೇ ಸ್ಥಾನದಲ್ಲಿ ಫಾರನ್‌ಹಂ, ಅನಂತರ ಅನುಕ್ರಮವಾಗಿ ಇಸ್ಲಾಮಾಬಾದ್, ರೋಹಿಮಟನ್ ವೇಲ್, ಬೈತುಲ್ ಫುತೂಹ್, ಮಚಲ್ ಪಾರ್ಕ್, ಗ್ಲಾಸ್ಕೋ, ಚೀಂ, ಗಲ್ಡರ್‌ಡ್, ವೋಸ್ಟರ್ ಪಾರ್ಕ್, ಬರ್ಮಿಂಘಮ್ ಸೌತ್.

ಸಣ್ಣ ಜಮಾಅತುಗಳಲ್ಲಿ ಒಟ್ಟು ವಸೂಲಿಯ ದೃಷ್ಟಿಯಿಂದ ಹತ್ತು ಜಮಾಅತುಗಳು ಅನುಕ್ರಮವಾಗಿ ಹೀಗಿವೆ: ಹಮಿಂಟನ್ ಸಿಪಾ, ಸ್ಪೇನ್ ವೇಲಿ, ಬೋರನ್‌ಮತ್, ಬರ್ಟನ್, ಮೋಂಟರಂಟ್, ಪೀಟರ್‌ಬರಾ, ಕಾವಂಟ್ರಿ, ಎಡಿಂಬ್ರ, ಕೀಥ್‌ಲಿ, ಸವಾಂಝಿ.

ಜರ್ಮನಿಯ ಮೊದಲ ಲೋಕಲ್ ಇಮಾರತ್ ಅನುಕ್ರಮವಾಗಿ ಹೀಗಿವೆ: ಹೇಂಬರ್ಗ್, ಫ್ರಾಂಕ್‌ಫರ್ಟ್, ವೀಜ್‌ಬಾದಿನ್, ಗ್ರಾಸ್‌ಗರಾವ್, ಡಟ್‌ಸನ್ ಬಾಖ್.

ಜರ್ಮನಿಯ ಅತ್ಫಾಲ್‌ಗಳಲ್ಲಿ ಮೊದಲ ಹತ್ತು ಸ್ಥಾನಗಳಿರುವ ಜಮಾಅತುಗಳು ಹೀಗಿವೆ: ರೂಡರ್‌ಮಾರ್ಕ್, ನೂಯಿಸ್ ರೂಡರ್‌ಮಾರ್ಕ್, ನೋಯಿಸ್, ನೀದ, ಮಹ್ದಿಯಾಬಾದ್, ಮಾಇನ್ಸ್‌ಕೋ ಬಲರ್ಝ್‌ಹನಾಉ, ಲಾಂಗನ್ ಫ್ಲೋರನ್ಸ್ ಹಾಯಿಂ ಬನ್ಸ್, ಹಾಯಿಂ ಪನಿ ಬರ್ಗ್.

ದಫ್ತರ್ ಅತ್ಫಾಲಿನ ಮೊದಲ ಹತ್ತು ರೀಜನ್‌ಗಳು ಹೀಗಿವೆ: ಹೇಸನ್‌ರೋದ್, ವೆಸ್ಟ್ ಹೇಸ್ ವೇಟೆರಾಇನ್, ಲಾಂಡ್ ಫಾಲ್ಸ್, ವೆಸ್ಟ್ ಫಾಲನ್ ಟಾನಿಸ್.

ಪಾಕಿಸ್ತಾನದ ಮೊದಲ ಮೂರು ಜಮಾಅತುಗಳು: ಲಾಹೋರ್, ರಬ್ವ, ಕರಾಚಿ. ಅತ್ಫಾಲಿನ ಚಂದಾದಲ್ಲಿ ಜಿಲ್ಲೆಗಳ ಸ್ಥಾನಗಳು ಹೀಗಿವೆ: ಇಸ್ಲಾಮಾಬಾದ್, ರಾವಲ್ಪಿಂಡಿ, ಸರ್‌ಗೋಧ, ಗುಜ್ರಾತ್, ಗುಜ್ರನ್‌ವಾಲ, ಉಮರ್ ಕೋಟ್, ಹೈದರಾಬಾದ್, ಪಿಶಾವರ್, ಮೀರ್‌ಪೂರ್ ಖಾಸ್, ಡೇರಗಾಝಿಖಾನ್.

ಒಟ್ಟು ವಸೂಲಿಯ ದೃಷ್ಟಿಯಿಂದ ಮೊದಲ ಹತ್ತು ಸ್ಥಾನಗಳಿರುವ ಜಮಾಅತುಗಳು ಹೀಗಿವೆ: ಡಿಫೆನ್ಸ್ ಲಾಹೋರ್, ಇಸ್ಲಾಮಾಬಾದ್ ಶಹರ್, ಟೌನ್‌ಶಿಪ್ ಲಾಹೋರ್, ಕ್ಲಿಫ್‌ಟನ್ ಕರಾಚಿ, ದಾರುದ್ದಿಕ್ರ್ ಲಾಹೋರ್, ಗುಲ್ಶಾನಾಬಾದ್ ಕರಾಚಿ, ಸಮನಾಬಾದ್, ಅಝೀಝಾಬಾದ್ ಕರಾಚಿ, ರಾವಲ್ಪಿಂಡಿ ಶಹರ್, ಅಲ್ಲಾಮ ಇಖ್ಬಾಲ್ ಟೌನ್ ಲಾಹೋರ್.

ದಫ್ತರ್ ಅತ್‌ಫಾಲಿನಲ್ಲಿ ಪಾಕಿಸ್ತಾನದ ಮೊದಲ ಹತ್ತು ಜಮಾಅತುಗಳು ಹೀಗಿವೆ: ಲಾಹೋರ್, ಕರಾಚಿ ಮತ್ತು ರಬ್ವ. ದಫ್‌ತರ್ ಅತ್‌ಫಾಲಿನಲ್ಲಿ ಜಿಲ್ಲೆಗಳ ಪೊಸಿಶನ್‌ಗಳು ಹೀಗಿವೆ: ಇಸ್ಲಾಮಾಬಾದ್, ಗುಜ್ರನ್‌ವಾಲ, ಸರ್‌ಗೋಧಾ, ಶೇಖುಪುರ, ಫೈಸಲಾಬಾದ್, ಗಾಝಿಖಾನ್ ಗುಜ್ರಾತ್, ಉಮರ್‌ಕೋಟ್, ನಾರೀವಾಲ್, ಬಹಾವು ಲಂಗರ್.

ಕೆನಡದ ಇಮಾರತ್ತುಗಳಲ್ಲಿ ಮೊದಲ ಸ್ಥಾನ ಫವಾನ್, ಅನಂತರ ಅನುಕ್ರಮವಾಗಿ ಪೀಸ್‌ವಿಲೇಜ್, ವೇಂಕೋವರ್, ಬ್ರಮನ್‌ಟನ್ ವೆಸ್ಟ್, ಟೊರಂಟೋ ವೆಸ್ಟ್. ಕೆನಡದ ಮೊದಲ ಹತ್ತು ದೊಡ್ಡ ಜಮಾಅತುಗಳು ಹೀಗಿವೆ: ಬ್ರೇಡ್‌ಫೋರ್ಡ್, ಡರ್‌ಹಂ, ಮಿಲ್ಟನ್ ಈಸ್ಟ್ ಎಡ್‌ಮಿಲ್ಟನ್ ವೆಸ್ಟ್, ವಿಂಡ್‌ಸರ್, ಮಿಲ್ಟನ್ ವೆಸ್ಟ್, ರಜಾಇನಾ, ಆಟ್‌ವಾ ವೆಸ್ಟ್, ಏಡ್‌ರಿ, ಏಬ್‌ಟನ್ ಫೋರ್ಡ್.

ಅತ್‌ಫಾಲಿನ ಇಮಾರತುಗಳಲ್ಲಿ ಮೊದಲನೇ ಸ್ಥಾನ ಟೊರಂಟೋ ವೆಸ್ಟ್, ಅನಂತರ ಅನುಕ್ರಮವಾಗಿ ಪೀಸ್‌ವಿಲೇಜ್, ಕಲ್ಗರಿ, ಬ್ರಿಹ್ಮಿಂಟನ್ ವೆಸ್ಟ್, ಅತ್‌ಫಾಲ್‌ಗಳಲ್ಲಿ ಜಮಾಅತುಗಳು ಹೀಗಿವೆ: ಡರ್‌ಹಂ, ಮಿಲ್ಟನ್ ವೆಸ್ಟ್, ಹೆಮಿಲ್ಟನ್ ಮೌಂಟೇನ್.

ಒಟ್ಟು ವಸೂಲಿಯ ದೃಷ್ಟಿಯಿಂದ ಅಮೇರಿಕದ ಹತ್ತು ಜಮಾಅತುಗಳು ಹೀಗಿವೆ: ಮೇರಿಲ್ಯಾಂಡ್, ಲಾಸ್ ಎಂಜಲೀಸ್, ಸೈಟಲ್, ಸಿಲಿಕೋನ್ ವೇಲಿ, ಬೋಸ್ಟನ್, ಆಸ್ಟನ್ ಓಶ್‌ಕೋಶ್, ಸೀರಕೋಸ್, ರಾಚಸ್ಟರ್, ಮೇನಿಸೋಟ. ದಫ್ತರ್ ಅತ್ಫಾಲಿನ ಪ್ರಕಾರ ಹತ್ತು ಜಮಾಅತುಗಳು: ಮೇರಿಲ್ಯಾಂಡ್, ಲಾಸ್ ಎಂಜಲೀಸ್, ಸೈಟಲ್, ಓರ್‌ಲೇಂಡ್, ಸಿಲಿಕನ್ ವೇಲಿ, ಓಸ್ಟನ್, ಓಶ್‌ಕೋಶ್, ಮೇಸೋಟ, ಲಾಸ್‌ವೇಗಸ್, ಫಿಶ್‌ಬರ್ಗ್.

ಭಾರತದ ಜಮಾಅತುಗಳಲ್ಲಿ ಒಟ್ಟು ವಸೂಲಿಯ ದೃಷ್ಟಿಯಿಂದ ರಾಜ್ಯಗಳ ಸ್ಥಾನಗಳು ಅನುಕ್ರಮವಾಗಿ ಹೀಗಿವೆ: ಕೇರಳ, ತಮಿಳುನಾಡು, ಜಮ್ಮು ಕಾಶ್ಮೀರ, ತೆಲಂಗಾಣ, ಕರ್ನಾಟಕ, ಒಡಿಶ, ಪಂಜಾಬ್, ವೆಸ್ಟ್ ಬಂಗಾಳ್, ದೆಹಲಿ, ಉತ್ತರಪ್ರದೇಶ. ಜಮಾಅತುಗಳಲ್ಲಿ ಸ್ಥಾನಗಳು ಅನುಕ್ರಮವಾಗಿ ಹೀಗಿವೆ: ಕೋಯಂಬತ್ತೂರ್, ಖಾದಿಯಾನ್, ಪತ್ತಪಿರಿಯಂ, ಹೈದರಾಬಾದ್, ಕೋಲ್ಕತ್ತ, ಬೆಂಗಳೂರು, ಕಾಲಿಕೆಟ್, ಕಣ್ಣೂರ್ ಟೌನ್, ರಿಶಿನಗರ್, ಕೇರಂಗ್.

ಆಸ್ಟ್ರೇಲಿಯಾದ ಹತ್ತು ಜಮಾಅತುಗಳು ಹೀಗಿವೆ: ಮೆಲ್ಬರ್ನ್, ಲಾಂಗ್ ವಾರನ್, ಕಾಸಲ್‌ಹಿಲ್, ಮಾಸ್‌ಡನ್ ಪಾರ್ಕ್, ಮೆಲ್ಬರ್ನ್‌ಬೇರೋಕ್, ಏಡಿಲೇಂಡ್ ಸೌತ್, ಮೌಂಟ್ ರೂಯಿಟ್, ಪೀಝುತ್ ಪರ್ಥ್, ಲೋಗನ್ ಈಸ್ಟ್, ಬ್ಲೇಕ್ ಟೌನ್,

ಆಸ್ಟ್ರೇಲಿಯಾದ ನಾಸಿರಾತುಗಳಲ್ಲಿ ಜಮಾಅತುಗಳ ಸ್ಥಾನಗಳು ಹೀಗಿವೆ: ಮೆಲ್ಬರ್ನ್, ಲಾಂಗ್‌ವಾರನ್, ಕಾಸಲ್‌ಹಿಲ್, ಮಾಸ್ಡನ್ ಪಾರ್ಕ್, ಮೆಲ್ಬರ್ನ್ ಪಾರ್ಕ್, ಪೀಝುತ್, ಮೌಂಟ್ ಡ್ರೌಟ್, ಬ್ಲೇಕ್‌ಟೌನ್, ಏಡಿಲೇಂಡ್ ಸೌತ್, ಪರ್ಥ್ ಮತ್ತು ಕೇಂಬ್ರ.

ಅತ್‌ಫಾಲ್‌ಗಳಲ್ಲಿ ಆಸ್ಟ್ರೇಲಿಯಾದ ಜಮಾಅತುಗಳ ಸ್ಥಾನಗಳು ಹೀಗಿವೆ: ಮೆಲ್ಬರ್ನ್, ಲಾಂಗ್ ಏಡಿಲೇಂಡ್, ಮೆಲ್ಬರ್ನ್ ಬೇರೋಕ್, ಮೌಂಟ್ ಡ್ರೌಟ್, ಲೋಗನ್ ಈಸ್ಟ್, ಪೀಝುತ್, ಕಾಸಲ್‌ಹಿಲ್, ಮೆಲ್ಬರ್ನ್ ಈಸ್ಟ್ ಪರ್ಥ್ ಮತ್ತು ಏಡಿಲೇಂಡ್ ಈಸ್ಟ್.

ಅಲ್ಲಾಹನು ತ್ಯಾಗ ಮಾಡುವ ಎಲ್ಲರು ಸಂಪತ್ತುಗಳಲ್ಲಿ ಮತ್ತು ಜೀವಗಳಲ್ಲಿ ಅಪರಿಮಿತವಾದ ಅನುಗ್ರಹಗಳನ್ನು ವರ್ಷಿಸಲಿ. ಅವರಿಗೆ ಆಧ್ಯಾತ್ಮಿಕ ಉನ್ನತಿಯನ್ನು ಸಹ ಅಲ್ಲಾಹನು ನೀಡಲಿ. ಅವರು ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳನ್ನು ಮತ್ತು ದಾಸರಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸುವವರಾಗಲಿ.

ಈ ದಿನಗಳಲ್ಲಿ ಪಾಕಿಸ್ತಾನದ ಅಹ್ಮದಿಯರಿಗಾಗಿಯೂ ವಿಶೇಷವಾಗಿ ದುಆ ಮಾಡುತ್ತಿರಿ. ಅಲ್ಲಾಹನು ಅವರ ಕಷ್ಟತೆಗಳನ್ನು ದೂರಮಾಡಲಿ, ಅವರ ಚಿಂತೆಗಳನ್ನು ದೂರಮಾಡಲಿ. ವಿರೋಧಿಗಳು ಕೈಗಳು ಅವರ ತನಕ ತಲುಪುವುದರಿಂದ ಅಲ್ಲಾಹನು ತಡೆಯಲಿ. ಯಾವ ವಿರೋಧಿಗಳ ಸುಧಾರಣೆ ಆಗಲು ಸಾಧ್ಯವಿಲ್ಲವೋ ಅವರನ್ನು ಅಲ್ಲಾಹನು ಹಿಡಿಗೂಡಲಿ. ಸೆರೆಯಲ್ಲಿರುವವರು ಬೇಗನೇ ಬಿಡುಗಡೆಗೊಳ್ಳುವಂತೆ ಅಲ್ಲಾಹನು ಮಾಡಲಿ. ಅಲ್‌ಜೀರಿಯಾದ ಜೈಲಿನಲ್ಲಿ ಸಹ ಅಹ್ಮದಿಯರು ಇದ್ದಾರೆ. ಅಲ್‌ಜೀರಿಯಾದಲ್ಲೂ ಶಕ್ತವಾದ ವಿರೋಧವಿದೆ. ಅಲ್ಲಾಹನು ಅವರಿಗೂ ಸಮಾಧಾನ ಕೊಡಲಿ. ವಿಶೇಷವಾಗಿ ದುಆಗಳ, ನಫ್ಲ್‌ಗಳ ಮತ್ತು ಸದಖಗಳನ್ನು ವರ್ಧಿಸಿರಿ. ಪಾಕಿಸ್ತಾನದ ಸಾಮಾನ್ಯ ಸ್ಥಿತಿಯೂ ಸರಿಯಿಲ್ಲ. ಅವರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಸಮಾಧಾನದ ಸ್ಥಿತಿಗಳನ್ನು ಅಲ್ಲಿ ಉಂಟುಮಾಡಲಿ. ಅವರು ಪರಸ್ಪರ ಕೊಲ್ಲುವುದರಲ್ಲಿ ಮಗ್ನರಾಗಿದ್ದಾರೆ. ಅಲ್ಲಿಯ ಭಯೋತ್ಪಾದನೆ, ಫಿತ್ನ ಮತ್ತು ಕಲಹಗಳನ್ನು ಅಲ್ಲಾಹನು ಬೇಗನೇ ಕೊನೆಗೊಳಿಸಲಿ. ಆಡಳಿತ ಮತ್ತು ಸರ್ಕಾರಕ್ಕೆ ಬುದ್ಧಿ ನೀಡಲಿ. ಅದು ಯಥಾರ್ಥ ರೀತಿಯಲ್ಲಿ ಸೃಷ್ಟಿಗಳ ಸೇವೆ ಮಾಡುವಂತಾಗಲಿ. ನ್ಯಾಯದಿಂದ ಕೆಲಸ ಮಾಡುವಂತಾಗಲಿ. ಅದೇ ರೀತಿಯಲ್ಲಿ ಲೋಕದ ಸಾಮಾನ್ಯ ಅವಸ್ಥೆಗಳ ಬಗ್ಗೆ ಸಹ ದುಆ ಮಾಡಿರಿ. ಅದು ತ್ವರಿತವಾಗಿ ಕೆಟ್ಟುಹೋಗುತ್ತಿವೆ. ಅಲ್ಲಾಹನು ಮನುಷ್ಯರೆಲ್ಲರ ಮೇಲೆ ಕರುಣೆದೋರಲಿ.

*******************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ತೃತೀಯ: ಭವಿಷ್ಯವಾಣಿಗಳ ದೃಷ್ಟಾಂತವಾಗಿದೆ. ಅಂದರೆ ಅಗೋಚರ ಘಟನೆಗಳ ಜ್ಞಾನ, ಹಾಗೆ ನೋಡಿದರೆ ನಕ್ಷತ್ರ ತಜ್ಞರು ಮತ್ತು ಭವಿಷ್ಯ ಶಾಸ್ತ್ರಜ್ಞರು ಸಹ ತಮ್ಮ ತಂತ್ರ ಕುತಂತ್ರದಿಂದ ಇಂತಹ ಮಾತುಗಳನ್ನು ಹೇಳುತ್ತಾರೆ. ಆದರೆ ಯಾವುದಾದರೊಂದು ಭಾಗ ಸರಿಯಾಗಿರುತ್ತದೆ. ಇತಿಹಾಸ ನಮಗೆ ತೋರಿಸಿಕೊಡುತ್ತದೆ. ಒಂದು ಸಂದರ್ಭದಲ್ಲಿ ರಸೂಲುಲ್ಲಾಹ್(ಸ) ರವರ ಕಾಲದಲ್ಲೂ ಮಂತ್ರವಾದಿಗಳು ಅಗೋಚರ ಸುದ್ದಿಗಳು ಹೇಳುತ್ತಿದ್ದರು. ಅಂದ ಹಾಗೆ ಮಲೇಶಿಯದಲ್ಲೂ ಒಬ್ಬ ಮಾಂತ್ರಿಕನಿದ್ದ. ಆದರೆ ಆ ಭವಿಷ್ಯ ಶಾಸ್ತ್ರಗಳ ಮತ್ತು ಮಾಂತ್ರಿಕ, ಅಗೋಚರ ಜ್ಞಾನ ಮತ್ತು ಅಲ್ಲಾಹನಿಂದ ನಿಯುಕ್ತಗೊಂಡವರ ಅಗೋಚರ ಜ್ಞಾನದಲ್ಲಿ ಬಹಳಷ್ಟು ವ್ಯತ್ಯಾಸವಿರುತ್ತದೆ. ದೇವವಾಣಿಯ ಅಗೋಚರ ಜ್ಞಾನವು ತನ್ನೊಳಗೆ ಒಂದು ದೈವಿಕ ಶಕ್ತಿ ಮತ್ತು ದೇವ ಪ್ರತಾಪ ಹೊಂದಿರುತ್ತದೆ. ಕಾರಣ ಪವಿತ್ರ ಖುರ್‌ಆನ್ ಸ್ಪಷ್ಟಪಡಿಸಿದೆ. ಫಲಾಯುಝ್‌ಹಿರು . . . . (ಅಲ್‌ಜಿನ್ನ್–27–28) ಇಲ್ಲಿ 'ಯುಝ್‌ಹಿರು' (ಅದೃಶ್ಯ) ಪದವೇ ಸ್ಪಷ್ಟಪಡಿಸುತ್ತದೆ. ಅದರೊಳಗೆ ಒಂದು ವೈಭವ ಮತ್ತು ಶಕ್ತಿ ಒಳಗೊಂಡಿರುತ್ತದೆ ಎಂದು.

ಚತುರ್ಥ: ಚತುರ್ಥ ದೃಷ್ಟಾಂತವು ಪವಿತ್ರ ಖುರ್‌ಆನ್‌ನ ಆಧ್ಯಾತ್ಮಿಕ ಜ್ಞಾನ ಮತ್ತು ರಹಸ್ಯಜ್ಞಾನವಾಗಿದೆ. ಏಕೆಂದರೆ ಆಧ್ಯಾತ್ಮಿಕ ಜ್ಞಾನವು ಪರಿಶುದ್ಧ ವ್ಯಕ್ತಿಯ ಹೊರತು ಯಾರಿಗೂ ದೊರೆಯುವುದಿಲ್ಲ. 'ಲಾ ಯಮುಸ್ಸುಹು ಇಲ್ಲಲ್ ಮುತತಹರೂನ್– (ಅಲ್–ವಾಖಿಅ–80) ನಾನು ಎಷ್ಟೋ ಸಲ ನನ್ನ ವಿರೋಧಿಗಳಿಗೆ ಹೇಳಿದ್ದೇನೆ. ಯಾವುದೇ ಅಧ್ಯಾಯದ ವ್ಯಾಖ್ಯಾನ ಬರೆಯಿರಿ ಮತ್ತು ನಾನೂ ಬರೆಯುತ್ತೇನೆ. ಮತ್ತೆ ಮೌಲ್ಯ ಮಾಪನ ಮಾಡಬಹುದಾಗಿದೆ. ಆದರೆ ಯಾರು ಮುಂದೆ ಬಂದಿಲ್ಲ. ಮುಹಮ್ಮದ್ ಹುಸೇನ್ ಇತರರು ಹೇಳಿಬಿಟ್ಟರು. ನಮಗೆ ಅರಬಿ ಸೀಗ(ಧತುರೂಪ) ಬರುವುದಿಲ್ಲ. ಅವರ ಮುಂದೆ ಗ್ರಂಥಗಳನ್ನು ಪ್ರಸ್ತುತಪಡಿಸಿದಾಗ–ಇದು ಕೀಳುಮಟ್ಟದ್ದು ಮತ್ತು ಅನಗತ್ಯ ನೆಪಗಳನ್ನು ಒಡ್ಡಿ ತಳ್ಳಿ ಹಾಕಿದರು. ಕೀಳು ಮಟ್ಟದ ಅರಬಿ ಅಂದವರು ಅದರ ಒಂದು ಪುಟದಷ್ಟಾದರೂ ಪ್ರಸ್ತುತಪಡಿಸಿ ಹೇಳಬಹುದಿತ್ತು. ಇದಾಗಿದೆ ಅರಬಿ ಎಂದು.

ಅಂತೂ ಈ ನಾಲ್ಕು ದೃಷ್ಟಾಂತಗಳು ನನ್ನ ಸತ್ಯತೆಗಾಗಿ ವಿಶೇಷ ರೂಪದಲ್ಲಿ ನನಗೆ ಲಭಿಸಿದೆ.

**(ಮಲ್ಫೂಝಾತ್, ಸಂಪುಟ 1, ಪುಟ–252, ಮುದ್ರಣ ಖಾದಿಯನ್ 2018)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ವಿವೇಕವಂತನಿಗೂ ತಳ್ಳಿ ಹಾಕಲು ಸಾಧ್ಯವಿಲ್ಲ. ಮನಶುದ್ಧವಾಗಿದ್ದರೆ ಕರ್ಮಗಳು ತಂತಾನೆ ಅದನ್ನು ಸಹಕರಿಸುತ್ತವೆ. ಮನುಷ್ಯರ ಭಯದಿಂದ ಕರ್ಮಗಳು ಬದಲಿಸಬಹುದು. ಆದರೆ ತನ್ನ ಭಾವನೆಗಳನ್ನು ಬದಲಿಸಲು ಸಾಧ್ಯವಿಲ್ಲ. ಹೃದಯದ ಮೇಲೆ ಇನ್ನೊಬ್ಬರ ಹಿಡಿತವಿರುವುದಿಲ್ಲ. ಶಕ್ತಿಯುತ ರಾಜರ ಹಿಡಿತದಿಂದಲೂ ಹೃದಯವು ಸುರಕ್ಷಿತವಾಗಿರುತ್ತದೆ. ಇಂತಹ ಒಂದು ವಿಷಯದ ಮೇಲೆ ಅಲ್ಲಾಹನು ಮಾರ್ಗದರ್ಶನ ಬುನಾದಿಯನ್ನು ಇಟ್ಟಿರುವನು. ಅದು ಸ್ವಯಂ ಮನುಷ್ಯನ ಹಿಡಿತದಲ್ಲಿದೆ. ಇನ್ನೊಬ್ಬರು ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ.

**ಬಿ–ಇಮಾನಿಹಿಮ್** ಎಂದು ಹೇಳಿ. ಪ್ರತಿಫಲವು ಅವನ ವಿಶ್ವಾಸದ ಮೇಲೆ ನಿರ್ಧರಿತವಾಗುವುದು ಎಂದಿದೆ. ಅಂದರೆ ಒಬ್ಬ ವ್ಯಕ್ತಿಯ ಕರ್ಮಗಳು ನೋಡಲಿಕ್ಕೆ ಒಳ್ಳೆಯದಾಗಿದೆ. ಆದರೆ ಅವನು ಆತ್ಮೀಯವಾಗಿ ಹಿಂದುಳಿಯುವವನಾದರೆ ಅವನಿಗೆ ದೊರೆಯುವ ಪ್ರತಿಫಲದಲ್ಲಿ ವ್ಯತ್ಯಾಸ

ಉಂಟಾಗುತ್ತದೆ. ಇದೊಂದು ಯೋಚಿಸುವವರಿಗೆ ಉತ್ತಮ ತತ್ವವಾಗಿದೆ. ಹಝ್ರತ್ ರಸೂಲುಲ್ಲಾಹ್(ಸ) ನುಡಿದರು. ಅಬೂಬಕರ್ ಅವರಿಗೆ ನಿಮ್ಮ ಮೇಲೆ ಮಹಾನತೆಗೆ ಕಾರಣವೆಂದರೆ ಅವನ ಹೃದಯವಂತಿಕೆಯಿಂದಾಗಿದೆ. ನಾವು ನೋಡುತ್ತೇವೆ. ಒಬ್ಬ ವ್ಯಕ್ತಿ ಹೆಚ್ಚು ನಮಾಝುಗಳನ್ನು ನಿರ್ವಹಿಸುತ್ತಾನೆ ಮತ್ತು ವ್ರತಗಳನ್ನು ನಿರ್ವಹಿಸುತ್ತಾನೆ. ಆದರೆ ಇನ್ನೊಬ್ಬನು ಅಲ್ಲಾಹನ ಅನುಗ್ರಹಕ್ಕೆ ಹೆಚ್ಚು ಪಾತ್ರನಾಗಿರುತ್ತಾನೆ. ಅದಕ್ಕೆ ಕಾರಣ ಅವನ ಮನಸ್ಥಿತಿಯಾಗಿರುತ್ತದೆ. ನಿಜವಾದ ಪರಿಶುದ್ಧತೆ ಮತ್ತು ಆತ್ಮೀಯತೆ ಯಾರಲ್ಲಿ ಹೆಚ್ಚಿರುತ್ತದೆಯೋ ಅವನ ಅಲ್ಪ ಮಾತ್ರದ ಕರ್ಮಗಳು ಹೆಚ್ಚು ಫಲಗಳನ್ನು ಪಡೆಯುತ್ತವೆ. ವಾಸ್ತವವೇನೆಂದರೆ ಆ ವ್ಯಕ್ತಿಯ ಎಲ್ಲ ಕರ್ಮಗಳು ಆರಾಧನೆಯಾಗಿ ಬಿಡುತ್ತವೆ. ಏಕೆಂದರೆ ಅವನ ಲೌಕಿಕ ರೀತಿಯ ಕರ್ಮಗಳು ಸಹ ಅಲ್ಲಾಹನಿಗೆ ಸಂಬಂಧಿಸಿದ್ದಾಗಿರುತ್ತದೆ. ಮತ್ತು ಮಾನವಕುಲದ ಒಳಿತಿಗಾಗಿ ಅವನ ಕಾರ್ಯಗಳಾಗಿರುತ್ತವೆ.

**(ತಫ್ಸೀರ್ ಕಬೀರ್ ಸಂಪುಟ 3, ಪುಟ 34 , ಮುದ್ರಣ ಖಾದಿಯಾನ್ 2010)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

(ದೇವನ) ದೈವಿಕ ದೃಷ್ಟಾಂತವನ್ನು ಬಯಸಬೇಕು. ಆ ದೃಷ್ಟಾಂತ ಗೋಚರಿಸಲು ಒಂದು ವರ್ಷದ ಕಾಲವಧಿ ನಿಗದಿಪಡಿಸಬೇಕು. ಆಗ ಯಾರ ಪಕ್ಷದಲ್ಲಿ ಮಾನವೀಯ ಹಸ್ತಕ್ಷೇಪವಿಲ್ಲದಂತಹ ದೈವಿಕ ದೃಷ್ಟಾಂತ ಗೋಚರಿಸಲ್ಪಡುವುದೋ ಅದು ಎದುರಾಳಿ ಪಕ್ಷಕ್ಕೆ ಸಾಧ್ಯವಾಗದಂತಿರಬೇಕು. ಆಗ ಎದುರಾಳಿ ಪಕ್ಷದ ಕರ್ತವ್ಯವಾಗಿರುತ್ತದೆ. ದೈವಿಕ ದೃಷ್ಟಾಂತಗಳಿಂದ ವಿಜಯ ಸಾಧಿಸಿದ ಧರ್ಮವನ್ನು ಸ್ವೀಕರಿಸಬೇಕು. ಆಗಲೂ ಸ್ವೀಕರಿಸಲು ನಿರಾಕರಿಸಿದರೆ ತನ್ನ ಆಸ್ತಿಯ ಅರ್ಧ ಭಾಗವನ್ನು ಆ ಸತ್ಯ ಧರ್ಮವನ್ನು ಬಲಪಡಿಸುವ ಉದ್ದೇಶದಿಂದ ನೀಡುವುದು ಕಡ್ಡಾಯವಾಗಿರುತ್ತದೆ. ಇದು ನಿಜವಾಗಿಯೂ ಸತ್ಯ, ಮಿಥ್ಯದ ವ್ಯತ್ಯಾಸ ತಿಳಿಯಲು ಸರಿಯಾದ ಮಾರ್ಗವಾಗಿದೆ. ಆದುದರಿಂದ ಈ ಜಾಹೀರಾತಿನ ಮೂಲಕ ಡಾ॥ ಸಾಹಿಬ್ ಮತ್ತು ಅವರ ಎಲ್ಲಾ ತಂಡದವರಲ್ಲಿ ವಿನಂತಿಯೇನೆಂದರೆ. ಅವರು ಈ ಚರ್ಚಾಕೂಟದ ಹೆಸರನ್ನು ಯಾವ ರೀತಿಯಲ್ಲಿ "ಜಂಗ್-ಇ-ಮುಖದ್ದಸ್" (ಧರ್ಮಯುದ್ಧ) ಎಂದು ಹೆಸರಿಸಿರುವರೋ ಮತ್ತು ಯಾವ ರೀತಿಯಲ್ಲಿ ಮುಸ್ಲಿಮರ ಹಾಗೂ ಕ್ರೈಸ್ತರ ಮಧ್ಯೆ ಸತ್ಯ ಹಾಗೂ ಮಿಥ್ಯದ ನಿರ್ಣಾಯಕ ಹಂತ ಬಯಸಿರುವರೋ, ಆ ಸತ್ಯವಾದ ಮತ್ತು ಸರ್ವಶಕ್ತನಾದ ದೇವರು ಯಾರ ಪಕ್ಷದಲ್ಲಿದ್ದಾನೆ ಎಂದು ತಿಳಿಯಬಯಸುವುದಾದರೆ ಈ ಸಾಧಾರಣ ರೀತಿಯ ಚರ್ಚಾಕೂಟದಿಂದ ಸಾಧ್ಯವಾಗದು. ಆದುದರಿಂದ ಉತ್ತಮವಾದ ಮಾರ್ಗವೆಂದರೆ ದೈವಿಕ ನೆಲೆಯಲ್ಲಿ ಸತ್ಯ ಮಿಥ್ಯದ ನಿರ್ಣಯ ಬಯಸುವಂತಾಗಬೇಕು. ನಾನು ಈ ಮಾತನ್ನು ಮನಸಾರೆ ಒಪ್ಪುವೆನು. ಈ ತಾಂತ್ರಿಕ ಯಾಂತ್ರಿಕ ರೀತಿಯ ಚರ್ಚೆಯ ಏನೂ ಅವಶ್ಯಕತೆ ಇಲ್ಲ. ಆದರೂ ಸಹ ಅದಕ್ಕು ನಾನು ಒಪ್ಪಿಕೊಳ್ಳುತ್ತೇನೆ. ಅದರ ಜೊತೆಯಲ್ಲಿಯೇ ಇದು ಸಹ ಅನಿವಾರ್ಯವಾಗಿರಬೇಕು. ಈ ಆರು ದಿವಸಗಳ ಅವಧಿ ಮುಗಿದ ನಂತರ, ಮೇಲೆ ವಿವರಿಸಿದ ನನ್ನಲ್ಲಿ ಮತ್ತು ನನ್ನ ಎದುರಾಳಿ ಪಕ್ಷಗಳ ನಡುವೆ ಮುಬಾಹಲವು ಆಗುವುದು. ಈ ಕರಾರು ಉಭಯತ್ರರು ಮೊದಲೇ ಪ್ರಕಟಿಸಬೇಕು. ನಾವು ಮುಬಾಹಲ ಮಾಡುವೆವು."

ಒಂದು ವೇಳೆ ಒಂದು ವರ್ಷ ಅವಧಿಯಲ್ಲಿ ಉಭಯತ್ರ ಪಕ್ಷದಲ್ಲಿ ಯಾವುದೇ ದೃಷ್ಟಾಂತ ಗೋಚರಿಸಿಲ್ಲ ಎಂದಾದರೆ ಅಥವಾ ಉಭಯತ್ರರ ಪಕ್ಷದಲ್ಲಿಯೂ ಗೋಚರಿಸಿದರೆ ಹೇಗೆ ನಿರ್ಣಯವಾಗಬಹುದು ಎಂಬ ಪ್ರಶ್ನೆ ಎದುರಾದರೆ ಅದಕ್ಕೆ ಉತ್ತರ ಇದಾಗಿದೆ. ಈ ವಿನೀತನು ಇಂತಹ ಸಂದರ್ಭದಲ್ಲಿಯೂ ಸಹ ತನ್ನನ್ನೆ ಪರಾಜಿತನೆಂದು ಭಾವಿಸುವೆನು. ಮತ್ತು ಯಾವ ಶಿಕ್ಷೆ ವಿವರಿಸಲಾಗಿದೆಯೋ ಅದಕ್ಕೆ ಬದ್ಧನಾಗಿರುವೆನು. ನನ್ನ ಸತ್ಯಕ್ಕಾಗಿ ಅವಶ್ಯವಾಗಿರುವುದೇನೆಂದರೆ ನನ್ನ ಪರವಾಗಿ ಮುಬಾಹಲ ನಂತರ ಒಂದು ವರ್ಷದೊಳಗೆ ಅವಶ್ಯವಾಗಿ ದೃಷ್ಟಾಂತ ಗೋಚರಿಸುವುದು ಆ ದೃಷ್ಟಾಂತ ಗೋಚರಿಸಲಿಲ್ಲವಾದರೆ ನಾನು ದೇವನಿಂದ ಆಗಮಿಸಿದವನಲ್ಲ. ಆಗ ಕೇವಲ ನಮೂದಿತ ಶಿಕ್ಷೆಗೆ ಅರ್ಹನಾಗಿರುವುದಿಲ್ಲ. ಬದಲು ಮರಣ ಶಿಕ್ಷೆಗು ಅರ್ಹನಾಗುವೆನು. ಅಂತೂ ಇಂದು ನಾನು ಇವೆಲ್ಲಾ ಮಾತುಗಳನ್ನು ಸ್ವೀಕರಿಸಿ ಜಾಹೀರಾತು ನೀಡುತ್ತಿದ್ದೇನೆ.

ಡಾ॥ ಸಾಹಿಬ್ ಯೋಚಿಸಿರಿ. ನಾನು ನನ್ನ ಪೈಕಿ ಅತ್ಯಂತ ಕಠಿಣ ಶರತ್ತುಗಳನ್ನು ಒಪ್ಪಿಗೊಂಡಿರುತ್ತೆನೆ ಮತ್ತು ನಿಮ್ಮ ಪೈಕಿ ಸರಳವಾದುದು ಅಂದರೆ ನನ್ನ ಎದುರಿಗೆ ದೃಷ್ಟಾಂತ ಗೋಚರವಾದದ್ದು, ನಿಮ್ಮ ಪರವು ಗೋಚರವಾದರೆ ಆಗ ಸಹ ಈ ಶರತ್ತಿನ ಮೇರೆಗೆ ನೀವೇ ಸತ್ಯವಂತರೆಂದಾಗುವಿರಿ. ಒಂದು ವೇಳೆ ನಾನು ದೃಷ್ಟಾಂತ ಕಾಣಿಸಿದಂತಾಗಲಿಲ್ಲ ಎಂದರೆ ಮತ್ತು ಅದು ಒಂದು ವರ್ಷದೊಳಗೆ ಗೋಚರಿಸಿಲ್ಲವಾದರೆ ಆಗಲೂ ಸಹ ನೀವೇ ಸತ್ಯವಂತರಾಗುವಿರಿ. ನಾನು ಕೇವಲ ಒಂದು ವರ್ಷದೊಳಗೆ ಡಾ॥ ಸಾಹೇಬರ ಪರ ದೃಷ್ಟಾಂತ ಗೋಚರಿಸಿದೆ ಇದ್ದು ನನ್ನ ಪರವಾಗಿ ಗೋಚರಿಸಿದಾಗ ಮಾತ್ರ ನಾನು ಸತ್ಯವಂತನಾಗುವೆನು." (ಅದೇ ಪುಟ 46-50).

ಡಾ॥ ಪಾದರಿ ಮಾರ್ಟಿನ್ ಕ್ಲಾರ್ಕ್ ಅದಕ್ಕೆ ಉತ್ತರವಾಗಿ ಹಝ್ರತ್ ಮಸೀಹ್ ಮೌಊದ್(ಅ) ಅವರಿಗೆ ಬರೆದರು.

ನಮ್ಮ ದಾವೆ ನಿಮ್ಮೊಂದಿಗಿಲ್ಲ. ಬದಲು ಜಂಡಿಯಾಲದ ಮುಹಮ್ಮದಿಯರೊಡನೆಯಾಗಿದೆ. ನಾವು ತಮ್ಮ ಆಮಂತ್ರಣ ಸ್ವೀಕರಿಸಲು ಬಾಧ್ಯರಲ್ಲ. ಅವರು ನಿಮ್ಮನ್ನು ಸ್ವೀಕರಿಸಿ ಈ "ಜಂಗ್-ಇ-ಮುಖದ್ದಸ್" (ಧರ್ಮಯುದ್ಧಕ್ಕೆ) ಕರೆ ತಂದರೆ ನಮಗೇನು ಅಭ್ಯಂತರವಿಲ್ಲ. ಅಲ್ಲದೇ ತುಂಬ ಸಂತೋಷವಾಗುವುದು."

ಆಗ ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಡಾ॥ ಪಾದರಿ ಮಾರ್ಟಿನ್ ಕ್ಲಾಕ್ ಅವರಿಗೆ ಬರೆದರು.

"ಯಾವಾಗ ನಿಮ್ಮ ಮೊದಲ ಪತ್ರ ಅದು ಜಂಡಿಯಾಲದ ಮುಸಲ್ಮಾನರ ಹೆಸರಿನಲ್ಲಿತ್ತು. ನನಗೆ ದೊರೆಯಿತು ಮತ್ತು ಆ ಬರಹವನ್ನು ಓದಿದೆ. "ನಮ್ಮನ್ನು ಎದುರಿಸುವವರು ಯಾರಾದರೂ ಇದ್ದಾರೆಯೇ? ಆಗ ನನ್ನ ಆತ್ಮ ಅದೇ ಸಂದರ್ಭದಲ್ಲಿ ಹೇಳಿತು. "ಹೌದು ನಾನಿದ್ದೇನೆ. ಅವರ ಕೈಯ ಮೇಲೆ ಅಲ್ಲಾಹನು ಮುಸಲ್ಮಾನರ ವಿಜಯವನ್ನು ಬರೆಯುವನು ಮತ್ತು ಸತ್ಯವನ್ನು ಜಾಹೀರುಪಡಿಸುವನು. ಆದುದರಿಂದ ತಾವು ಮುಸಲ್ಮಾನರನ್ನು ಆಹ್ವಾನಿಸಿರುವುದು ಅತ್ಯಂತ ಶುಭ ಕಾರ್ಯವಾಗಿದೆ. ಮತ್ತು ಒಳ್ಳೆಯ ಸಂದರ್ಭವಾಗಿದೆ. ನೀವ ಜಂಡಿಯಾಲದ ಮುಸಲ್ಮಾನರೊಡನೆ ಅಷ್ಟೇ. ನಮ್ಮ ಕೆಲಸವಾಗಿದೆ. ಮತ್ತಾರೊಡನೆಯೂ ಅಲ್ಲ ಎಂಬ ಹಟ ಬಿಡುವಿರೆಂದು ಭಾವಿಸುತ್ತೇನೆ. ಜಂಡಿಯಾಲದಲ್ಲಿ ಯಾವೊಬ್ಬ ಖ್ಯಾತನಾಮದ ಪಂಡಿತರಿಲ್ಲ ಎಂಬುದು ನೀವು ತಿಳಿದೆ ಇದ್ದೀರಿ. ಹೀಗಿರುವಾಗ ಜನಸಾಮಾನ್ಯರೊಂದಿಗೆ ತರ್ಕವಿತರ್ಕಕ್ಕೆ ಇಳಿಯುವುದು ನಿಮ್ಮ ಘನತೆಗೆ ತಕ್ಕುದಲ್ಲ. ಈ ವಿನೀತನ ಬಗ್ಗೆಯೂ ನೀವು ಬಲ್ಲವರಾಗಿದ್ದೀರಿ. ನಿಮ್ಮೊಡನೆ ಚರ್ಚಿಸಲು ಹತ್ತು ವರ್ಷಗಳಿಂದ ಕಾತುರರಾಗಿದ್ದೇವೆ. ನಾನು ಸಂಪೂರ್ಣ ಹತ್ತು ವರ್ಷಗಳಿಂದ ಈ ಮೈದಾನದಲ್ಲಿ ನಿಂತಿರುವೆನು. ನನ್ನ ದೃಷ್ಟಿಯಲ್ಲಿ ಜಂಡಿಯಾಲದಲ್ಲಿ ಒಬ್ಬನೇ ಒಬ್ಬ ಯೋಧನೆಂದು ಕರೆಯುವಂತಹ ವ್ಯಕ್ತಿ ಇಲ್ಲ. ಆದುದರಿಂದ ತುಂಬ ವಿನಯದಿಂದ ಯಾಚಿಸುವೆನು. ಈ ದಿನೆ ದಿನೆ ಕಥೆಗಳನ್ನು ಮುಗಿಸಬಯಸುವುದಾದರೆ, ಯಾವ ಧರ್ಮದೊಂದಿಗೆ ದೇವನಿದ್ದಾನೆ, ಯಾರು ಸತ್ಯ ದೇವನ ಮೇಲೆ ವಿಶ್ವಾಸ ಹೊಂದಿದವರಾಗಿದ್ದಾರೆ. ಅವರ ಸ್ಪಷ್ಟ ಸಾಕ್ಷ್ಯಗಳು ದೊರೆಯಬೇಕಾದರೆ ಈ ವಿನಿತನೊಡನೆ ಸಂಪರ್ಕಿಸಿರಿ." (ಅದೇ ಪುಟ 65).

ಡಾ॥ ಪಾದರಿ ಆಥಮ್ ಮುಬಾಹಲಕ್ಕಾಗಿ ತಯಾರು ಆಗಲಿಲ್ಲ. ಅಬ್ದುಲ್ಲ ಆಥಂ ಅವರು ಬರೆದರು. ನಾವು ಪವಾಡಗಳನ್ನು ಬಯಸುವುದಿಲ್ಲ. ಪವಾಡಗಳನ್ನು ತೋರಿಸುವ ಶಕ್ತಿಯೂ ನಮ್ಮಲ್ಲಿಲ್ಲ. ಆದರೆ ನೀವಾಗಿ ಯಾವುದಾದರೂ ಪವಾಡ ತೋರಿಸಿದರೆ ನಾವೇನು ಕಣ್ಣು ಮುಚ್ಚಿಕೊಳ್ಳುವುದಿಲ್ಲ. ಮತ್ತು ಎಷ್ಟರ ಮಟ್ಟಿಗೆ ಸುಧಾರಿಸಿಕೊಳ್ಳಬಹುದು ಅಷ್ಟನ್ನು ಸುಧಾರಿಸಿಕೊಳ್ಳುವುದು ತಮ್ಮ ಕರ್ತವ್ಯವೆಂದು ಭಾವಿಸುವೆವು. ಸುಧಾರಣೆಯೂ ಅವರ ಹಣೆಬರಹದಲ್ಲಿ ಇರಲಿಲ್ಲ ಇಸ್ಲಾಂ ಮತ್ತು ಸಯ್ಯದನಾ ಹಜ್‌ರತ್ ಮಸೀಹ್ ಮೌಊದ್(ಅ) ರವರ ಸಾಕ್ಷ್ಯಕ್ಕೆ ಪಾತ್ರರಾಗುತ್ತ ಅವಮಾನಿತರಾಗಿ ಇಹಲೋಕ ತ್ಯಜಿಸುವುದು ಅವರ ವಿಧಿಯಾಗಿತ್ತು. ಮುಂದೆ ಇನ್‌ಷಾ ಅಲ್ಲಾಹ್ ಸಯ್ಯದನಾ ಹಜ್‌ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥಾಹ್ವಾನ ನಾವು ಓದುಗರಿಗೆ ಪ್ರಸ್ತುತಪಡಿಸುವೆವು.

**(ಮನ್‌ಸೂರ್ ಅಹ್ಮದ್ ಮಸ್‌ರೂರ್)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಆಗ ಹುಝೂರ್ ಹೇಳಿದರು. ಅಹ್ಮದಿಯಾ ಜಮಾಅತಿನ ಪೋಲೀಸ್ ಆಗಿದ್ದರೆ ಆಗಬಹುದು? ನಿಮ್ಮಲ್ಲಿ ಯಾರಿಗಾದರೂ ಪೋಲೀಸ್ ಆಗುವ ಇಷ್ಟವಿದ್ದರೆ, ಕೆಲವು ಬೇರೆ ವಿಭಾಗಗಳಲ್ಲಿ ಹೋಗಬಯಸುವುದಾದರೆ ಅನುಮತಿ ಪಡೆದು ಹೋಗಬಹುದಾಗಿದೆ. ಇಲ್ಲವಾಗಿದ್ದಲ್ಲಿ ಇಲ್ಲ. ಇದು ತತ್ವಧಾರಿತ ನಿರ್ಣಯವಲ್ಲ. ಪ್ರತಿಯೊಬ್ಬನು ವೈಯಕ್ತಿಕ ಪ್ರತ್ಯೇಕ ನಿಲುವು ತಾಳಲು ಆಗುವುದಿಲ್ಲ.

* ಒಬ್ಬ ವಾಖಿಫೆ ನೌ ಪ್ರಶ್ನೆ ಕೇಳಿದನು. ನಾವು ಮೃತಪಟ್ಟಾಗ ನಮ್ಮ ಆತ್ಮ ಮೇಲೆ ಹೋಗುವುದು ಆಗ ನಾವು ಅಲ್ಲಾಹನನ್ನು ಕಾಣಬಹುದೇ?

ಆಗ ಹುಝೂರ್ ಹೇಳಿದರು. ಮರಣದ ಬಗ್ಗೆ ಇತ್ತೀಚೆಗೆ ಜರ್ಮನಿಯವರು ಬಹಳ ಒತ್ತು ಕೊಡುತ್ತಿದ್ದಾರೆ. ನಾವು ಜೀವಂತರಾಗಿದ್ದೇವೆ. ಈಗ ಜೀವಂತ ಲೋಕದಲ್ಲಿ ವಾಸಿಸುತ್ತಿದ್ದೇವೆ. ಜೀವನದ ಬಗ್ಗೆ ಗಮನಹರಿಸಿರಿ, ಹೌದು, ಮುಂದಿನ ಲೋಕದ ಚಿಂತೆಯಿದ್ದರೆ ಅದು ಅತ್ಫಾಲರ (ಬಾಲಕರ) ಬದಲು ಅನ್ಸಾರರಿಗೆ ಹೆಚ್ಚಿರಬೇಕು.

ಹುಝೂರ್ ಆ ಪ್ರಶ್ನೆಯ ಉತ್ತರ ನೀಡುತ್ತಾ ಹೇಳಿದರು. ಅಲ್ಲಾಹನು ಪ್ರಶ್ನಿಸಿ ಉತ್ತರ ಕೇಳುವಾಗ ಯಾವ ರೂಪದಲ್ಲಿರಬಹುದು. ಯಾವ ಆಕಾರವಿರಬಹುದು. ಅದು ಅಲ್ಲಾಹನೇ ಬಲ್ಲನು. ಅವನು ನಿಮಗೆ ಯಾವ ರೂಪದಲ್ಲಿ ಕಾಣುವನೋ, ಅಲ್ಲಾಹನು ಹೇಳುತ್ತಾನೆ. ನಾನು ಪ್ರಶ್ನೆ ಉತ್ತರಗಳನ್ನು

ಕೇಳುವವನಾಗಿದ್ದೇನೆ ಎಂದು. ನೀವು ಸತ್ಕರ್ಮಗೈಯುವವರಾಗಿದ್ದರೆ ಅವನು ಸ್ವರ್ಗಕ್ಕೆ ಹೋಗಲು ಆದೇಶಿಸುವನು.

ಹುಝೂರ್ ಹೇಳಿದರು. ಒಂದು ದೀರ್ಘವಾದ ಹದೀಸಿದೆ ಅದರಲ್ಲಿ ಹೀಗೆ ವಿವರಿಸಲಾಗಿದೆ ಅದನ್ನು ನಾನು ಸಂಕ್ಷಿಪ್ತವಾಗಿ ವಿವರಿಸುತ್ತಿದ್ದೇನೆ: ಒಬ್ಬನನ್ನು ನರಕದಿಂದ ತೆಗೆಯಲಾಗುವುದು, ಮತ್ತೆ ಒಂದು ದೃಶ್ಯ ತೋರಿಸಲು step, ಮೊಂದೆ ಸ್ವರ್ಗದ ಬಾಗಿಲು ತಲುಪುವನು. ಆಗ ದಾಸನು ಕೇಳುವನು. ಮತ್ತು ಬಾಗಿಲುವರೆಗೆ ತಲುಪಿದ್ದು ತೋರಿಸಿದ್ದಾನೆ. ಹೀಗೆ ನಾನು ಇಣುಕಿ ಒಳಗೆಯೂ ನೋಡುತ್ತಿದ್ದೇನೆ. ಜನರು ಸಂತುಷ್ಟವಾಗಿದ್ದಾರೆ. ಇನ್ನು ಸ್ವಲ್ಪ ಒಳಗೆ ಹೋಗಿ ಇನ್ನು ಸಮೀಪದಿಂದ ನೋಡಬೇಕು? ಆಗ ಅಲ್ಲಾಹನು ನಕ್ಕು ಹೇಳುವನು. ನಿಮಗೆ ಹೋಗಲು ಹೆಚ್ಚು ತವಕವಿದೆ. ನಾನು ಕ್ಷಮಿಸಿದ್ದೇನೆ. ಸ್ವರ್ಗಕ್ಕೆ ಹೋಗು, ಹೀಗೆ ಇದೊಂದು ದೀರ್ಘವಾದ ಹದೀಸಿದೆ. ಅದರ ಸಾರಾಂಶ ಹೇಳಿದ್ದೇನೆ.

* ಒಬ್ಬ ವಾಖಿಫೆ ನೌ ಬಾಲಕನು ಪ್ರಶ್ನೆ ಕೇಳಿದನು. ಅಹ್ಮದಿ ಬಾಲಕರಿಗೆ smart phone ತೆಗೆದುಕೊಳ್ಳಲು ಅನುಮತಿ ಇದೆಯೇ?

ಆಗ ಹುಝೂರ್ ಹೇಳಿದರು. ಅಹ್ಮದಿ ಬಾಲಕರಿಗೆ smart phone ತಪ್ಪು ಬಳಕೆ ಮಾಡುವುದಿಲ್ಲ ಎಂಬ ಶರತ್ತಿನೊಂದಿಗೆ ಅನುಮತಿಯಿದೆ. ನಿಮ್ಮ ತಂದೆ ತಾಯಿಯರು ಅದನ್ನು ಒಪ್ಪಬೇಕು. ಆದರೆ ನೀವು ದಿನವೆಲ್ಲ chat ಮಾಡುತ್ತಿರಲು, ನೋಡುತ್ತಿರಲು ತಪ್ಪು ರೀತಿಯ applicatioins ಅದರೊಳಗೆ ಸೇರಿಸಿ ಒಬ್ಬ ಸಾತ್ವಿಕ ಮನುಷ್ಯನಾಗುವ ಬದಲು ಅನಾವಶ್ಯಕ ಮಾತುಗಳನ್ನು ಕಲಿಯುವುದಾದರೆ ನಮ್ಮ ಭಾವನೆಯಲ್ಲಿ ಅನುಮತಿಯಿಲ್ಲ. ಹೀಗಾಗಬಾರದು ಆದರೆ ನಿಮ್ಮ ಸ್ಥಿತಿಗತಿ ನೊಡಿ. ನಿಮ್ಮ ತಾಯಿ ತಂದೆ ನಿರ್ಣಯ ಕೈಗೊಳ್ಳಬಹುದು. ನಿಮಗೆ ಕೊಡಿಸಬಹುದು ಅಥವಾ ಬೇಡ. ನೀವು ನನ್ನ ಈ ಶರತುಬದ್ಧ ಅನುಮತಿ ಪಡೆದು ತಂದೆ ತಾಯಿಯರಿಗೆ ಅನುಮತಿ ಸಿಕ್ಕಿದೆ ಎಂದು ಒತ್ತಡ ಹೇರಬಾರದು.

* ಒಬ್ಬ ವಾಖಿಫೆ ನೌ ಬಾಲಕ ಪ್ರಶ್ನೆ ಮಾಡಿದನು. Facebook ಉಪಯೋಗ ಏಕೆ ಮಾಡಬಾರದು?

ಆಗ ಹುಝೂರ್ ಹೇಳಿದರು ಇದು ಶರಯಿ (ಧಾರ್ಮಿಕ) ಆಜ್ಞೆ ಅಲ್ಲ. ಶರೀಅತಿನಲ್ಲಿ ನಿಷಿದ್ಧವಲ್ಲ. ನಾನು ಇದರಿಂದ ತಡೆಯಲು ಕಾರಣವೇನೆಂದರೆ ಇತ್ತೀಚೆಗೆ ಫೇಸ್‌ಬುಕ್‌ನಲ್ಲಿ ಒಳಿತಿಗಿಂತ ಕೆಡುಕುಗಳನ್ನು ಹೆಚ್ಚು ಕೇಳಿಬರುತ್ತಿವೆ. ಆದರೆ ಅಹ್ಮದಿಯಾ ಜಮಾಅತ್ ಫೇಸ್‌ಬುಕ್ ಅಕೌಂಟ್ ಮಡಿದೆ. ಅಹ್ಮದಿಯಾ ಜಮಾಅತಿನ alislam ಮೇಲೆ ಫೇಸ್‌ಬುಕ್ ಅಕೌಂಟ್ ಸಹವಿದೆ. ಅಹ್ಮದಿಯಾ ಜಮಾತಿನ ಇತರ ಉಪ ಸಂಘಟನೆಗಳಿವೆ. ಅವರು Facebook ಮಾಡಿರುತ್ತಾರೆ. ಕೆಲವರು ವೈಯಕ್ತಿಕವಾಗಿ, ಇಬ್ಬರು ನಾಲ್ವರು ಒಟ್ಟು ಸೇರಿ ತಮ್ಮ ಫೇಸ್‌ಬುಕ್ ಮಡಿರುತ್ತಾರೆ. ಅದರಿಂದ ಅವರು ಪ್ರಚಾರ ಮಾಡುತ್ತಾರೆ ಇದು ನಿಷಿದ್ಧ (ಹರಾಮ್) ಅಲ್ಲ. ಆದರೆ ಪ್ರಜ್ಞಾಪೂರ್ವಕವಾಗಿ ಅದರ ಉಪಯೋಗ ಮಾಡುವುದು ಅವಶ್ಯವಾಗಿದೆ. ಒಂದು ಮಿತಿಯೊಳಗೆ ಜಾಗ್ರತೆ ಮಾಡಬೇಕು. ನಿಮ್ಮಲ್ಲಿ ಪ್ರಜ್ಞೆ ಬಂದಾಗ ಅದರಲ್ಲಿ ಹೋಗಿ. ಏಕೆಂದರೆ ಫೇಸ್‌ಬುಕ್ ಮೂಲಕ ಎಷ್ಟೋ ಕೆಡುಕುಗಳು ಹರಡುತ್ತಿವೆ. ಫೇಸ್‌ಬುಕ್ ಮುಲಕ ಕೆಲವು ಹುಡುಗರನ್ನು ಕೆಲವು ಜನರು ತಪ್ಪು ದಾರಿಗೆ ಎಳೆದಿದ್ದಾರೆ. ಕೆಲವು ಹುಡುಗಿಯರಿಂದ ತಪ್ಪು ಕೆಲಸ ಮಾಡಿಸಿವೆ. ಮತ್ತು ಅವರನ್ನು black mail ಮಾಡುತ್ತಾರೆ. ಮತ್ತು ಅವರಿಗೆ ತಪ್ಪು ದಾರಿಯಲ್ಲಿ ನಡೆಸುತ್ತಾರೆ. ಜಮಾಅತ್‌ನಿಂದ ಅವರಿಗೆ ದೂರ ಮಾಡುತ್ತೇವೆ. ಇನ್ನು ಜಮಾಅತಿನ ಬಗ್ಗೆ ನಿಮಗೆ ಅಷ್ಟೊಂದು ಜ್ಞಾನವಿಲ್ಲ. ಮೊದಲು ಜಮಾಅತಿನ ಬಗ್ಗೆ ಸರಿಯಾಗಿ ತಿಳಿದುಕೊಳ್ಳಿ.

ಮತ್ತೆ ಯಾವುದೇ ಧಾರ್ಮಿಕ facebook ಮೇಲೆ ಹೋಗಬಹುದು. ಮತ್ತೆ ಲೌಕಿಕವಾಗಿಯೂ ಏಳುವ ಪ್ರಶ್ನೆಗಳಿಗೆ ಉತ್ತರ ಕೊಡುವಷ್ಟು ಸಾಮರ್ಥ್ಯ ನಿಮ್ಮಲ್ಲಿ ಬರಬೇಕು. ಇನ್ನು ನೀವು ಪ್ರಶ್ನೆಗೆ ಉತ್ತರ ಕೊಡಲಾರಿರಿ. ನಿಮಗೆ ನಿಮ್ಮ ತಂದೆ ತಾಯಿ ಸಹ ಆ ಪ್ರಶ್ನೆಗೆ ಉತ್ತರ ಕೊಡಲಾಗುವುದಿಲ್ಲ. ಆಗ ನೀವು Facebook ನವರು ಹೇಳುತ್ತಿರುವುದು ಸರಿ ಎಂದು ಭಾವಿಸುವಿರಿ. ನಿಮಗೆ ಸ್ವಯಂ ಸಂಶೋಧನೆ ಮಾಡಬೇಕಾಗಿದೆ. ಜಮಾಅತಿನ ವಿದ್ಯಾವಂತರಿಂದ, ಮುರಬ್ಬಿಯವರಿಂದ ತಿಳಿದುಕೊಳ್ಳಬೇಕು. ಏಕೆಂದರೆ Facebook ಮೇಲೆ ಬಹಳಷ್ಟು ಮಾತುಗಳು ಕೆಟ್ಟದಾಗಿ ಬರುತ್ತಿವೆ ಮತ್ತು ಅಶ್ಲೀಲತೆಯಾಗಿರುತ್ತದೆ. ಯೂರೋಪಿನಲ್ಲಿ ಎಷ್ಟೋ ಜನರಿದ್ದಾರೆ. ಅವರು ಹೇಳುತ್ತಾರೆ. ನಾವು Facebook ನಿಂದ ದಾರಿತಪ್ಪಿದ್ದೇವೆ ಎಂದು. ಆದುದರಿಂದಲೇ ನಾನು ಹೇಳುತ್ತಿರುವುದು ಅದರಿಂದ ದೂರಯಿರಬೇಕಾಗಿದೆ. ನಿಮ್ಮ ವಯಸ್ಸು ಇನ್ನು ಅಷ್ಟು ಆಗಲಿಲ್ಲ. Facebook ನಲ್ಲಿ ಹೋಗಲೇಬೇಕಾದರೆ ಜಮಾಅತಿಗೆ Facebook ಮೇಲೆ ಹೋಗಿ.

* ಒಬ್ಬ ಬಾಲಕನು ಹೇಳಿದನು. ನಮಗೆ ಜರ್ಮನ್ ಅಥವಾ ಬೇರೊಬ್ಬರು ನಿಮಗೆ ಇಸ್ಲಾಮ್ ಧರ್ಮವೇ ಸತ್ಯಧರ್ಮವಾಗಿದೆ ಎಂದು ಹೇಗೆ ತಿಳಿದುಬಂತು ಎಂದರೆ ಹೇಗೆ ಉತ್ತರ ಕೊಡಬೇಕು?

ಈ ಪ್ರಶ್ನೆಯ ಉತ್ತರವಾಗಿ ಹುಝೂರ್ ಹೇಳಿದರು. ನೋಡಿ ಮೊದಲ ಮಾತೇನೆಂದರೆ ನಮ್ಮಲ್ಲಿ ಅತ್ಯಂತ ಜೀವಂತ ಪುರಾವೆ ಏನೆಂದರೆ ನಮ್ಮ ಬಳಿ ಪವಿತ್ರ ಖುರ್‌ಆನ್ ಇದೆ. ಅದು ದಾವೆ ಮಾಡುವುದೇನೆಂದರೆ ತನ್ನ Original ಸ್ವರೂಪದಲ್ಲಿ ಸುರಕ್ಷಿತವಾಗಿರುವುದು ಎಂದು. ಹದಿನಾಲ್ಕು, ಹದಿನೈದು ನೂರು ವರ್ಷಗಳು ಕಳೆದರೂ ಇದು ಸುರಕ್ಷಿತವಾಗಿದೆ. ತೌರಾಥ್, ಇಂಜೀಲ್ ಇತರ ಗ್ರಂಥಗಳು ಮತ್ತು ವಿಭಿನ್ನ ಪ್ರವಾದಿಗಳ ಮೇಲೆ ಅವತರಿಸಿದ ಪುಸ್ತಕಗಳು ಒಂದು ತಕ್ಕಮಟ್ಟಿಗೆ, ಎಲ್ಲಿಯವರೆಗೆ ಅದರ ಅವಶ್ಯಕತೆಯಿತ್ತು, ಸುರಕ್ಷಿತವಾಗಿದ್ದವು. ಅನಂತರ ಅದು ಪರಿವರ್ತನೆಗೊಂಡಿದೆ. ಬೈಬಲ್ ಯಥಾಸ್ಥಿತಿಯಲ್ಲಿ ಇಲ್ಲ, ತೌರಾತೂ ಇಲ್ಲ. ಆದುದರಿಂದಲೇ ಹಝ್‌ರತ್ ರಸೂಲುಲ್ಲಾಹ್(ಸ) ರವರ ಕಾಲದಲ್ಲಿ ಯಹೂದಿಯರು ಅದರ ಮೇಲೆ ನಡೆದುಕೊಳ್ಳುತ್ತಿರಲಿಲ್ಲ. ಆದರೆ ಪವಿತ್ರ ಖುರ್‌ಆನ್‌ವಾದವು. ಇದು ಎಲ್ಲ ಕಾಲಕ್ಕೂ ಸುರಕ್ಷಿತವಾಗಿರುವುದು ಎಂದಾಗಿದೆ. ಅದು ಇಂದಿಗೂ ಸುರಕ್ಷಿತವಾಗಿದೆ. ನಿಮ್ಮ ಬಳಿ ಮುದ್ರಿತ ರೂಪದಲ್ಲಿ, ಗ್ರಂತದ ರೂಪದಲ್ಲಿ ಸುರಕ್ಷಿತವಾಗಿದೆ. ಹಲವು ಖುರ್‌ಆನ್ ಕಂಠಸ್ಥ ಮಾಡಿದವರು (ಹಾಫಿಝ್) ಇದ್ದಾರೆ. ಸಾವಿರಾರು, ಲಕ್ಷೋಪ ಸಂಖ್ಯೆಯಲ್ಲಿ ಹಾಫಿಝ್ ಖುರಆನ್ (ಖುರ್‌ಆನ್ ಕಂಠಸ್ಥ ಮಾಡಿದವರು) ಇಸ್ಲಾಮಿನಲ್ಲಿದ್ದಾರೆ. ಅಲ್ಲದೇ ನಾವು ಐದು ಹೊತ್ತಿನ ನಮಾಝುಗಳಲ್ಲಿ ಅದರ ವಚನಗಳು ಪಠಿಸುತ್ತೇವೆ. ಪವಿತ್ರ ಖುರ್‌ಅನ್ ಪಠಣ ಮಾಡುತ್ತೇವೆ. ಅಂದರೆ ಇದೊಂದು ಬಹುದೊಡ್ಡ ಪುರಾವೆ ಆಗಿದೆ. ಪವಿತ್ರ ಖುರ್‌ಆನ್ ಮೂಲಕ ಲಭಿಸಿದ ಶರೀಅತ್ ಸತ್ಯವಾದ ಶರೀಅತ್ ಆಗಿದೆ ಎಂದು. ಯಾವಾಗಲೂ ಸದಾ ಸುರಕ್ಷಿತವಾಗಿರುವುದು ಎಂಬ ವಾದವಿತ್ತು, ಅದು ಪೂರ್ತಿಯಾಗಿದೆ. ಇದೊಂದು ಮಹತ್ತರವಾದ ಸಾಕ್ಷ್ಯವಾಗಿದೆ. ಇಸ್ಲಾಮಿನ ಪುನರುತ್ಥಾನಕ್ಕಾಗಿ (Review) ಅದನ್ನು ಹೊಸದಾದ ರೀತಿಯಲ್ಲಿ ಜಾರಿ ಮಾಡಲು ಹಝ್‌ರತ್ ರಸೂಲುಲ್ಲಾಹ್ (ಸ) ಭವಿಷ್ಯವಾಣಿ ನುಡಿದಿದ್ದರು. ಅದರಂತೆ ಹಝ್‌ರತ್ ಮಸೀಹ್ ಮೌಊದ್ (ಅ) ಆಗಮಿಸಿದರು. ಅವರು ವಾದಿಸಿದರು ಮತ್ತು ಅಹ್ಮದಿಯಾ ಜಮಾಅತ್ ಸ್ಥಾಪನೆಯಾಯಿತು. ಮತ್ತು ನಾವು ಅಲ್ಲಾಹನ ಅನುಗ್ರಹದಿಂದ ಜಮಾಅತಿನ ಕೆಲಸ, ಇಸ್ಲಾಮಿನ ಪ್ರಗತಿಯ ಕಾರ್ಯಗಳನ್ನು ಮುಂದುವರೆಸುತ್ತಿದ್ದೇವೆ. ಇನ್ನಿತರ ಜನರು ಇಸ್ಲಾಮಿನ ಪಥದಲ್ಲಿ ನಡೆದುಕೊಂಡು ತಮ್ಮ ಮಿಷನ್ ಅನ್ನು ಮುಂದೆ ಪ್ರಚಾರ ಮಡುತ್ತಿಲ್ಲ. ಉದಾಹರಣೆಗೆ ಕ್ರೈಸ್ತ ಧರ್ಮವಿದೆ, ಒಂದು ಕಾಲದಲ್ಲಿ ಹರಡಿದರೂ ಅದು ಕೇವಲ ಜನರ ಸ್ವಭಾವನುಗುಣವಾಗಿ ತಮ್ಮ ಶಿಕ್ಷಣವನ್ನು ಬದಲಿಸಿಕೊಂಡರು. ಆಫ್ರಿಕಾದಲ್ಲಿ ಒಂದು ರೀತಿಯಲ್ಲಿ ಶಿಕ್ಷಣ ನೀಡುತ್ತಿದ್ದಾರೆ. ಯೂರೋಪಿನಲ್ಲಿ ಇನ್ನೊಂದು ರೀತಿಯಲ್ಲಿ ಶಿಕ್ಷಣ ನೀಡುತ್ತಿದ್ದಾರೆ, ಮತ್ತೆ ನಿಧಾನವಾಗಿ ಧರ್ಮವನ್ನು ತ್ಯಜಿಸುತ್ತಿದ್ದಾರೆ ಮತ್ತು ಇಸ್ಲಾಮ್ ಸ್ವೀಕರಿಸಲು ಮುಂದಾಗುತ್ತಿದ್ದಾರೆ. ಅಲ್ಲಾಹನ ಅನುಗ್ರಹದಿಂದ ಸಾವಿರಾರು ಲಕ್ಷೋಪ ಜನರು ಪ್ರತಿ ವರ್ಷ ಅಹ್ಮದಿ ಮುಸಲ್ಮಾನರಾಗುತ್ತಿದ್ದಾರೆ. ಇದು ಸಾಧಾರಣ ರೀತಿಯ ಮಾತುಗಳನ್ನು ಅವರಿಗೆ ತಿಳಿಸಿ. ಇದು ಸತ್ಯ ಸಾಕ್ಷ್ಯಗಳಾಗಿವೆ. ಮತ್ತೆ ಪ್ರಾರ್ಥನೆಗಳು ಸ್ವೀಕಾರವಾಗುತ್ತಿವೆ. ಅಲ್ಲಾಹನು ಅಹ್ಮದಿಯರ ಪ್ರಾರ್ಥನೆಗಳನ್ನು (ದುಆ) ಸ್ವೀಕರಿಸುತ್ತಾನೆ. ನಿಮ್ಮ ದುಆ ಎಂದಾದರೂ ಸ್ವೀಕೃತಗೊಂಡಿದೆಯೇ? ಆಗ ಆ ಬಾಲಕ ತಲೆ ಅಲ್ಲಾಡಿಸಿದನು. ಆಗ ಹುಝೂರ್ ಹೇಳಿದರು. ಇದೊಂದು ಸತ್ಯವಾಗಿದೆ. ಬಹಳಷ್ಟು ಸಾಕ್ಷ್ಯಗಳನ್ನು ನೀಡಿರಿ ಮತ್ತು ತಮ್ಮ ಪ್ರಾರ್ಥನೆ ಸ್ವೀಕಾರದ ಸಾಕ್ಷ್ಯವೂ ನೀಡಿರಿ.

(ಮುಂದುವರಿಯುವುದು)

**ಹಝ್‌ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್**

**ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್‌ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂ. 1; ರೂಹಾನೀ ಖಝಾಇನ್ ಸಂಪುಟ 17, ಪುಟ 345)***

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

**Love for All, Hatred for None**
**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 11 February 2021, Issue No. 06

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 04ರ ವರದಿಯ ಉಳಿದ ಭಾಗ)**

* ಒಬ್ಬ ಬಾಲಕ ಕೇಳಿದನು. ನಾನು ಕವನದ ಎರಡು ಪಂಕ್ತಿಗಳನ್ನು ಓದಬಹುದೇ. ಏಕೆಂದರೆ ನನ್ನ ಅಜ್ಜನಿಗೆ ಮಾತುಕೊಟ್ಟು ಬಂದಿದ್ದೇನೆ.

ಆಗ ಹುಝೂರ್ ಹೇಳಿದರು. ಮಾತಿಗೆ ತಪ್ಪಿದರೆ ಏನು ಹೇಳುತ್ತಿದ್ದರು, ಹೊಡೆಯುತ್ತೇನೆ ಅಂದರು? ಆಯಿತು ಓದಿ.

ಪಾಠ ಕಲಿಸಲು ಒಂದು ಕಾಗೆಯನ್ನು ಕಳುಹಿಸಿದನು. ಮತ್ತು ಶವವನ್ನು ಹೇಗೆ ಹೂಳಬೇಕೆನ್ನುವುದು ಕಲಿಸಿಕೊಟ್ಟನು. ಅದು ಭೂಮಿಯನ್ನು ಕೆರೆಯಿತು. ಅವನು ಹೇಳಿದನು. ನಾನು ಎಷ್ಟು ನತದೃಷ್ಟನಾಗಿದ್ದೇನೆ. ತನ್ನ ಮೃತನನ್ನು ನಾನು ಗೌರವಿಸಲಿಲ್ಲ. ಸಹೋದರನೊಬ್ಬನನ್ನು ಕೊಂದುಬಿಟ್ಟೆ. ಅದರ ಮೇಲೆ ಗೌರವವೂ ಸೂಚಿಸಲಿಲ್ಲ. ಅದರ ಗೌರವವೆಂದರೆ ಭೂಮಿಯಲ್ಲಿ ಹೂಳುವುದು, ನೀವು ಹೂಳಿದರೆ ಅದರ ನೆನಪು ಉಳಿಯುತ್ತದೆ. ಮತ್ತೆ ಅಲ್ಲಿ ಹೋಗಿ ದುಆ ಸಹ ಮಾಡಬಹುದು.

ಒಬ್ಬ ವಾಖಿಫೆ ನೌ ಪ್ರಶ್ನೆ ಮಾಡಿದನು. ಹುಝೂರರಿಗೆ ಪಾಕಿಸ್ತಾನ ಹೋಗಲು ಅನುಮತಿ ದೊರೆತರೆ ಹುಝೂರ್ ಎಲ್ಲಿ ಇರುವುದನ್ನು ಹೆಚ್ಚು ಇಷ್ಟಪಡುವರು. ಇಂಗ್ಲೆಂಡ್ ಅಥವ ಪಾಕಿಸ್ತಾನ?

ಆಗ ಹುಝೂರ್ ಹೇಳಿದರು. ಪಾಕಿಸ್ತಾನದಲ್ಲಿ ಇರುವುದಕ್ಕೆ ಅನುಮತಿ ಕೊಡಿಸಿ, ಪಾಕಿಸ್ತಾನಕ್ಕೆ ಹೋಗುತ್ತೇನೆ. ಪಾಕಿಸ್ತಾನದಲ್ಲಿ ಇರಲು ಅನುಮತಿ ಅಂತೂ ನಮಗೆ ಇದೆ. ಆದರೆ ಪಾಕಿಸ್ತಾನದಲ್ಲಿದ್ದು ನಮಾಝ್ ಮಾಡಲು ಸಾಧ್ಯವಿಲ್ಲ. ಖುತುಬ ನೀಡಲು ಸಾಧ್ಯವಿಲ್ಲ ಯಾವ ಕೆಲಸವು ಮಾಡುವ ಹಾಗಿಲ್ಲ. ನನ್ನ ಕರ್ತವ್ಯಗಳನ್ನು ಪಾಲಿಸುವ ಹಾಗಿಲ್ಲ. ಆದುದರಿಂದ ಎಂದಾದರೂ ಪರಿಸ್ಥಿತಿಗಳು ಉತ್ತಮವಾಗುವುದೋ, ಮತ್ತು ಯಾವ ಖಿಲಾಫತ್ ಅವಧಿಯಲ್ಲಾದರೂ, ಅಲ್ಲಾಹನೇ ಸರಿಯಾಗಿ ಬಲ್ಲವನು. ಆಗ ನನ್ನ ಭಾವನೆಯಲ್ಲಿ ಕೆಲ ಅವಧಿಗೋಸ್ಕರ ಖಲಿಫತುಲ್ ಮಸೀಹ್ ಪಾಕಿಸ್ತಾನ ಹೋಗುವರು, ಅಥವಾ ನನಗೆ ಸಂದರ್ಭ ಒದಗಿ ಬಂದರೆ ನಾನು ಹೋಗುವೆನು. ಆದರೆ ಲೌಕಿಕ ವ್ಯವಸ್ಥೆಯಲ್ಲಿ ಮತ್ತು ಅಹ್ಮದಿಯಾ ಜಮಾಅತಿನಲ್ಲಿ ಯಾವ ರೀತಿಯ ವೈಶಾಲ್ಯತೆ ಉಂಟಾಗಿದೆಯೇ ಮತ್ತು ಈ ದೇಶಗಳು ಪ್ರಗತಿ ಹೊಂದಿದೆಯೋ ಆ ಮಟ್ಟಕ್ಕೆ ಪಾಕಿಸ್ತಾನ ಪ್ರಗತಿ ಹೊಂದಿದರೆ, ಯೂರೋಪಿನಲ್ಲಿ ಮತ್ತೆ ಕೆಲ ಅವಧಿ ಅಲ್ಲಿಯೂ ಇರುವುದು, ಉಳಿದದ್ದು ಇಲ್ಲಿಂದ ನಿಯಂತ್ರಿಸುವುದು ಸುಲಭ ಸಾಧ್ಯವಾಗಿದೆ. ಎಲ್ಲರೊಂದಿಗೆ ಸರಿಯಾದ ರೀತಿಯಲ್ಲಿ ಸಂಪರ್ಕ ಬೆಳೆಸಬಹುದು. ನನ್ನ ಯೋಚನೆ ಎಂದರೆ ಈಗ ಇಂಗ್ಲೆಂಡ್‌ನಲ್ಲಿ ಒಂದು ವೇದಿಕೆ ಒದಗಿದೆ, ಹೆಚ್ಚಿನ ಕೆಲಸ ಇಲ್ಲಿಂದಲೇ ಆಗುವುದು. ಆದರೆ ಖಾದಿಯಾನ್ ಮತ್ತು ಪಾಕಿಸ್ತಾನ ಹೋಗುತ್ತ ಬರುತ್ತ ಇರುವೆನು. ಆದುದರಿಂದ ನಮಗೆ ಯು.ಕೆ ಯಲ್ಲಿಯೂ ತನ್ನ ಕೇಂದ್ರವನ್ನು ವಿಶಾಲಗೊಳಿಸಬೇಕು.

* ಒಬ್ಬ ವಾಖಿಫೆ ನೌ ಪ್ರಶ್ನೆ ಮಾಡಿದನು. ಹುಝೂರ್ ನೀವು ಇಷ್ಟೆಲ್ಲ ಜಮಾಅತಿನ ಕೆಲಸ ಮಾಡುತ್ತೀರಿ. ನಿಮ್ಮಲ್ಲಿ Free time ಇರುತ್ತದೆಯೇ?

ಆಗ ಹುಝೂರ್ ಹೇಳಿದರು. ಮಲಗಿದರೆ ಮಾತ್ರ Free time ಇರುತ್ತದೆ. ಕೆಲಸಗಳಿರುತ್ತವೆ. ಆದರೆ ಅದರೊಳಗೆಯೇ ಸ್ವಲ್ಪ ಸಮಯ ತೆಗೆಯಬೇಕಾಗುತ್ತದೆ. ವರ್ಷದಲ್ಲಿ ಒಂದೆರಡು ಸಲ cutting ಸಹ ಮಾಡಬೇಕಾಗುತ್ತದೆ. ನನಗೆ Shooting ಅಭಿರುಚಿಯಿದೆ. ಒಮ್ಮೊಮ್ಮೆ ಎರಡು ಮೂರು ಗಂಟೆಗೋಸ್ಕರ shooting ಮೇಲೆ ಹೋಗುತ್ತೇನೆ.

* ಒಬ್ಬ ವಾಖಿಫೆ ನೌ ಪ್ರಶ್ನೆ ಮಾಡಿದನು. ನಿಮಗೆ ಅಲ್ಲಾಹನಿಂದ ಏನಾದರೂ ಸಂದೇಶ ಲಭಿಸಿದಾಗ ನಿಮಗೆ ಹೇಗೆ ತಿಳಿಯುವುದು.

ಆಗ ಹುಝೂರ್ ಹೇಳಿದರು. ಎಲ್ಲ ಒಳ್ಳೆಯ ವಿಚಾರಗಳು ಅಲ್ಲಾಹನೇ ಹಾಕುತ್ತಿರುತ್ತಾನೆ. ಮತ್ತೆ ಹಾಗೆ ನಂತರ ಅದನು ಮಾಡಲು ಪ್ರೇರಣೆ ಸಿಗುತ್ತದೆ. ನಮಾಝ್ ನಿರ್ವಹಿಸುವ ಮಧ್ಯೆ ಉದಾಹರಣೆಗೆ ಕೆಲವು ಸಂದರ್ಭದಲ್ಲಿ ಒಂದೆಡೆ ಹೆಚ್ಚು ಗಮನವಹಿಸುವ ಅಗತ್ಯ ಕಂಡರೆ ಆಗ ಇದು ಅಲ್ಲಾಹನ ಕಡೆಯಿಂದ ಎಂದು ತಿಳಿದುಬರುತ್ತದೆ.

ಅದೆ ಹುಡುಗನು ಮತ್ತೊಂದು ಪ್ರಶ್ನೆ ಕೇಳಿದನು. ಹುಝೂರರಿಗೆ ದೇವಧೂತರು ಕಂಡುಬರುತ್ತಾರೆಯೇ?

ಆಗ ಹುಝೂರ್ ಹೇಳಿದರು. ದೇವದೂತರು ಕಂಡುಬರುವುದಿಲ್ಲ. ಹಝ್ರತ್ ರಸೂಲುಲ್ಲಾಹ್(ಸ) ರವರ ಬಳಿ ಜಿಬ್ರೀಲ್ ಬರುತ್ತಿದ್ದರು. ವಿವಿಧ ರೂಪದಲ್ಲಿ ಕಂಡುಬಂದರು. ಆದರೆ ವಿವಿಧ ಪ್ರವಾದಿಗಳಿಗೆ ವಿವಿಧ ರೀತಿಯಲ್ಲಿ ದೇವಧೂತರು ಕಾಣಿಸಿಕೊಂಡರು. ಹುಝೂರ್(ಸ) ಪರವಾಗಿ, ಹುಝೂರ್(ಸ) ರೊಂದಿಗೆ ಅವರ ಸಹಾಬಿ ಒಂದು ಸಂದರ್ಭದಲ್ಲಿ ಒಬ್ಬ ದೇವದೂತರನ್ನು ಕಂಡರು, ಅವರಿಗೆ ಇಸ್ಲಾಮಿನ ಸ್ತಂಬಗಳು ಮತ್ತು ಈಮಾನಿನ ವಿಧಾನಗಳನ್ನು ಕಲಿಸಿಕೊಟ್ಟರು.

* ಒಬ್ಬ ಬಾಲಕನು ಹೇಳಿದನು. ನನ್ನ ಪ್ರಶ್ನೆ ಎಂದರೆ ಹುಝೂರರಿಗೆ ಜರ್ಮನಿಯಲ್ಲಿ ಏನೆಲ್ಲ ಕಂಡುಬರುತ್ತಿದೆ?

ಆಗ ಹುಝೂರ್ ಹೇಳಿದರು. ನೀವು, ಇಷ್ಟೆಲ್ಲ ಜನ ಕುಳಿತುಕೊಂಡಿದ್ದೀರಿ. ವಾಖಿಫೀನ್ ನೌ ಆಗಿದ್ದೀರಿ. ನೀವು ಅದರ ಭವಿಷ್ಯದ ಬಗ್ಗೆ ಏನು ಕಂಡುಬರುತ್ತಿದೆ ಎಂದು ಕೇಳುತ್ತಿದ್ದೀರೇನು?

ಹಾಗಿದ್ದಲ್ಲಿ ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತ್ ಜರ್ಮನಿಯ ಭವಿಷ್ಯ ಇನ್‌ಶಾಅಲ್ಲಾಹ್ ಉತ್ತಮವಾಗಿರುವುದು. ಜಮಾಅತ್ ಇಲ್ಲಿ ಪ್ರಗತಿ ಹೊಂದುವುದು ಮತ್ತು ಜರ್ಮನ್ ಸಮುದಾಯವು ಇನ್‌ಶಾಅಲ್ಲಾಹ್ ಅಹ್ಮದಿಯತ್ ಅಂದರೆ ನಿಜವಾದ ಇಸ್ಲಾಮ್ ಸ್ವೀಕರಿಸುವರು. ಯೂರೋಪಿನಲಿ ಸ್ವೀಕರಿಸುವವರ ಸಂಖ್ಯೆ ಪ್ರಥಮ ದರ್ಜೆಯಲ್ಲಿರಬಹುದು. ಈ ಕುರಿತು ನಾನು ಕುತುಬ ಜುಮಅ ಒಂದರಲ್ಲಿ ಹೇಳಿರುತ್ತೇನೆ. ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರೂ ಪ್ರಸ್ತಾಪಿಸಿದ್ದಾರೆ. ಉಳಿದವರು ಸಹ ಹೇಳಿರಬಹುದು.

* ಒಬ್ಬ ವಾಖಿಫೆ ನೌ ಹೇಳಿದನು. ಮನುಷ್ಯನು ಮೃತ್ಯು ಹೊಂದಿದಾಗ ಸ್ವರ್ಗವೋ ನರಕವೋ ಸೇರುತ್ತಾನೆ. ಪ್ರಾಣಿಗಳು ಸತ್ತಾಗ ಅವರೊಡನೆ ಏನಾಗುತ್ತದೆ?

ಆಗ ಹುಝೂರ್ ಹೇಳಿದರು. ಅವರಿಗೆ ಅಲ್ಲಾಹನು ಯಾವ ಕರ್ಮಗಳ ಸಾಮರ್ಥ್ಯ ನೀಡಲಿಲ್ಲ. ಸ್ವರ್ಗ ನರಕ ಏತಕ್ಕಾಗಿ, ಯಾರಿಗಾದರೂ ಶಿಕ್ಷೆ ಸಿಗುವುದು ಅವನ ಒಳಿತು ಅಥವಾ ಕೆಡುಕು ಕರ್ಮಗಳಿಂದಾಗಿ ಯಾರಿಗಾದರೂ award ದೊರೆಯಬೇಕಾದರೆ ಅವನ ಒಳ್ಳೆಯ ಕರ್ಮಗಳಿಂದಾಗಿ ಮತ್ತು ಶಿಕ್ಷೆ ದೊರೆಯಬೇಕೆಂದರೆ ಅವರ ಕೆಡುಕು ಕರ್ಮಗಳಿಂದಾಗಿ, ಸ್ವಲ್ಪವೇ ಸರಿ, ತಪ್ಪು ಮಾಡಿದರೆ ಶಾಲೆಗಳಲ್ಲಿಯೂ ಶಿಕ್ಷೆ ದೊರೆಯುತ್ತದೆ. ಪ್ರಾಣಿಗಳಿಗೆ ಇದರ ಅರಿವು ಇರುತ್ತದೆಯೋ, ನಾಯಿ ಬೆಕ್ಕಿಗೆ ಒಳ್ಳೆಯ ಕೆಟ್ಟ ಕೆಲಸ ಮಾಡಬೇಕು, ಮಾಡಬಾರದು ಎಂಬ ಬುದ್ಧಿ ಇರುವುದಿಲ್ಲ. ಅಲ್ಲಾಹನು ಅವರಿಗೆ ನೀಡಿದ ಗುಣಗಳಿಗಷ್ಟೇ ಸೀಮಿತವಾಗಿ ಕೆಲಸ ನಿರ್ವಹಿಸುತ್ತದೆ. ಆದುದರಿಂದ ಅದಕ್ಕೆ ಶಿಕ್ಷೆ ಪುರಸ್ಕಾರವೇನು ಇರುವುದಿಲ್ಲ.

* ಒಬ್ಬ ವಾಖಿಫೆ ನೌ ಬಾಲಕ ಹೇಳಿದನು. ನನ್ನ ಬಳಿ ಎರಡು ಪ್ರಶ್ನೆಗಳಿವೆ. ಮೊದಲ ಪ್ರಶ್ನೆ ಏನೆಂದರೆ ಮನುಷ್ಯನು ಮೃತಪಟ್ಟು ಅಲ್ಲಾಹನ ಬಳಿ ಹೊದಾಗ ಈಗ ಇದ್ದ ದೇಹವೇ ಇರುತ್ತದೆಯೇ?

ಆಗ ಹುಝೂರ್ ಹೇಳಿದರು. ನಿಮ್ಮ ದೇಹ ಭೂಮಿಯಲ್ಲಿ ಹೂತು ಹೋಗಿರುತ್ತದೆ. ಆತ್ಮ ಮೇಲೆ ಹೋಗುತ್ತದೆ. ಆತ್ಮ ಮೇಲೆ ಹೋದಾಗ ಅಲ್ಲಾಹನು ಅದಕ್ಕೆ ಒಂದು ಹೊಸ ಶರೀರ ನೀಡುತ್ತಾನೆ. ಅಲ್ಲಾಹನು ಬಯಸುವವರೆಗೆ ಆ ಶರೀರದಲ್ಲಿರಬೇಕು ಅಥವಾ ನರಕದಲ್ಲಿರಬೇಕು. ಶಿಕ್ಷೆ ಅನುಭವಿಸಬೇಕು ಅಥವಾ ಸ್ವರ್ಗ ಸೇರಬೇಕು ಅವನ ಅನುಗ್ರಹ ಪಡೆಯಲು. ಇಹಲೋಕ ದೇಹವು ಇಲ್ಲಿಯೇ ಇರುವುದು. ಪರಲೋಕದಲ್ಲಿ ಹೊಸ ಶರೀರ ದೊರಕುವುದು ಆತ್ಮ ಅದೇ ಇರುವುದು.

* ಬಾಲಕನು ಹೇಳಿದನು. ನನ್ನ ಎರಡನೆಯ ಪ್ರಶ್ನೆ ವಖ್ಫೆ ನೌ ಪೋಲೀಸ್ ಅಧಿಕಾರಿಯಾಗಬಹುದೇ?

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.